ಪುಸ್ತಕ ಪ್ರಪಂಚ

ನವಂಬರ್ ೧೯೯೯



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಈ ಸಾಲಿನ ಪಂಪ ಪ್ರಶಸ್ತಿ ಪುರಸ್ಕೃತರಾದ ಡಾ|| ಚನ್ನವೀರಕಣವಿ ಅವರಿಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಗಣ್ಯರಿಗೂ ಅಭಿನಂದನೆಗಳು.

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೫೦ ಸಂಚಿಕೆ ೨ ನವೆಂಬರ್ ೧೯೯೯

ಪರಿವಿಡಿ

ಮುಖಪುಟ ಚಿತ್ರ : ವಿ. ಸೀತಾರಾಮಯ್ಯ

ತಿದ್ದುಪಡಿ : ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾದ ಡಾ॥ ಎಂ. ಎಸ್. ಎಸ್. ಮೂರ್ತಿ ಅವರ "ಒಬ್ಬ ಬಾಲವಿಜ್ಞಾನಿಯ ರೋಮಾಂಚಕ ಕಥೆ" ಅನುವಾದ ಲೇಖನದ ಮೂಲ ಮೇ ೯೯ ರ ರೀಡರ್ಸ್ ಡೈಜೆಸ್ಟ್.

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Ten

ಬಿಡಿಪ್ರತಿ : ರೂ. ೧೦

ವಾರ್ಷಿಕ ಚಂದಾ : ರೂ. ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು—೫೭೦ ೦೦೬

ಮಹಾ ಚುನಾವಣೆ ೯೯—ಸುಭದ್ರ ಸರ್ಕಾರದ ಅಗತ್ಯ

ಚುನಾವಣೆಯ ಫಲಶ್ರುತಿ : ಇಂಡಿಯಾದ ನೆಲಬಾನುಗಳನ್ನೆಲ್ಲ ತುಂಬಿಕೊಂಡಿದ್ದ, ತಲೆಚಿಟ್ಟು ಹಿಡಿದು, ಮನಕ್ಕೆ ಬೋರಾಗಿದ್ದ ಸುದೀರ್ಘಾವಧಿಯ ಚುನಾವಣಾ ಪ್ರಕ್ರಿಯೆ ಹಾಗೂ ಪ್ರಚಾರ ಅಕ್ಟೋಬರ್ ಐದರಂದು ನಿಂತಾಗ, ಇಡೀ ದೇಶ, ಅದರಲ್ಲಿಯೂ ಶಾಂತಿಪ್ರಿಯರಾದ ಸಜ್ಜನರು ಸಮಾಧಾನದ ನಿಟ್ಟುಸಿರೆಳೆದಿರಬೇಕೆಂದು ತೋರುತ್ತದೆ. ರಾಜಕೀಯ ನಾಯಕರ ಸಂಸ್ಕೃತಿ ಸಭ್ಯತೆಯನ್ನಳೆಯಲು ಅದೇ ಸರಿಯಾದ ಕಾಲ. ಆದರಲ್ಲಿಯೂ ತಲೆಯಾಳೆನಿಸಿಕೊಂಡವರು ನಿರಾಶೆಯಿಂದಲೋ ಕುತ್ಸಿತ ಬುದ್ಧಿಯಿಂದಲೋ ಮನಸ್ಸಿನಾಳದಲ್ಲಿ ಅವಿತಿದ್ದ ನಂಜಿನುರಿಯನ್ನು ವಾಕ್ಪ್ರವಾಹದ ಮೂಲಕ ಹರಿಬಿಡುತ್ತಾರೆ. ನಾಯಕರ ಸ್ವಭಾವವನ್ನಳೆಯಲು ಅದೇ ಸರಿಯಾದ ಕಾಲ.

ಯಾವ ಪಕ್ಷಕ್ಕೂ ಅಂಟಿಕೊಳ್ಳದೆ, ಸಾಕ್ಷೀಭೂತರಾಗಿ ನಾಯಕರ ಪರಸ್ಪರ ಮೂದಲೆಯನ್ನು ಗಮನಿಸಿದಾಗ ಸಜ್ಜನರಿಗೆ ಹೇಸಿಗೆಯಾಗುತ್ತದೆ, ಸಾಮಾನ್ಯರಿಗೆ ನಗು ಬರುತ್ತದೆ, ಆಗದವರಿಗೆ ಆಸುರೀ ಸಂತೋಷವಾಗುತ್ತದೆ. ಸೋನಿಯಾರನ್ನು ಮೋನೀಕಾಗೆ ಹೋಲಿಸಿದವರು ಮಹಾಜನರು, ಇಂಡಿಯಾಕ್ಕೆ ಅವರ ಕೊಡುಗೆ ಎರಡು ಮಕ್ಕಳು ಮಾತ್ರ ಎಂದು ನುಡಿದವರು ಜಾರ್ಜ್. ಅಂಥ ಮಾತುಗಳಿಗೆ ಕಡಿವಾಣ ಹಾಕದ ಅಟಲರನ್ನು 'ದೇಶ ಬಿಟ್ಟು ತೊಲಗಿ' ಆಂದೋಲನದಲ್ಲಿ ಕ್ಷಮಾ ಪತ್ರ ಬರೆದು ಕೊಟ್ಟು (ಪ್ರಪಂಚ ೩–೧೦–೯೯) ಜೈಲಿನಿಂದ ಹೊರಬಂದ 'ಗದ್ದರ್' ಎಂದು ಕಾಂಗ್ರೆಸ್ ವರಿಷ್ಠರು ನಿಂದಿಸುತ್ತಾರೆ. ಅಸ್ತಿತ್ವವಿಲ್ಲದ ಅಮೆರಿಕೆಯ ವಿಶ್ವವಿದ್ಯಾನಿಲಯವೊಂದರಲ್ಲಿ ಸುಳ್ಳು ಡಾಕ್ಟೊರೇಟ್ ಪದವಿಯನ್ನು ಪಡೆದ ಮಮತಾ ಫೋರ್‌ಟ್ವೆಂಟಿಯೆಂದೂ, ತಾನು ಮುಖ್ಯಮಂತ್ರಿಯಾಗಿದ್ದಾಗ ನೂರಾರು ಜನರನ್ನು ಕೊಲ್ಲಿಸಿದ ಸಿದ್ಧಾರ್ಥಶಂಕರರೇ ಕೊಲೆಗಾರನೆಂದೂ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸು ಆಪಾದಿಸಿದರೆ ; ಬಸು ಅವರ ಮೊದಲ ಹೆಂಡತಿ ಹೇಗೆ ತೀರಿಕೊಂಡರೆಂಬುದು ಮತ್ತು ಅವರ ಮಗ ಚಂದನ್ ಅವರ ಮೊದಲ ಮಡದಿ ಹೇಗೆ ಅಗಲಿದರೆಂಬುದು ತಮಗೆ ತಿಳಿದಿದೆಯೆಂದು ಮಮತಾ ಹಂಗಿಸುತ್ತಾರೆ. ಬಸು ಅವರ ವಿದೇಶ ಪ್ರವಾಸದ ವೆಚ್ಚವನ್ನು ಯಾರು ತುಂಬಿಸಿದರೆಂಬುದು ತಮಗೆ ಗೊತ್ತೆಂದು ಶಂಕರರೇ ಅಣಕವಾಡುತ್ತಾರೆ. (೧೭–೯–೯೯ ರ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್) ಸೋನಿಯಾರ ತಾಯಿ ಇಟಲಿಯ ರೋಮನ್ ಕ್ಯಾಥಲಿಕ್, ತಂದೆ ಪಾಕಿಸ್ತಾನದ ಐಎಸ್‌ಐ ಏಜೆಂಟ್

ಹಮಿದ್ ಗುಲ್ ಎಂದೂ, ಭಾರತವನ್ನು ದುರ್ಬಲಗೊಳಿಸಲು ಪಾಕಿಸ್ತಾನ ರಾಜೀವ್ ಸೋನಿಯಾರ ಪ್ರೇಮ ಪ್ರಕರಣಕ್ಕೆ ಕಾರಣವಾಯಿತೆಂದೂ, ಇಂದಿರಾ ಮತ್ತು ರಾಜೀವ ಗಾಂಧಿಯವರ (ಏಕೋ ಸಂಜಯಗಾಂಧಿಯ ಹೆಸರನ್ನು ಬಿಡಲಾಗಿದೆ) ಕೊಲೆಯಲ್ಲಿ ಸೋನಿಯಾ ಕೈವಾಡವಿದೆಯೆಂದೂ, ಸೋನಿಯಾರನ್ನು ಸೋಲಿಸುವ ಸಲುವಾಗಿ ತಮ್ಮ ಸೈನ್ಯದೊಡನೆ ಬಳ್ಳಾರಿಯಲ್ಲಿ ವಾಸ್ತವ್ಯ ಹೂಡುವುದಾಗಿಯೂ ಸನ್ಯಾಸ ಧರ್ಮಕ್ಕೆ ವಿರುದ್ಧವಾದ ರೀತಿಯಲ್ಲಿ ಸನ್ಯಾಸಿನಿಯೊಬ್ಬರು ಬರೆದಿದ್ದಾರೆ. ಸೋನಿಯಾ ವಿದೇಶೀಯರು, ಅನನುಭವಿಗಳು, ದೇಶಾಭಿಮಾನವಿಲ್ಲದವರು ಎಂದು ಕೆಲವರು ಹೇಳಿದರೆ, ದೇಶದ ಸರ್ವನಾಶಕ್ಕೆ ಕಾಂಗ್ರೆಸ್ ಕಾರಣವೆಂದು ಕಾಂಗ್ರೆಸ್ಸಿನಲ್ಲಿದ್ದುಕೊಂಡೇ ಮಿತಿ ಮೀರಿ ತಿಂದು ತೇಗಿ, ಕೊನೆಗೆ ಅನ್ಯಪಕ್ಷವನ್ನು ಮೊರೆಹೊಕ್ಕ ರಸಿಕ ರಾಜಕಾರಣಿಯೊಬ್ಬರು ದ್ವೇಷಕಾರುತ್ತಾರೆ. ಅಧಿಕಾರ ದಾಹ ಎಲ್ಲ ಪಕ್ಷಗಳಿಗೂ ಇದ್ದದ್ದೇ; ಅದು ಯಾವುದೇ ಪಕ್ಷದ ಗುತ್ತಿಗೆಯಲ್ಲ.

ಸೋನಿಯಾ ವಿದೇಶೀಯರೆನ್ನುವ ಮಾತು ನಿಜ, ಉಳಿದದ್ದೆಲ್ಲ ಅಸಂಗತ. ಆದರೆ ರಾಜ್ಯಾಂಗದಲ್ಲಿ ವಿದೇಶೀಯರಾಗಲಿ, ಅವರ ಹೆಂಡತಿ ಮಕ್ಕಳಾಗಲಿ ರಾಷ್ಟ್ರಪತಿ ಅಥವಾ ಪ್ರಧಾನಿ ಗದ್ದುಗೆಗೆ ಬಾಹಿರರೆಂಬ ನಿಷೇಧವಿಲ್ಲ. ಅಂಥ ನಿಷೇಧ ಅಗತ್ಯ. ಮಾರಿಷಸ್, ಟ್ರನಿಡಾಡ್ ಮತ್ತು ಟೊಬಾಗೊ, ಗಯಾನ, ಸಿಂಗಪೂರ್, ನೇಪಾಳ, ಮೊದಲಾದ ರಾಷ್ಟ್ರಗಳಲ್ಲಿ ಭಾರತೀಯ ಮೂಲದ ನಾಯಕರು ಅತ್ಯುನ್ನತ ಸ್ಥಾನಗಳನ್ನಲಂಕರಿಸಿರುವರೆಂದೂ, ದಕ್ಷಿಣ ಆಫ್ರಿಕಾದ ಐದಾರು ಮಂದಿ ಮಂತ್ರಿಗಳು ಭಾರತೀಯ ಮೂಲದವರೆಂದೂ ಎಸ್. ಫೈಜಿ ಎಂಬುವರು ಹಿಂದೂ ಪತ್ರಿಕೆಯಲ್ಲಿ ಬರೆದಿದ್ದಾರೆ. ಮಹಿಳೆಯರ ಬಗ್ಗೆ ಕೀಳಾಗಿ ಅಪಪ್ರಚಾರ ಮಾಡುವ ಪ್ರಯತ್ನವನ್ನು ಚುನಾವಣಾ ಆಯೋಗದ ಅಧ್ಯಕ್ಷರಾದ ಗಿಲ್ ಖಂಡಿಸಿದ್ದುಂಟು. ಸೋನಿಯಾ ಅವರ ಮೇಲಣ ಆಪಾದನೆ ನಿಜವೆ ಎಂದು ಸರ್ಕಾರ ಹುಡುಕಿ ನೋಡಬೇಕು; ಉಂಟಾದರೆ ಸೋನಿಯಾ ಮೌನವಾಗಿ ರಾಜಕೀಯ ರಂಗದಿಂದ ಮರೆಯಾಗಬೇಕು ;ಅದು ಸುಳ್ಳಾದ ಪಕ್ಷದಲ್ಲಿ ಆಪಾದನೆ ಮಾಡಿದವರನ್ನು ಸೆರೆಮನೆಗೆ ಕಳಿಸಬೇಕು. ಈ ದೇಶದಲ್ಲಿ ಹುಟ್ಟಿಯೂ ವಿದೇಶೀಯರಂತೆ ಅಕ್ರಮವಾಗಿ ವರ್ತಿಸುವ ಜನರಿರಬಹುದು ; ವಿದೇಶದಲ್ಲಿ ಹುಟ್ಟಿಯೂ ಆನಿಬೆಸೆಂಟ್ ನಿವೇದಿತಾರಂತೆ ಸ್ವದೇಶಿಯರಂತೆ ದೇಶಕ್ಷೇಮ ಕಾರ್ಯದಲ್ಲಿ ಮಗ್ನರಾದವರಿರಬಹುದು. ಆದರೆ ಪ್ರಧಾನಿ ಹುದ್ದೆಗೆ ಅವರು ಸರಿಯೆ ? ಶೈಶವದಲ್ಲಿ ಮಕ್ಕಳು ತಪ್ಪು ಮಾಡಬಹುದು. ಹಿಂದೆಂದೋ ಮಾಡಿದ ತಪ್ಪನ್ನು (ಅದು ನಿಜವಿರದಿರಬಹುದು) ಭೂತಗನ್ನಡಿಯಲ್ಲಿ ತೋರಿಸಿ, ಅಟಲರು ದೇಶಾಭಿಮಾನರಹಿತರು ಎಂದು ಸಾರುವುದೇ ಮೂರ್ಖತನ. ವಾಜಪೇಯಿಯವರು ಪ್ರಾಮಾಣಿಕ ವ್ಯಕ್ತಿಯೆಂದು ಇತ್ತೀಚೆಗೆ ನಿಜಲಿಂಗಪ್ಪನವರು ಕೊಟ್ಟಿರುವ ಪ್ರಮಾಣವನ್ನು ಭಾರತೀಯರು ಒಪ್ಪಿಕೊಂಡು, ಹಗುರವಾದ ಮಾತುಗಳನ್ನು ತ್ಯಜಿಸುವುದು ದೇಶದ ಹಿತದೃಷ್ಟಿಯಿಂದ ಅತ್ಯಗತ್ಯ.

ಸೋನಿಯಾ ತಾವಾಗಿಯೇ ಅಪೇಕ್ಷಿಸಿ ರಾಜಕೀಯಕ್ಕೆ ಬಂದವರಲ್ಲ. ರಾಷ್ಟ್ರದ ಸ್ವಾರ್ಥಪರ ಪ್ರತಿಷ್ಠಾವಂತರ ಕಚ್ಚಾಟದಿಂದ ಕಾಂಗ್ರೆಸ್ಸಿನ ನಾವೆ ಮುಳುಗಿಹೋಗುತ್ತಿದ್ದಾಗ, ಆ ಶೂರರೆಲ್ಲರೂ ಒಟ್ಟಾಗಿ ಆ ತಾಯಿಯನ್ನು ಜಗದಂಬೆಯೆಂದು ಹೊಗಳಿ ರಕ್ಷ ರಕ್ಷ ಎಂದು ಕೇಳಿಕೊಂಡಾಗ, ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ, ತಮ್ಮ ಪೂರ್ವಿಕರು ಬೆಳೆಸಿದ ಸಂಸ್ಥೆಯ ಕರ್ಣಧಾರತ್ವವನ್ನೊಪ್ಪಿಕೊಂಡದ್ದು ಅವರ ತಪ್ಪೆ? ಆ ಮಹಾಪಕ್ಷದ ಅಧ್ಯಕ್ಷೆಯಾದ ನಂತರ ಅವರನ್ನು ವೈಯಕ್ತಿಕವಾಗಿ ದೂರದೆ, ಗೌರವ ತೋರಿಸಬೇಕಾದ್ದು ಸಜ್ಜನಿಕೆಯ ಲಕ್ಷಣ. ಎರಡು ಕಡೆ ಚುನಾವಣೆಯಲ್ಲಿ ಗೆದ್ದಾಗ, ಅಮೇಥಿಯಲ್ಲಿ ಅಪಾರ ಸಂಖ್ಯೆಯ ಮತಗಳನ್ನು ಪಡೆದಾಗ ಅವರನ್ನು ವಿದೇಶೀಯರೆಂದು ಕರೆಯುವುದು ಹೇಗೆ? ನಮ್ಮಲ್ಲಿ ಅನೇಕರಿಗೆ ತಾಯಿ ಗೊತ್ತೇ ಹೊರತು, ತಂದೆ ಯಾರೆಂಬುದನ್ನು ತಾಯಿಯೇ ಹೇಳಬೇಕು. ಕದ್ದು ಬಸಿರಾಗುವ ಹೆಂಗಸರು ಇತರ ಹೆಂಗಸರ ಮೇಲೆ ಕಲ್ಲೆಸೆಯಬಾರದು. ಅದೇನೇ ಇರಲಿ, ಇಂದಿನ ಚುನಾವಣಾ ಮಥನದಿಂದ ಪ್ರಿಯಾಂಕರ ಚರಿಷ್ಮ ಪ್ರಕಟವಾಯಿತಲ್ಲದೆ, ಮಹಾರಾಷ್ಟ್ರ ಹೊರತಾಗಿ, ಬೇರೆ ಕಡೆ ಸದ್ಯಕ್ಕೆ ಅತಂತ್ರ ಪರಿಸ್ಥಿತಿಯ ಆತಂಕ ಕೊನೆಗೊಂಡದ್ದರಿಂದ ಜನಕೋಟಿಗೆ ಸಮಾಧಾನವಾಗಿದೆ.

ಚುನಾವಣೆಯ ಸಮಯದಲ್ಲಿ ಭಾವೋದ್ರೇಕ ತೀವ್ರವಾಗಿರುವಾಗ ರಾಜಕಾರಣಿಗಳ ಸಂಯಮ ಜಾರುವುದಾಗಲಿ, ಸುಳ್ಳು ದಿಟಗಳ ನಡುವಣ ಅಂತರ ಮರೆಯಾಗುವುದಾಗಲಿ ಸಹಜ. ರೇಷ್ಮೆಯೊ ಸಕ್ಕರೆಯೊ ಬಟ್ಟೆಯೊ ಯುದ್ಧ ಸಾಮಗ್ರಿಗಳೊ ಯಾವುದಾದರಾಗಲಿ ಹೊರಗಿಂದ ವಸ್ತುಗಳು ಆಮದಾಗುವಾಗ ಅಥವಾ ರಫ್ತಾಗುವಾಗ ಜನ ಮನದಲ್ಲಿ ಸಂಶಯ ಬೇರೂರುವುದು ಸಹಜ. ಆಡಳಿತ ಪಕ್ಷ ತನ್ನ ನಿಲವನ್ನು ಹೇಗಾದರೂ ಸಮರ್ಥಿಸಿಕೊಳ್ಳಬೇಕಷ್ಟೆ. ಕಾರ್ಗಿಲ್ ಸಂಘರ್ಷ ಆರಂಭವಾದ ನಂತರವೂ ಪಾಕಿಸ್ತಾನ ಭಾರತಕ್ಕೆ ಸಕ್ಕರೆ ರಫ್ತನ್ನು ಮುಂದುವರಿಸಿದೆ ಎಂದು ಪಾಕ್ ಸರಕಾರ ಗುರುವಾರ ಅಲ್ಲಿಯ ಸಂಸತ್ತಿಗೆ ತಿಳಿಸಿದೆ ಎನ್ನುವಾಗ (೧೭-೯-೯೯ ಕನ್ನಡ ಪ್ರಭ) ಪಾರದರ್ಶಿಕತೆ ಎಲ್ಲಿ ಬಂತು? ಅದೇನೇ ಇರಲಿ, ವಿಷಯಗಳನ್ನಾಧರಿಸಿದ ಚುನಾವಣೆಗಳು ನಡೆಯಲಿಲ್ಲವೆಂಬುದು ಸ್ಪಷ್ಟ. ಚುನಾವಣಾ ಪ್ರಚಾರಕ್ಕೆ ಕಾರ್ಗಿಲ್ ಪ್ರಕರಣವನ್ನು ಎಳೆದದ್ದೇ ಸರಿಯಲ್ಲ. ಐನೂರಕ್ಕಿಂತಲೂ ಹೆಚ್ಚು ಮಂದಿ ಸೈನಿಕರು ತೀರಿಕೊಂಡಾಗ, ಯುದ್ಧವಿನ್ನೂ ನಿಲ್ಲದಿದ್ದಾಗ ಅದರ ಜಯಾಪಜಯಗಳ ಬಗ್ಗೆ ಬಹಿರಂಗವಾಗಿ ಚರ್ಚೆ ನಡೆಸಬೇಕಾಗಿರಲಿಲ್ಲ. ಚುನಾವಣಾ ಪ್ರಕ್ರಿಯೆ ನಡೆಯುವಾಗ, ಅನಾವಶ್ಯವಾಗಿ ಆಯೋಗವನ್ನು ಟೀಕಿಸುವ ಚಾಳಿಯನ್ನು ನಿಷೇಧಿಸಬೇಕು. ಚುನಾವಣಾಪೂರ್ವ

ಮತ ಭವಿಷ್ಯ ಪ್ರಕಟಣೆ ಹಾನಿಕಾರಕವಲ್ಲ, ನಿಜ. ಆದರೆ ಚುನಾವಣೋತ್ತರ ಮತ ಭವಿಷ್ಯ ಪ್ರಕಟಣೆ ಸಾಧುವಲ್ಲವೆಂಬ ಆಯೋಗದ ತೀರ್ಪು ಪ್ರಾಮಾಣಿಕವಾಗಿತ್ತೆಂದು ತೋರುತ್ತದೆ. ಮಹಾಚುನಾವಣೆಯ ಕಾಲದಲ್ಲಿ ಕೇಂದ್ರದಲ್ಲಾಗಲಿ, ರಾಜ್ಯಗಳಲ್ಲಾಗಲಿ ಉಸ್ತುವಾರಿ ಸರ್ಕಾರಗಳನ್ನು ಸ್ಥಗಿತಗೊಳಿಸುವ ಉಪಾಯವನ್ನು ಕಾನೂನು ತಜ್ಞರು ಕಂಡುಹಿಡಿಯಬೇಕಾಗಿದೆ. ಎರಡು ಕಡೆಯೂ ಸಲಹೆಗಾರರ ಮೂಲಕ ತಾತ್ಕಾಲಿಕವಾಗಿ ರಾಷ್ಟ್ರಪತಿ/ರಾಜ್ಯಪಾಲರು ಸರ್ಕಾರ ನಡಸಬಹುದೆಂದು ತೋರುತ್ತದೆ.

ಪ್ರಧಾನಿ ವಾಜಪೇಯಿ : ಒಟ್ಟಿನಲ್ಲಿ, ಮಹಾರಾಷ್ಟ್ರ ವಿನಾ, ಕೇಂದ್ರ ಮತ್ತು ರಾಜ್ಯಗಳಲ್ಲಿ ಅತಂತ್ರ ಅಭದ್ರ ಸರ್ಕಾರಕ್ಕೆ ಎಡೆಯಿಲ್ಲದಿರುವುದು ಸಮಾಧಾನದ ಸಂಗತಿ. ಕಾಂಗ್ರೆಸ್ ಇಬ್ಭಾಗವಾಗದಿದ್ದರೆ, ಅಲ್ಲಿಯೂ ಸುಭದ್ರ ಸರ್ಕಾರ ಅಸ್ತಿತ್ವಕ್ಕೆ ಬರುತ್ತಿತ್ತೆನ್ನುವುದರಲ್ಲಿ ಸಂದೇಹವಿಲ್ಲ. ಭಾರತದಲ್ಲಿ ಜಾತಿ ಮತಗಳ ಆಧಾರದ ಮೇಲೆ ಚುನಾವಣೆ ನಡೆಯುವಾಗ ಯಾವ ಪಕ್ಷಕ್ಕಾದರೂ ಬಹುಮತ ದೊರಕುವುದು ಕಷ್ಟವಾಗುತ್ತಿರುವಾಗ, ಸುಭದ್ರ ಸರ್ಕಾರದ ರಚನೆ ಸುಲಭವಲ್ಲ. ಆದಾಗ್ಯೂ ರಾಷ್ಟ್ರೀಯ ಪ್ರಜಾಸತ್ತಾ ಸಂಯುಕ್ತ ಮಿತ್ರಪಕ್ಷ (೨೪ ಪಕ್ಷಗಳಿವೆ) ಕ್ಕೆ ಜನತೆ ಸುಭದ್ರ ಸರ್ಕಾರವನ್ನು ರಚಿಸುವ ಅವಕಾಶವನ್ನು ನೀಡಿದೆ. ಇಡಿಪುಡಿ ಪಕ್ಷಗಳು (ಏಕ ವ್ಯಕ್ತಿ ಪಕ್ಷಗಳೂ ಇವೆ) ಸ್ವಾರ್ಥಕ್ಕಾಗಿ ಸ್ವಪ್ರತಿಷ್ಠೆಗಾಗಿ ಕೊಂಗಾಟ ಮಾಡದೆ, ಅನುಭವ ಸಂಪನ್ನರೂ ವಿವೇಕಿಗಳೂ ದೇಶದ ನೇತಾರರೂ ಆದ ಅಟಲ್ ಬಿಹಾರಿ ವಾಜಪೇಯಿಯವರಿಗೆ ಬದ್ಧರಾಗಿ ನಡೆದದ್ದಾದರೆ ದೇಶದಲ್ಲಿ ಶಾಂತಿ ಮತ್ತು ಅಭ್ಯುದಯ ಸಾಧ್ಯವಾಗುತ್ತದೆ. ಕೇಂದ್ರ ಸರ್ಕಾರ ಪಕ್ಷಭೇದದಿಂದ ರಾಜ್ಯ ಸರ್ಕಾರಗಳಲ್ಲಿ ತಾರತಮ್ಯ ತೋರಿಸದೆ, ಪರಸ್ಪರ ಸಹಕಾರದಿಂದ ವ್ಯವಹರಿಸಿದ್ದಾದರೆ, ಭಾಷಾ ಪ್ರಭುತ್ವವನ್ನು ಹೇರಲಿಲ್ಲವಾದರೆ, ವ್ಯವಹಾರಗಳಲ್ಲಿ ಪಾರದರ್ಶಿಕತೆ ಇದ್ದದ್ದಾದರೆ, ದೇಶ ಬಾಹ್ಯಾಂತರಿಕ ಅರಿಷ್ಟಗಳನ್ನು ನಿಗ್ರಹಿಸಿ, ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವಂತಾಗುತ್ತದೆ.

ಮುಖ್ಯಮಂತ್ರಿ ಕೃಷ್ಣ : ಜನತಾದಳ ಒಡೆಯಲಾಗಿ, ಭಾಜಪ, ಜನತಾದಳ (ಯು) ಲೋಕಶಕ್ತಿ ಮತ್ತು ಸಮತಾ ಪಕ್ಷಗಳ ಧೈರ್ಯಚ್ಯುತ ನಿರಾಶಾಮಯಗೊಂದಲದಿಂದಾಗಿ ಹಾಗೂ ಹಿಂದಿನ ಸರ್ಕಾರದ ನಿಷ್ಕ್ರಿಯತೆ ಹಾಗೂ ಸಡಿಲತೆಯಿಂದಾಗಿ, ಜತೆಗೆ ವ್ಯಕ್ತಿಗಳ ಸ್ವಯಂಪ್ರಭೆಯಿಂದಾಗಿ ಕಾಂಗ್ರೆಸ್ ಗಟ್ಟಿಯಾದ ಸರ್ಕಾರವನ್ನು ರಚಿಸುವಂತಾಗಿದೆ. ಕಾಂಗ್ರೆಸ್ಸಿನ ವಿಜಯಕ್ಕೆ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಎಂ. ಕೃಷ್ಣರ ಚಾರಿಸ್ಮ, ಬುದ್ಧಿವಂತಿಕೆ ಅನುಭವ ಸಂಪತ್ತು, ವಿನಯ

ಸೌಜನ್ಯ, ಮಾತಿನ ಮೋಡಿ, ಸ್ನೇಹಶೀಲತೆ, ಸತತ ಶ್ರಮ ಶ್ರದ್ಧೆಗಳೂ ಸೇರಿವೆ ಎಂಬು ದನ್ನು ನಿಃಸೂಯಾಶೀಲರು ಮರೆಯಲಾರರು. ಆದ್ದರಿಂದ ಅವರು ಮುಖ್ಯಮಂತ್ರಿ ಪದವಿಗೆ ಸರ್ವಾರ್ಹರು ಎಂಬುದನ್ನು ಜಗತ್ತು ಬಲ್ಲುದು. ಆರೇಳು ವರ್ಷಗಳ ಹಿಂದೆಯೇ ಅವರಿಗೆ ಲಭ್ಯವಾಗಬೇಕಾಗಿದ್ದ ಆ ಸ್ಥಾನ ದೆಹಲಿಯ ಕಿತಾಪತಿ ರಾಜಕೀಯದಿಂದಾಗಿ ಕೈತಪ್ಪಿ ಹೋಯಿತೆಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಅವರಂಥ ಬಹುಮುಖ ಪ್ರತಿಭೆಯ, ಗಹನ ವಿದ್ವತ್ತಿನ, ವಿಶಾಲ ಲೋಕಾನುಭವದ ನಾಯಕರು ಕರ್ನಾಟಕದಲ್ಲಿಯೇ ವಿರಳ. ಅವರ ಸುದೀರ್ಘ ರಾಜಕೀಯ ಜೀವನದಲ್ಲಿ ಯಾವೊಂದು ಆಪಾದನೆಯ ಕಪ್ಪು ಚುಕ್ಕೆಯೂ ಅಂಟಿಕೊಂಡಿಲ್ಲವೆಂಬುದು ಇಡೀ ನಾಡಿಗೇ ಗೊತ್ತು. ನೂತನ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರನ್ನು 'ಪುಸ್ತಕ ಪ್ರಪಂಚ' ಹೃತ್ಪೂರ್ವಕವಾಗಿ ಅಭಿನಂದಿಸುವುದಲ್ಲದೆ, ಅವರ ಆಡಳಿತ ನಿರ್ವಿಘ್ನವಾಗಿ ದಡ ಸೇರ ಲೆಂದು ಹಾರೈಸುತ್ತದೆ.

ಎರಡು ಸೂಚನೆ : ಈ ಸಂದರ್ಭದಲ್ಲಿ ಎರಡು ಸೂಚನೆಗಳನ್ನು ಮಾತ್ರ ರಾಷ್ಟ್ರ ಕ್ಷೇಮದ ದೃಷ್ಟಿಯಿಂದ ಕೇಂದ್ರ ಮತ್ತು ನಾಯಕರ ಗಮನಕ್ಕೆ ಸವಿನಯವಾಗಿ ತರ ಬಹುದಾಗಿದೆ. ಅಧಿಕಾರಾರೂಢ ನಾಯಕರು ಹಿಂದಿನ ಕಹಿ ಪ್ರಸಂಗಗಳನ್ನು ಮರೆತು, ದ್ವೇಷವನ್ನು ತ್ಯಜಿಸಿ, ರಾಜಕೀಯ ಬಲಿ ಹತ್ಯಾಕಾಂಡಗಳಿಗೆ ಮನಗೊಡದೆ, ದೇಶಹಿತ ಸಾಧನೆಯಲ್ಲಿ ತದೇಕಚಿತ್ತರಾಗಿ ದುಡಿಯಬೇಕು. ದ್ವೇಷಕ್ಕೆ ಪ್ರತಿದ್ವೇಷ ಮದ್ದಲ್ಲ ; ಸ್ನೇಹ ಪ್ರೇಮ ಕ್ಷಮೆಗಳೇ ಮದ್ದು. ಸರ್ಕಾರದ ಕಾರ್ಯ ಯೋಜನೆಗಳು ಫಲಿಸಲು ಒಂದೆರಡು ವರ್ಷಗಳಾದರೂ ಬೇಕು. ಅಷ್ಟು ದಿನವಾದರೂ ಪಕ್ಷಗಳು ಸಂಯಮ ದಿಂದಿರಬೇಕಲ್ಲದೆ, ಸರ್ಕಾರವನ್ನುರುಳಿಸುವ ದುಸ್ಸಾಹಸಕ್ಕೆ ಕೈಹಾಕಿ, ದೇಶದ್ರೋಹಕ್ಕೆ ಭಾಜನವಾಗಬಾರದು. ಅಂಥ ಪಾಪಕೃತ್ಯಕ್ಕೆಳೆಸುವ ಪಕ್ಷಗಳನ್ನು ಮತ್ತು ನಾಯಕ ರನ್ನು ಜನ ದಂಡಿಸಬೇಕು. ಸರ್ಕಾರಗಳು ಐದು ವರ್ಷದ ಅವಧಿಯನ್ನು ಪೂರೈಸಲು ಅವಕಾಶ ಕಲ್ಪಿಸಬೇಕು. ಆದರೆ ಸತ್ಯ ಧರ್ಮ ನ್ಯಾಯಗಳಲ್ಲಿ ನಂಬಿಕೆಯಿರುವ ದೇಶ ಪ್ರೇಮಿಗಳು ರಾಜಕೀಯದ ಹೊರಗಿದ್ದುಕೊಂಡು, ಭ್ರಷ್ಟಾಚಾರಾಂದೋಲನವನ್ನು ನಡೆಸುತ್ತ, ಸರ್ಕಾರಗಳ ನೆರವಿಗೆ ನಿಂತು, ಚುನಾವಣೆಗಳು ಪದೇ ಪದೇ ನಡೆದು, ಜನರ ಮೇಲೆ ಖರ್ಚು ವೆಚ್ಚಗಳ ಭಾರ ಬೀಳದಂತೆ ಸದಾ ಜಾಗ್ರತರಾಗಿರಬೇಕು. ದೇಶದ ಎಲ್ಲ ಸರ್ಕಾರಗಳಿಗೂ ರಾಜಕೀಯ ಪಕ್ಷಗಳಿಗೂ, ನಾಯಕರಿಗೂ ಶುಭ ಹಾರೈಕೆ !

ಕಂಬನಿ

ತೀಕ್ಷ್ಣವಾದ ಪ್ರತಿಭೆ ಎಲ್ಲಿದ್ದರೂ, ಎಂಥ ಪರಿಸರದಲ್ಲಿದ್ದರೂ, ಏನೇ ಅಡ್ಡಿ ಅಡಚಣೆಗಳಿದ್ದರೂ ಹೊರಹೊಮ್ಮುತ್ತದೆನ್ನುವುದಕ್ಕೆ ಕೋಟೆಮನೆಯ **ಸಮೇತನಹಳ್ಳಿ ರಾಮರಾಯರೇ** ಸಾಕ್ಷಿ, ಅವರು ಆರೋಗ್ಯ ಇಲಾಖೆಯಲ್ಲಿ ಸಣ್ಣದೊಂದು ನೌಕರಿಯಲ್ಲಿದ್ದರೂ ಅವರ ಸಾಹಿತ್ಯಶಕ್ತಿ ಮರುಭೂಮಿಯ ಕುಸುಮವಾಗಲಿಲ್ಲ, ಕಡಲಾಳದ ವಜ್ರವಾಗಲಿಲ್ಲ. ಅವರ ಗಂಧ ಕಾಂತಿಗಳ ಸೊಗಸು ಕನ್ನಡಿಗರಿಗೆ ದೊರೆಯುವಂತಾದದ್ದು ಸುದೈವ. ಅವರ ಕೃತಿಗಳನ್ನೋದಿದಾಗ, ಅವರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೊ, ಸಂಶೋಧಕರೊ ; ಯಾವುದೋ ಪ್ರತಿಷ್ಠಿತ ಅಕಾಡೆಮಿ ತಜ್ಞರೊ ಎಂಬ ವಿಶ್ವಾಸ ಮೂಡದಿರದು. ಅವರ ಸಾಹಿತ್ಯದ ಹರಹು ತುಂಬ ದೊಡ್ಡದು. ಸುಮಾರು ಏಳು ಸಾವಿರ ಪುಟಗಳು. ತಲಕಾಡುಗೊಂಡ, ದ್ರೋಹಾಡಂಬರ, ಭೀಷ್ಮ ಸಂಕಲ್ಪ ಮೊದಲಾದ ಹನ್ನೊಂದು ನಾಟಕಗಳೂ, ಸವತಿ ಗಂಧವಾರಣೆ, ಶ್ರೀಕೃಷ್ಣ ದರ್ಶನ, ಅತ್ತಿಮಬ್ಬೆ ಮುಂತಾದ ಹತ್ತು ಕಾದಂಬರಿಗಳೂ, ಶಾಕುಂತಲಾ ಎಂಬ ಮಹಾಕಾವ್ಯವೂ, ಸಣ್ಣಕಥೆ ಏಕಾಂಕ ನಾಟಕ ಕವಿತೆಗಳು ಭಾಷಣಗಳು ಮೊದಲಾದುವನ್ನೊಳಗೊಂಡ ಸುಮಾರು ಹದಿನೈದು ಇತರ ಕೃತಿಗಳೂ ಕನ್ನಡ ಸರಸ್ವತಿಗೆ ತೊಡಿಸಿದ ಅಭರಣಗಳಾಗಿವೆ. ೫-೧೦-೩೯ ರಂದು ತಮ್ಮ ೪೨ ನೆಯ ವಯಸ್ಸಿನಲ್ಲಿ ತೀರಿಕೊಂಡ ಅವರು ಇನ್ನೂ ಬದುಕಿದ್ದರೆ ನಾಡುನುಡಿಗಳ ಸೇವೆ ಅತಿಶಯವಾಗಿ ಸಲ್ಲುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಪುಸ್ತಕ ಪ್ರಪಂಚ ಸಮಸ್ತ ಕನ್ನಡಿಗರ ಪರವಾಗಿ ಮೃತರಿಗೆ ಅಶ್ರು ಕೃತಜ್ಞತೆಯನ್ನು ಸಲ್ಲಿಸುತ್ತದೆ.

ದೇಜಗೌ

———

ನಾ ಕಂಡಂತೆ ವಿ. ಸೀ.

ಎಸ್. ರಾಘವೇಂದ್ರ ಭಟ್ಟ
೨೧೨, 'ಸೌಮ್ಯ' ೧೨ನೇ
ಮುಖ್ಯ ರಸ್ತೆ, ಸರಸ್ವತಿಪುರ
ಮೈಸೂರು ೫೭೦೦೦೯

ಇಸವಿ ೧೯೬೮ರ ಮಾತು.

ಆಕಾಶವಾಣಿಯವರು ಏರ್ಪಡಿಸಿದ್ದ ಅಂತರ ವಿಶ್ವವಿದ್ಯಾನಿಲಯ ಕನ್ನಡ ಚರ್ಚಾಸ್ಪರ್ಧೆಯಲ್ಲಿ ಪಾಲ್ಗೊಳ್ಳಲೆಂದು ಆರಿಸಿದ್ದ ನಾವು ನಾಲ್ವರು ಬೆಂಗಳೂರಿಗೆ ಹೋಗಿದ್ದೆವು. ನವೆಂಬರ್ ಕೊನೆಯ ನಸುಕಿನ ಚಳಿಯಲ್ಲಿ ರಾಜಭವನದ ಮಾರ್ಗದಲ್ಲಿ ಸಾಗುವುದು ತುಂಬ ಹಿತಕರವಾಗಿತ್ತು. ಬೆಳಿಗ್ಗೆ ಒಂಬತ್ತಕ್ಕೇ ಆಕಾಶವಾಣಿಯ ಆವರಣ ಹೊಕ್ಕವರು ಅಲ್ಲಿದ್ದ ಫಲಕಗಳನ್ನೆಲ್ಲ ನೋಡಿ ಬರುವಾಗ ಪ್ರೊ|| ವಿ. ಸೀತಾರಾಮಯ್ಯನವರ ಕೊಠಡಿಯೆದುರು ಕ್ಷಣಕಾಲ ನಿಂತು ಒಳಗೆ ಇಣುಕಿದೆವು. ಒಳಕ್ಕೆ ನುಗ್ಗಲು ಎರಡು ಕಾರಣಗಳು: ಒಂದು, ನಾವು ವಿ. ವಿ. ನಿಲಯದ ಪ್ರತಿನಿಧಿಗಳೆಂಬ ಕೊಂಬು! ಇನ್ನೊಂದು, ವಿ. ಸೀ. ಕನ್ನಡದ ಹೆಮ್ಮೆಯ ಗುರುಗಳಾದ್ದರಿಂದ ಭಾವೀ ಎಮ್ಮೆಗಳಾದ (!) ನಮಗೆ ಸೊಕ್ಕೇರಿದ ಹುರುಪು!!

ಮೊದಲಬಾರಿಗೆ ಈ ಅಚ್ಚುಕಟ್ಟಿನ, ಓರಣದ ಶಿಸ್ತಿನ ಗುರುಗಳೊಂದಿಗಿನ ಮುಖಾಮುಖಿ. ಶುಭ್ರಪೋಷಾಕಿನಲ್ಲಿದ್ದು ಅಂತರಂಗದ ಋಜುತ್ವವನ್ನು ಸಾರುವ ಸುಂದರ ತೇಜಸ್ಸಿನ ಮುದ್ದು ಮುಖದಲ್ಲಿನ ಆನಸ್ ಅಷ್ಟು ಸನ್ಮೋಹನಗೊಳಿಸುತ್ತಿತ್ತು. ನಮ್ಮನ್ನು ಆದರದಿಂದ ಸ್ವಾಗತಿಸಿ, ಪರಿಚಯ ಕೇಳಿ, ಕ್ಷಣಮಾತ್ರದಲ್ಲಿ ನಮ್ಮಲ್ಲಿದ್ದ ಆತಂಕಗಳನ್ನು ದೂರಮಾಡಿ ತನ್ನವರನ್ನಾಗಿಸಿದರು. ಆಗ ಅಷ್ಟರಲ್ಲಿ ಒಂದು ಸಮಸ್ಯೆ ಎದುರಾಯಿತು. ಅಂದೇ ಸಂಜೆ ನೇರಪ್ರಸಾರ ಮಾಡಬೇಕಿದ್ದ ಒಬ್ಬ ಉಪನ್ಯಾಸಕಾರರು ಬರಲೇ ಇಲ್ಲ. ಪ್ರಸಾರದ ವಿಷಯ ಬಂಗಾಳಿ ಕಾವ್ಯವನ್ನು ಕುರಿತದ್ದು. ಹೆಸರಾದ ವ್ಯಕ್ತಿಯೆಂದೋ ಏನೋ ಮುಂದಾಗಿಯೇ ಹಸ್ತಪ್ರತಿ ತರಿಸಿ ಅಂಗೀಕರಿಸದಿದ್ದುದು ಮತ್ತಷ್ಟು ಆತಂಕಕ್ಕೆ ಎಡೆಮಾಡಿತ್ತು. ಪ್ರೊ|| ವಿ.ಸೀ. ಅವರು ಕಾಗದದಲ್ಲಿ ಒಂದು ಪುಸ್ತಕದ ಹೆಸರನ್ನು ಬರೆದು ತಮ್ಮ ಮನೆಯಿಂದ ತರಲೆಂದು ದೂತನನ್ನಟ್ಟಿದರು. ಯಾವ ಬೀರುವಿನಲ್ಲಿ ಯಾವ ಹಂತದಲ್ಲಿ ಇದೆಯೆಂಬ ವಿವರವನ್ನೂ ಗುರುತಿಸಿ ಕೊಟ್ಟಿದ್ದರು. ಅಷ್ಟರಲ್ಲಿ ನಮ್ಮ ಕಾರ್ಯಕ್ರಮದ ನಿರ್ವಾಹಕರು ಬಂದು ನಮ್ಮನ್ನು ಕರೆದೊಯ್ದರು.

ರೇಡಿಯೋ ಮಾಧ್ಯಮದಲ್ಲಿ ಮೊದಲಬಾರಿಗೆ ಚರ್ಚೆ ನಡೆಸುವ ಅನುಭವ

ನಮಗೆಲ್ಲರಿಗೂ ಇದೇ ಹೊಸತು. ವಿಷಯ ವನ್ನು ಪರ-ವಿರೋಧವೆಂದು ಹಂಚಿಕೊಂಡು ಹಿಗ್ಗಾ ಮುಗ್ಗಾ ಜಗ್ಗಾಡಲು ಬೇಕಾದ ಸಾಧನೆಗಳನ್ನೆಲ್ಲ ಸಿದ್ಧಮಾಡಿಕೊಂಡೆವು. ಸಂಜೆಯಹೊತ್ತಿಗೆ ಧ್ವನಿಮುದ್ರಿಸಿಕೊಳ್ಳ ಲಿದ್ದ ಈ ಚರ್ಚೆಗೆ ರಿಹರ್ಸಲ್ ನಮ್ಮಲ್ಲೇ ಆದರೂ ಟ್ರಯಲ್ ಎಂಬುದು ಏನೂ ಇಲ್ಲದೆ ಒಂದೇ ಬಾರಿಗೆ ಮುದ್ರಿಸಿಕೊಂಡರು. ಮೊದಲ ಅನುಭವವಾದ್ದರಿಂದ ಅಲ್ಲಲ್ಲಿ ಸ್ವಲ್ಪ ಓರೆಕೋರೆ ಆದರೂ ಸ್ಪರ್ಧೆಯಾದ್ದರಿಂದ ಹೇಗಿತ್ತೋ ಹಾಗೆಯೇ ಸೆರೆಹಿಡಿದಿಟ್ಟರು! ಗಡಿಯಾರದಲ್ಲಿ ಸಂಜೆ ಆರುಗಂಟೆ. ಮತ್ತೆ ಪ್ರೊ|| ವಿ. ಸೀ. ಅವರನ್ನು ನೋಡಿ ಹೋಗೋಣವೆಂದು ಕೇಳಿದಾಗ ಅವರು ನೇರ ಪ್ರಸಾರಕ್ಕೆ ಹೋಗಿದ್ದಾರೆಂದು ತಿಳಿಯಿತು. ಬೆಳಿಗ್ಗೆ ಮನೆಯಿಂದ ತರಿಸಿದ ಪುಸ್ತಕ ನೋಡಿಕೊಂಡವರು ಕೆಲವಾರು ಪುಟಗಳ ಭಾಷಣದ ಪ್ರತಿ ತಯಾರಿಸಿ ವಂಗ ಬಂಧುವೊಬ್ಬರನ್ನು ಅಲ್ಲಲ್ಲಿ ಬರುವ ಬಂಗಾಳಿ ಪದ್ಯದ ಸಾಲುಗಳನ್ನು ಅನ್ನಲು ನಿಯೋಜಿಸಿ ಸುಮಾರು ೧೫ ನಿಮಿಷಗಳ ಭಾಷಣವನ್ನು ತಾವೇ ನಿರ್ವಹಿಸಿಬಿಟ್ಟರು. ಬಿಟ್ಟ ಬಾಯಿ ಬಿಟ್ಟ ಕಣ್ಣು-ತೆರೆದ ಕಿವಿಗಳಿಂದ ಇವನ್ನೆಲ್ಲ ಗಮನಿಸಿದ ನಮಗೆ ನಂಬುಗೆಯೇ ಬಾರದು. ಇಂಥ ಶತಾವಧಾನಿಗಳು (ಪ್ರೊ|| ನಾ. ಕಸ್ತೂರಿ, ಡಾ|| ಶ್ರೀರಂಗ ಮುಂತಾದವರು) ಅಂದಿನ ಆಕಾಶವಾಣಿಯ ಕಾರ್ಯಕ್ರಮ ಗಳ ನೇತಾರರಾಗಿದ್ದು ನಾಡಿನ ಸಂಸ್ಕೃತಿ ಯನ್ನು ಹೀಗೆಲ್ಲ ಸಮೃದ್ಧಗೊಳಿಸುತ್ತಿದ್ದರು. ನಮಗೆಲ್ಲ ಅದೊಂದು ಪಾಠವಾಗಿತ್ತು.

ಇದೀಗ ೧೯೬೭ ರ ಮಾತು

ಮೈಸೂರಿನ ಶಾರದಾವಿಲಾಸ ಕಾಲೇಜಿನ ವಿದ್ಯಾರ್ಥಿ ಸಂಘದ ವಾರ್ಷಿಕ ಚಟುವಟಿಕೆ ಗಳನ್ನು ಉದ್ಘಾಟಿಸಲು ಪ್ರೊ|| ವಿ. ಸೀ. ಅವರನ್ನು ಆಹ್ವಾನಿಸಿದ್ದರು. ಇದೇ ಸಂಸ್ಥೆ ಯಲ್ಲಿ ಕೆಲವರ್ಷಗಳು ಸೇವೆ ಸಲ್ಲಿಸಿದ ಕಾರಣ ಒಂದಾದರೆ ಮೈಸೂರಿನ ಚುಂಬಕ ಶಕ್ತಿಯಿಂದ ವಿಶೇಷವಾಗಿ ಆಕರ್ಷಕರಾದ ವಿ. ಸೀ. ಬೆಂಗಳೂರಿನಿಂದ ಬಂದವರು ಅಂದಿನ ಮಾಡರ್ನ್ ಹಿಂದೂ ಹೋಟಲಿನಲ್ಲಿ ತಂಗಿದ್ದರು. ಅವರ ಯೋಗಕ್ಷೇಮ ನೋಡಿ ಕೊಳ್ಳಲು ನೇಮಕಗೊಂಡ ನಾನು ಹೋಟಲು ಕೋಣೆಗೆ ಹೋಗಿ ಕಂಡ ದೃಶ್ಯ ಇಂದಿಗೂ ಮರೆಯುವಂತಿಲ್ಲ. ಉಪಾಹಾರ ಮುಗಿಸಿದವರು ವಿರಾಮವಾಗಿ ಅದೆಷ್ಟೋ ಕೌಂಟುಗಳೇ ಇರಬೇಕೆಂಬ ಕಟ್ಟುನಿಟ್ಟಿನ ಪಂಚೆ ಧರಿಸಿದ್ದಾರೆ; ಸೂಟ್‌ಕೇಸಿನಲ್ಲಿ ನಲುಗದೆ ಮಲಗಿದ್ದ ಮುಚ್ಚುಕೊರಳಿನ ನಸುಹಳದಿಬಣ್ಣದ ಕೋಟನ್ನು ನವಿರಾಗಿ ಮೇಲಕ್ಕೆತ್ತಿ ನೇರಮಾಡಿ ತೊಟ್ಟುಕೊಂಡ ವರು ಗೂಟದಲ್ಲಿರಿಸಿದ್ದ ಖ್ಯಾತ ಮೈಸೂರು ರುಮಾಲನ್ನು ಆತ್ಮೀಯತೆಯಿಂದ ಶಿರೋ ಧಾರಿಣ ಮಾಡಿಕೊಂಡರು. ಇವೆಲ್ಲವೂ ಉದ್ದ ನಿಲುವುಗನ್ನಡಿಯ ಕಣ್ಣಡಿಯಲ್ಲೇ ನಡೆದವು. ಆಮೇಲೆ ಮೊಗಿಗೇರಿಸಿದ ಕನ್ನಡಕ,ಕರವಸ್ತ್ರಗಳಿಂದ ಸಜ್ಜಾಗಿ ಮೂಲೆ ಯಲ್ಲಿರಿಸಿದ ಜೋಡನ್ನು ಮೆಟ್ಟಿದ ವೈಖರಿ ಅವರಲ್ಲಿ ಮಾತ್ರ ಕಾಣಬಹುದಾದದ್ದು. ಬೆಳಿಗ್ಗೆ ಹತ್ತರ ಸಮಾರಂಭಕ್ಕೆ ಒಂದೂವರೆ ಗಂಟೆ ಮುಂಚೆ ಹೋದ ನನಗೆ ಇವಿಷ್ಟನ್ನೂ ನೋಡಲು ಸಾಧ್ಯವಾಯಿತು.

ಇನ್ನು ಪ್ರಮಾಣಕ್ಕೆ ಅಂದಿನ ಮೈಸೂರು ಟಾಂಗಾ ಷಾಃಪಸಂದ್. ಕುದುರೆ ಮತ್ತು ಗಾಡಿ ಇವೆರಡೂ ಸಂಪೂರ್ಣ ಆರೋಗ್ಯದಿಂದಿದ್ದ ಕಾಲ ಅದು. ಇಂದಿನ ಕಂಡಲ್ಲಿ ನುಸುಳಿ ನುಗ್ಗುವ ಮುಗ್ಗಾಲಿ (ರಿಕ್ಷಾ) ಅಂದಿನ್ನೂ ಮೈಸೂರಿಗೆ ಕಾಡಿರಲಿಲ್ಲ. ಝಾನ್ಸಿಲಕ್ಷ್ಮೀಬಾಯಿ ರಸ್ತೆಯಲ್ಲಿ ಸಣ್ಣಗೆ ಅರಟುತ್ತಾ ನಮ್ಮ ಸವಾರಿ ಕಾಲೇಜನ್ನು ಕ್ಷೇಮದಿಂದ ಸೇರಿತು.

ವಿದ್ಯಾರ್ಥಿಗಳೂ ಅಧ್ಯಾಪಕರೂ ಕಿಕ್ಕಿರಿದು ನೆರೆದಿದ್ದ ಸಭಾಂಗಣ ಬಿರಿಯುವಂತಿತ್ತು. ಸ್ವಾಗತ ಪ್ರಾರ್ಥನೆ ಮುಂತಾದ ಕಲಾಪಗಳಾದ ಮೇಲೆ ವಿಸೀ ಅವರ ಭಾಷಣಕ್ಕಾಗಿ ಕಾದ ಸಭಾಸದರು ನಿರೀಕ್ಷೆಯಿಂದಿದ್ದಾರೆ! ಸುಮಾರು ಒಂದು ಗಂಟೆ ಕ್ರಮಿಸಿದ ಉಪನ್ಯಾಸದಲ್ಲಿ ಪಾಶ್ಚಾತ್ಯ ಸಾಹಿತ್ಯ ಸಂಗೀತಗಳೂ, ಭಾರತೀಯ ಪರಂಪರೆಯ ಹಿನ್ನೋಟವೂ, ಓತಪ್ರೋತವಾಗಿ ಹರಿಯತೊಡಗಿತು. ಉಪನ್ಯಾಸದ ವಿಷಯದಲ್ಲಿ ವಿಸೀ ತಮ್ಮ ಗುರುಗಳಾದ ಬಿ.ಎಂ. ಶ್ರೀಕಂಠಯ್ಯನವರ ಪಡಿಯಚ್ಚು ಎಂದು ಕೇಳಿದ್ದು ಅಂದು ನಿಜವಾಯಿತಾದರೂ ಸಭಾಸದರ ವರ್ತನೆ ಮಾತ್ರ ನಮಗೆಲ್ಲ ಆತಂಕಕ್ಕೀಡು ಮಾಡಿತು. ಅಧ್ಯಕ್ಷತೆ ವಹಿಸಿದ್ದ ಶ್ರೀ ಜಯಕುಮಾರ ಅನಗೋಳರಂತೂ ಮೂರ್ನಾಲ್ಕು ಬಾರಿ ಸದ್ದು ಮಾಡದಿರುವಂತೆ ಸಭಿಕರಿಗೆ ಸಂಕೇತವನ್ನು ಮಾಡಿದರು. ಉಪನ್ಯಾಸಮಾತ್ರ ನಿರಂತರ ಸಾಗಿ ಗಂಟೆ ದಾಟಿತು. ಕೊನೆಯಲ್ಲಿ ವಂದನಾರ್ಪಣೆ ಮಾಡಿದವರು "ಕ್ಷಮಿಸಿ ಇವರನೆಲೆಗುರುವೆ! ತಾವೇನನೆಸಗಿದಪೆನೆಂದರಿಯುರಿವರು" ಎಂಬ ಧಾಟಿಯಲ್ಲಿ ವಿ.ಸೀ. ಯವರ ಕ್ಷಮೆ ಕೋರಬೇಕಾಯಿತು. ಅವರು ಮಾತ್ರ ಸ್ಥಿತಪ್ರಜ್ಞರಂತೆ ತಲೆಮಾರುಗಳ ಅಂತರವನ್ನು ಅಂಗೀಕರಿಸಿ ಎಲ್ಲವನ್ನೂ 'ಜೀರ್ಣೋಭವ' ಎಂದು ನುಂಗಿಕೊಂಡರು. ಎಲ್ಲ ಕಡೆ ಹೀಗೇ ನಡೆಯೋದು, ಬಿಡಿ ಎಂದು ನಮಗೇ ಧೈರ್ಯ ನುಡಿದರು.

ಸಭೆ ಮುಗಿದ ಮೇಲೆ ಇನ್ನು ಅವರ ಪಾಡಿಗೆ ಅವರೇ ಎಂಬಂತೆ ಟಾಂಗಾ ಏರಿದವರು ನನ್ನನ್ನೂ ಜತೆಗಿರಿಸಿಕೊಂಡು ಬಂದು ಇಳಿದದ್ದು ವಾಣಿವಿಲಾಸ ಮಾರುಕಟ್ಟೆಯ ಪ್ರವೇಶ ದ್ವಾರದ ಬಳಿ. ಅಲ್ಲೊಬ್ಬ ವಯಸ್ಸಾದ ಧಡೂತಿ ಹೆಂಗಸು ವೀಳೆಯದೆಲೆ ಮಾರುತ್ತಿದ್ದರು. ಸುವಿಖ್ಯಾತ ಮೈಸೂರಿನ ಅಪ್ಪಟ ಚಿಗುರೆಲೆಯ ಕಾಳಿಗೆಗಳನ್ನು ಕುಕ್ಕೆಯಲ್ಲಿರಿಸಿ ಒದ್ದೆಬಟ್ಟೆ ಹೊದ್ದಿಸಿದ್ದು ಬೆಳ್ಳಿ ಕಡಗ ಧರಿಸಿದ್ದ ಆಕೆ ವಿಸೀ ಅವರನ್ನು ಕಂಡೊಡನೆ ಕೈಮುಗಿದು "ಬುದ್ಧಿ, ಸಂದಾಗಿದೀರಾ? "ಎಂದು ಸಣ್ಣಗೆ ಕಣ್ಣೀರು ಬೆರೆತ ನಡುಕದ ದನಿಯಿಂದ ವಿಚಾರಿಸಿದರು. ಕಾಚಿನ ಪುಡಿಯಿಂದ ಹಲ್ಲಿನ ಸಾಲುಗಳು ಬಣ್ಣಗೆಟ್ಟಿದ್ದರೂ ಆತ್ಮೀಯ ಗೌರವದ ಭಾವ ಮರೆಯಾಗುವಂತಿರಲಿಲ್ಲ. ಮೈಸೂರಿನಲ್ಲಿದ್ದಾಗ ಅಂದರೆ ಎರಡು ದಶಕಗಳ ಹಿಂದೆ ವಿಸೀ ಅವರ ಮನೆಗೆ ಎಲೆ ಹಾಕುತ್ತಿದ್ದ ಮಹಿಳೆಯ ಕುಶಲ ಕೇಳಲು ಇವರು ಇಷ್ಟು ದೂರ ಬಂದದ್ದು! ಸಮಾಜದ ಎಲ್ಲ ಸ್ತರದ ಜನರಿಗೂ ಸಂತೋಷ ನೆಮ್ಮದಿಗಳನ್ನು ಹಂಚುವುದರಲ್ಲಿ ಈ ಸುಸಂಸ್ಕೃತ ಸಜ್ಜನರ ನಡೆ ನೋಡಿ ದಿಗ್ಭ್ರಮೆಗೊಂಡೆ.

ತಮ್ಮ ಸಮಕಾಲೀನ ಸಮಾಜದಲ್ಲಿನ ಪಾರಂಪರಿಕ ಜೀವನ ಮೌಲ್ಯಗಳನ್ನು ಮೆಚ್ಚಿ ಸ್ವಂತ ಜೀವನದಲ್ಲಿ ಅನುಷ್ಠಾನಕ್ಕೆ ತಂದ ಜೀವಿಗಳೆ ಆಯಾ ಕಾಲದ ಸಾಮಾನ್ಯರ ಬಾಳದಾರಿಗೆ ಬೆಳದಿಂಗಳು ಚೆಲ್ಲುವ ಕೇತನರು. ಇಂಥವರಿಂದಲೇ ಒಂದ ಸಮಾಜ ತನ್ನ ಸೌಖ್ಯವನ್ನೂ ಸಮೃದ್ಧಿ ಯನ್ನೂ ನಿಜವಾಗಿ ಅನುಭವಿಸುವುದಲ್ಲವೆ



ಕನ್ನಡದ ನಾಡ ಜನವೆಲ್ಲವೂ ನನ್ನವರು
ಬಡಗ ತೆಂಕಣ ಮೂಡ ಕೊಡಗ ತಾಳವ ತೋಡ
ಇನ್ನೆಲ್ಲ ಕನ್ನಡಿಗರೆನ್ನವರು ಎನ್ನುಸಿರು,
ನಾವೆಲ್ಲ ಒಂದು ಮನೆಯುವರಣ್ಣ ತಮ್ಮದಿರು
ನಮ್ಮೆಲ್ಲರನು ಪಡೆದುದೊಂದೆ ನಾಡಿನ ಬಸಿರು
ಎಂದು ನಾವರಿದೆವೇ ನಮಗೆ ಇನ್ನಾರೆದುರು !
ಹಾ ನನ್ನ ಸೋದರರೆ ಬನ್ನಿ ಒಂದಾಗಿ
ಜಯವಧುವ ನಿಮ್ಮ ತೋಳಿನೊಳಿಟ್ಟು ತೂಗಿ

—ಶ್ರೀನಿವಾಸ (ಮಾಸ್ತಿ ವೆಂಕಟೇಶ ಐಯ್ಯಂಗಾರ್)

ಕತ್ತಲೆಯಿಂದ ಬೆಳಕಿನೆಡೆಗೆ

ಡಿ. ವಿ. ಶಾಮಣ್ಣ

ನಂ. ೧೮೯೦, 'ಆರಭಿ' ೧ನೇ ಮೇನ್
೩ನೇ ಕ್ರಾಸ್, ಶ್ರೀರಾಂಪುರ, ೨ನೇ ಹಂತ
ಮೈಸೂರು-೨೩

ನಾನು ನೆಲದ ಮೇಲೆ ಕುಳಿತಿದ್ದೇನೆ, ಬೆನ್ನು ಗೋಡೆಗೆ ಒರಗಿದೆ, ನನ್ನ ಎಡ ಗಾಲನ್ನು ಸರಪಳಿಯಿಂದ ಕೊಂಡಿಗೆ ಬಿಗಿದು ಬೀಗ ಜಡಿಯಲಾಗಿದೆ. ದೊಡ್ಡ ಲೋಹದ ತಗಡು ಕಿಟಕಿಯನ್ನು ಮುಚ್ಚಿ, ಶರತ್ಕಾಲದ ಸೂರ್ಯನ ಬೆಳಕನ್ನು ಒಂದುಮಾಡಿದೆ. ಘಳಿಗೆ ಘಳಿಗೆಗೂ ನನ್ನ ಪಕ್ಕದಲ್ಲಿರುವ ಮೇಣದ ಬತ್ತಿ ಕತ್ತಲೆಯಲ್ಲಿ ಒದರುತ್ತಿದೆ. ಅದು ಆರಿಹೋದರೆ, ನಾನು ಸಂಪೂರ್ಣ ಕತ್ತಲೆಯಲ್ಲಿ ಮುಳುಗುತ್ತೇನೆ.

ಹೇಗೆ ಬದುಕುಳಿಯುವುದೆಂಬುದನ್ನು ಬೆಳಗ್ಗಿನಿಂದಲೂ ಲೆಕ್ಕಾಚಾರಮಾಡುತ್ತಿದ್ದೇನೆ. ಬೈರೂತ್‌ನಲ್ಲಿ ಎಲ್ಲೋ, ಯಾವುದೋ ಕಟ್ಟಡದ ತುದಿಯ ಹತ್ತಿರ ನನ್ನನ್ನು ಬಂಧಿಸಿಡಲಾಗಿದೆ. ಅತ್ಯಂತ ಕೆಟ್ಟ ಘಳಿಗೆ ಮುಗಿದಿದೆಯೆಂದು ಯೋಚಿಸಲು ಇಷ್ಟಪಡುತ್ತೇನೆ. ನನ್ನನ್ನು ಪಶ್ನಿಸಿದ್ದಾರೆ, ಹೊಡೆದಿದ್ದಾರೆ ಹಾಗೂ ಹುಸಿ ಮರಣ ದಂಡನೆಯೂ ನಡೆದಿದೆ. ನನ್ನನ್ನು ವಿಚಾರಣೆಗೆ ಗುರಿಪಡಿಸುತ್ತಿರುವವರು ಈಗ ನಾನೊಬ್ಬ 'ಒಳ್ಳೆಯ ಮನುಷ್ಯ' ಎಂದು ಯೋಚಿಸುತ್ತಿದ್ದೇವೆ ಎನ್ನುತ್ತಾರೆ. ಆದರೂ ನನ್ನನ್ನು ಸರಪಳಿಯಿಂದ ಬಂಧಿಸಲಾಗಿದೆ, ಪುಸ್ತಕಗಳೂ ಇಲ್ಲದೆ ಸಂಪೂರ್ಣವಾಗಿ ಒಬ್ಬಂಟಿಗನಾಗಿದ್ದೇನೆ.

ನನ್ನ ಅತ್ಯಲ್ಪ ಆಸ್ತಿಯ ಕಡೆ ಕಣ್ಣು ಹಾಯಿಸುತ್ತೇನೆ—ತೆಳ್ಳನೆಯ ಬುರುಗು ಹಾಸಿಗೆ, ಉಪಯೋಗಿಸಿದ್ದ ಮೂರು ಕಂಬಳಿಗಳು, ನೀರಿನ ಹೂಜಿ ಮತ್ತು ಮಕ್ಕಳಗಿಂಡಿ. ಮೂಲೆಯಲ್ಲಿ ಮೂತ್ರ ವಿಸರ್ಜನೆ ಮಾಡುವುದಕ್ಕೊಂದು ಸೀಸೆ.

"ನಿನಗೇನಾದರೂ ಬೇಕೆ?" ಎಂದು ನನ್ನನ್ನು ಕಾವಲಿರುವ ಪಹರೆಯವನು ಯಾವಾಗಲೂ ಕೇಳುತ್ತಾನೆ. ನಾನವನನ್ನು ನೋಡುವುದೇ ಇಲ್ಲ. ಅವನು ಬಾಗಿಲನ್ನು ತಟ್ಟುತ್ತಿದ್ದಂತೆಯೇ, ಅವನು ಒಳಗೆ ಬರುವುದರೊಳಗೆ, ನಾನು ನನ್ನ ಕಣ್ಣಿಗೆ ಬಟ್ಟೆಯನ್ನು ಕಟ್ಟಿಕೊಳ್ಳಬೇಕು. "ದಯವಿಟ್ಟು ಒಂದು ಪುಸ್ತಕವನ್ನು ತಂದು ಕೊಡುತ್ತಿಯಾ?" ಎಂದು ಬೇಡಿಕೊಳ್ಳುತ್ತೇನೆ. "ಪುಸ್ತಕ ಇಲ್ಲ" ಎಂದು ಉತ್ತರಿಸಿ ಬಾಗಿಲನ್ನು ಮುಚ್ಚಿ ಬೀಗ ಹಾಕುತ್ತಾನೆ.

ಮೂಲ : ನವೆಂಬರ್ ರೀಡರ್ಸ್ ಡೈಜೆಸ್ಟ್‌ನ 'ಟೆರ್ರಿ ವೇಟ್' ಅವರ ಇಂಗ್ಲಿಷ್ ಲೇಖನ.

ಕೆಲವು ವಾರಗಳ ಹಿಂದೆ ನನಗೆ ಜ್ವರ ಬಂದಿತ್ತು. ಪಹರೆಯವನು ನನಗೊಂದಿಷ್ಟು ಔಷಧಿ ತಂದುಕೊಟ್ಟ ಔಷಧಿಯ ಪೊಟ್ಟಣ ದೊಳಗೆ ವೈದ್ಯಕೀಯ ಟಿಪ್ಪಣಿಯ ಚೀಟಿ ಇತ್ತು. ನನ್ನ ಬಳಿ ಕನ್ನಡಕವಿಲ್ಲದಿದ್ದರೂ, ಮೇಣದ ಬತ್ತಿಯ ಹತ್ತಿರ ಚೀಟಿಯನ್ನು ಹಿಡಿದರೆ ಪದಗಳನ್ನಷ್ಟೇ ಗುರುತಿಸಬಹು ದಿತ್ತು. ಬಾಯಾರಿದವನು ತನ್ನ ನೀರಿನ ಸೀಸೆಯ ತಳದಲ್ಲಿಯ ಕೊನೆಯ ಹನಿ ಗಳನ್ನು ಸವಿಯುವಂತೆ ನಾನು ಆ ಕಾಗದ ದಲ್ಲಿದ್ದ ಬರಹವನ್ನು ಸವಿಯುತ್ತಿದ್ದೆ.

ಆ ರಾತ್ರಿ ನನ್ನ ಕೋಣೆಯನ್ನು ಹುಡುಕ ಲಾಯಿತು. ನನ್ನ ಹಾಸಿಗೆಯ ಕೆಳಗೆ ಆ ಚೀಟಿ ಸಿಕ್ಕಿತು. "ಏನಿದು"

"ನನಗೆ ಗೊತ್ತಿಲ್ಲ. ನನಗದು ಕಾಣುವು ದಿಲ್ಲ." ಪಹರೆಯವರು ಹೊರಟುಹೋದರು ಅವಮಾನ, ಕೋಪ, ಹೆದರಿಕೆಗಳಿಂದ ಬಳಲಿ ಕಂಬಳಿ ಹೊದ್ದು ಮಲಗಿದೆ. ನಾನು ಆ ಚೀಟಿಯನ್ನು ಮತ್ತೆ ನೋಡಲೇ ಇಲ್ಲ.

ನಾನು ಸೂರ್ಯನ ಸುಖೋಷ್ಣವನ್ನನು ಭವಿಸಿ ಎಷ್ಟು ದಿನಗಳಾದವು? ಒಂಭತ್ತು ತಿಂಗಳೆ? ಹನ್ನೆರಡೆ? ದೇವರ ದಯೆಯಿಂದ ನನ್ನ ಪ್ರತಿಬಿಂಬವನ್ನು ನಾನು ಕನ್ನಡಿಯಲ್ಲಿ ನೋಡಲಾರೆ ಆ ನನ್ನ ಹಾಳಾದ ಸ್ನಾಯು ಗಳು, ಉದ್ದವಾಗಿ ಬೆಳೆದು ಬಿಳಿ ಬಣ್ಣಕ್ಕೆ ತಿರುಗುತ್ತಿರುವ ಗಡ್ಡ! ಇಷ್ಟಾದರೂ ನಾನು ಬದುಕುಳಿಯುವುದಕ್ಕೆ ಉಗ್ರವಾಗಿ ಬಯಸು ತ್ತೇನೆ. ಸಾಂತ್ವನ ನೀಡುವ ಭಗವಂತನ ಸಾನ್ನಿಧ್ಯವನ್ನು ಅನುಭವಿಸಲು ಇಚ್ಛಿಸು ತ್ತೇನೆ, ಆದರೆ ಅನುಭವಿಸಲಾರೆ ನನಗೆ ನಂಬಿಕೆಯಿದೆ. ಮನುಷ್ಯನ ಕೃತ್ಯಗಳಿಂದಾ ಗಲೀ, ಪ್ರಕೃತಿಯ ಹಾವಳಿಯಿಂದಾಗಲೀ ನಾಶವಾಗದ ಭಾಗವೊಂದು ನನ್ನಲ್ಲಿದೆ ಯೆಂದು ನಂಬುತ್ತೇನೆ. ಆದರೂ ಸಂಪೂರ್ಣ ವಾಗಿ ಏಕಾಂಗಿಯಾಗಿದ್ದೇನೆ.

ಬಳಿಕ ನನಗೆ ಕಂಡಿದ್ದು: ಬಾಗಿಲಿನ ಸಂದಿಯಿಂದ ನುಸುಳಿ ಬಂದು ನನ್ನ ಕೋಣೆಯ ಮೂಲೆಯನ್ನು ಕಾಂತಿಗೊಳಿಸು ತ್ತಿರುವ ಸಣ್ಣ ಬಿಸಿಲುಕೋಲು. ನಾನು ಆ ಬೆಳಕನ್ನು ತೀಕ್ಷ್ಣವಾಗಿ ಗಮನಿಸುತ್ತೇನೆ. ಆ ಕಿರಣಗಳು ಭೂಮಿಯ ಈ ಮೂಲೆ ಯನ್ನು ತಲಪಲು ಕೋಟ್ಯಂತರ ಕಿಲೋ ಮೀಟರ್‌ಗಳ ಪ್ರಯಾಣವನ್ನು ಮಾಡಿವೆ. ಉರಿಯುವ ತೀಕ್ಷ್ಣತೆಯಿಂದ ಅವು ಝಗ ಝಗಿಸುತ್ತಿವೆ. ಬೆಳಕು ಕತ್ತಲೆಯನ್ನು ಗೆದ್ದಿದೆ ಎನ್ನುವುದನ್ನು ನೆನಪಿಸುತ್ತಿವೆ.

ನನ್ನನ್ನು ಬಂಧಿಸಿರುವವರು ಏನೇ ಮಾಡಲಿ, ನಾನು ಈ ಅದ್ಭುತ, ಜಟಿಲ ಜಗತ್ತಿನ ಒಂದು ಭಾಗವಾಗಿ ಉಳಿದೇ ಉಳಿಯುತ್ತೇನೆ. "ನೀವು ನನ್ನ ದೇಹವನ್ನು ಛಿದ್ರ ಛಿದ್ರ ಮಾಡಬಹುದು. ಆದರೆ ನನ್ನ ಆತ್ಮ ನಿಮ್ಮ ಅಧೀನದಲ್ಲಿರಲಾರದು" ಎಂದು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತೇನೆ.

ಭಗವಂತ ಜೀವನದ ನಿಜ ಅಂತರಾಳ ದಲ್ಲಿದ್ದಾನೆ—ಪೂರ್ಣ ಜೀವನವನ್ನು ನಡೆಸಲು ಈ ರಹಸ್ಯವನ್ನು ಗ್ರಹಿಸುವು ದೊಂದೇ ಏಕೈಕ ಮಾರ್ಗವೆಂದು ಬೆಳಕು ನನ್ನನ್ನು ನೆನಪಿಸುತ್ತದೆ. ಯಾವ ಕ್ಷಣ ದಲ್ಲಾದರೂ ಈ ಬೆಳಕು ಮರೆಯಾಗ ಬಹುದು.

ಮಸೀದಿಯಲ್ಲಿ ಸಂಜೆಯ ಪ್ರಾರ್ಥನೆಗಳನ್ನು ಪಠಿಸುತ್ತಾರೆ ಮತ್ತು ಒತ್ತೆಯಾಳಾಗಿ ಮತ್ತೊಂದು ದಿನ ಕಳೆಯುತ್ತದೆ.

ಕಳೆದ ರಾತ್ರಿ ನನಗೊಂದು ಕನಸು ಬಿತ್ತು. ನಗುತ್ತಾ ಎದ್ದೆ. ತನ್ನ ಸುಪ್ತ ಚೇತನದ ಜೊತೆ ಸ್ನೇಹ ಬೆಳೆಸಿಕೊಂಡರೆ, ಅದು ಮನುಷ್ಯನಿಗೆ ಆತನ ಅತ್ಯಂತ ಕಠಿಣ ಕ್ಷಣಗಳಲ್ಲಿ ಸಹಾಯ ಮಾಡುತ್ತದೆಂದು ಸ್ವಿಸ್ ಮನಃಶಾಸ್ತ್ರಜ್ಞ ಕಾರ್ಲ್ ಯೂಂಗ್ ಹೇಳಿಲ್ಲವೆ?

ಕೆಳಗೆ ರಸ್ತೆಯಲ್ಲಿಯ ಮಕ್ಕಳ ಸಂತಸದ ಧ್ವನಿ ಮೆಲ್ಲಗೆ ಮೇಲೇರಿಬಂದು ನನ್ನ ಕುಟುಂಬದ ನೆನಪನ್ನು ತರುತ್ತದೆ. ನನ್ನ ನೆನಪಿನ ಓಣಿಗಳಲ್ಲಿ ನಾನು ದಿನವಿಡೀ ನಡೆದಾಡುತ್ತೇನೆ. ವಿಶ್ರಮಿಸಿಕೊ ಮತ್ತು ನಲವತ್ತು ವರ್ಷ ಹಿಂದಿನ ಕಂಪನ್ನು, ನಾದವನ್ನು, ದೃಶ್ಯಗಳನ್ನು ನೆನಪಿಸಿಕೊ—ಎಂದು ನನಗೆ ನನ್ನ ಸುಪ್ತ ಚೇತನ ಹೇಳುತ್ತದೆ.

ಅದೊಂದು ತಂಪಾದ ಬೇಸಗೆ ಮುಂಜಾನೆ, ಬಾಲ್ಯದ ಮನೆಯ ದಾರಿಯಲ್ಲಿ ಸೈಕಲ್ ಓಡಿಸುತ್ತಿದ್ದೇನೆ. ನನ್ನ ಒಡನಾಡಿ ಮೈಕೇಲ್ ಜೊತೆ ಸೇರಿಕೊಳ್ಳುತ್ತಾನೆ. ಇಬ್ಬರೂ ಓಣಿಗಳಲ್ಲಿ ಜೊತೆಯಾಗಿ ಸೈಕಲ್ ಓಡಿಸುತ್ತೇವೆ. ದಾರಿಯಲ್ಲಿ ಪೇಪರ್ ಹಂಚುವ ಹುಡುಗ, ಬ್ರೆಡ್ ತುಂಬಿದ ಗಾಡಿ ಇವರನ್ನು ಹಾದುಹೋಗುತ್ತೇವೆ. ಮನೆಮುಂದಿನ ಮೆಟ್ಟಿಲನ್ನು ಗುಡಿಸುತ್ತಿರುವ ಹೆಂಗಸೊಬ್ಬಳು ಕ್ಷಣಕಾಲ ಕೆಲಸನಿಲ್ಲಿಸಿ ನಮ್ಮನ್ನು ದಿಟ್ಟಿಸಿ ನೋಡುತ್ತಾಳೆ.

ಬೆಟ್ಟಕ್ಕೆ ಹೋಗುವ ದೀರ್ಘವಾದ, ಕಠಿಣ ದಾರಿಯನ್ನು ತುಳಿಯಲು ಆರಂಭಿಸುತ್ತೇವೆ. ಒಣಗಿದ ಕಲ್ಲು ಗೋಡೆಗಳ ಹಿಂದೆ ಕುರಿಗಳು ಮೇಯುತ್ತಿವೆ. ಇಷ್ಟರಲ್ಲೇ ಊರು ನೂರಾರು ಮೀಟರ್ ಕೆಳಗಿದ್ದಂತೆ ಕಾಣುತ್ತದೆ. ಎಂಟು ಕಿಲೋಮೀಟರ್ ಉದ್ದದ ಆಹ್ಲಾದಕರ ಪ್ರಯಾಣದಿಂದ ನಾವು ಕಾಯುತ್ತಿದ್ದ 'ಆ ಕ್ಷಣ' ಬರಲಿದೆ.

ಉಕ್ಕಿನ ಸರಪಳಿ ನನ್ನ ಕಾಲನ್ನು ಇನ್ನೂ ಬಿಗಿದೇ ಇದೆ. ಲೋಹದ ಬಾಗಿಲು ಬಿಗಿಯಾಗಿಯೇ ಮುಚ್ಚಿದೆ. ಆದರೆ ನನ್ನ ನೆನಪಿನ ಓಣಿಗಳಲ್ಲಿ ನಾನು ಮಾತನಾಡುತ್ತೇನೆ, ನಗುತ್ತೇನೆ, ಅಳುತ್ತೇನೆ. ನನ್ನ ದೇಹ ಬಂಧನದಲ್ಲಿದ್ದರೂ ನನ್ನ ಅಂತರಾಳದಲ್ಲಿ ಸ್ವತಂತ್ರನಾಗಿದ್ದೇನೆ.

ಬೆಳಕಿನ ಸಣ್ಣ ಕೋಲು ನನ್ನ ಕೋಣೆಯನ್ನು ಕ್ಷಣಕಾಲ ಪ್ರವೇಶಿಸುತ್ತದೆ. ಮಗುವಾಗಿದ್ದಾಗ ಚರ್ಚಿನಲ್ಲಿ ನಾನು ನೂರಾರು ಬಾರಿ ಹೇಳಿದ್ದ ಪ್ರಾರ್ಥನೆ ಜ್ಞಾಪಕಕ್ಕೆ ಬರುತ್ತದೆ:

ನಮ್ಮಂಧಕಾರದಲಿ ಬೆಳಕ ಬೆಳಗೆಂದು
ಬೇಡುವೆವು ಹೇ ಪ್ರಭುವೆ
ನಿನ್ನ ಅಪಾರ ಕೃಪೆಯಿಂದ, ಪ್ರಭು ಏಸುವೆಮ್ಮನ್ನು
ಸಕಲ ಕಷ್ಟಗಳಿಂದ, ಈ ಇರುಳಿನರ್ಥಗಳಿಂದ
ಕಾಯ್ವಂತೆ ನೀ ಮಾಡು ಹೇ ಪ್ರಭುವೆ

ತಥಾಸ್ತು

ನಾನು ಒಬ್ಬಂಟಿಗನಾಗಿ ಈಗ ಮೂರು ವರ್ಷಗಳಾಗಿವೆ. ಕಳೆದ ಕೆಲವು ದಿನಗಳಿಂದ ನಾನು ಮನಸ್ಸಿನ ಗಣಿತನದಲ್ಲಿ ತಲ್ಲೀನನಾಗಿ

ದ್ದೇನೆ. ಬೆಳಕಿನ ವೇಗವನ್ನು ನೆನಪಿನಲ್ಲಿಟ್ಟುಕೊಂಡು, ಅದರಿಂದ ಸೂರ್ಯ ಮತ್ತು ಭೂಮಿಯ ನಡುವಿನ ದೂರವನ್ನು ಲೆಕ್ಕ ಮಾಡಿದ್ದೇನೆ. ನನ್ನ ಬಳಿ ಕಾಗದವಾಗಲೀ, ಪೆನ್ಸಿಲ್ ಆಗಲೀ ಇಲ್ಲದಿರುವುದರಿಂದ, ಪ್ರತಿ ಅಂಕಿಯನ್ನೂ ನನ್ನ ತಲೆಯಲ್ಲಿಯೇ ಇಟ್ಟುಕೊಳ್ಳಬೇಕು. ನನ್ನ ಗಮನವನ್ನು ತೀಕ್ಷ್ಣವಾಗಿ ಕೇಂದ್ರೀಕರಿಸಬೇಕು.

ಬಳಲಿದ್ದೇನೆ, ಆದರೂ ವಿಸ್ಮಯಕಾರಿಯಾದ ನವಚೈತನ್ಯದಿಂದ ಮನಸ್ಸು ಪುಸ್ತಕಗಳ ಕಡೆಗೆ ತಿರುಗುತ್ತದೆ. ಪ್ರಾಯಶಃ ನನ್ನ ತಲೆಯಲ್ಲಿ ಆತ್ಮಕಥೆಯನ್ನು ಬರೆದಿಡಬಹುದೇನೊ? ಇದಕ್ಕೆ ನೆನಪು, ಆಲೋಚನೆ ಅಗತ್ಯ. ನಾನು ಮಗುವಾಗಿದ್ದುದನ್ನು ಜ್ಞಾಪಿಸಿಕೊಳ್ಳುವುದರ ಮೂಲಕ ಪ್ರಾರಂಭಿಸುತ್ತೇನೆ. ನಮ್ಮಮ್ಮ ನನ್ನನ್ನು ಕೈಹಿಡಿದು ನಡೆಸುತ್ತಾಳೆ. ಹಳ್ಳಿಯ ಓಣಿಗಳಲ್ಲಿ ತೃಪ್ತಿ ಮತ್ತು ನಿಶ್ಚಿಂತೆಯಿಂದ ಓಡಾಡುತ್ತೇವೆ.

ನನಗೆ ನಂಬಲೇ ಆಗುತ್ತಿಲ್ಲ. ಇಂದು ಬೆಳಿಗ್ಗೆ ಪಹರೆಯವನು ತಿಂಡಿಯನ್ನು ತಂದಾಗ ಏನನ್ನೊ 'ತಗೊ' ಎಂದ ನಾನು ಕೈಚಾಚಿದೆ.

'ನಿಧಾನವಾಗಿ ಓದು' ಎಂದವನೆ, ಕೋಣೆಯಿಂದ ಹೊರಟುಹೋದ. ನನ್ನ ಕಣ್ಣಿಗೆ ಕಟ್ಟಿದ್ದ ಬಟ್ಟೆಯನ್ನು ಬೇಗ ಪಕ್ಕಕ್ಕೆ ಸರಿಸಿದೆ. ಕೊನೆಗೂ ನನಗೊಂದು ಪುಸ್ತಕ ದೊರಕಿತು. ಫ್ರೀಯಾ ಸ್ಟಾರ್ಕ್ ಬರೆದಿರುವ 'ಬಿಯಾಂಡ್ ಯೂ ಫ್ರೆಟ್ಸ್' ಎಂಬ ಪುಸ್ತಕ. ಸಂಭ್ರಮದಿಂದ ಪುಸ್ತಕದ ಮೊದಲನೆಯ ಪುಟವನ್ನು ನೋಡಿದೆ,ಆದರೆ ನನ್ನ ಸಂತಸ ಬೇಗ ಇಳಿದು ಹೋಯಿತು. ಅಕ್ಷರಗಳು ಬಹಳ ಮಬ್ಬಾಗಿದ್ದವು. ನನ್ನ ದೃಷ್ಟಿ ಕೂಡ ವೈದ್ಯಕೀಯ ಟಿಪ್ಪಣಿಯ ಚೀಟಿಯನ್ನು ಓದಿದ್ದಾಗ ಇದ್ದಿದ್ದಕ್ಕಿಂತಲೂ ಮಂದವಾಗಿತ್ತು.

ಊಟದ ಸಮಯಕ್ಕೆ ಪಹರೆಯವನು ಹಿಂದಿರುಗಿದಾಗ, "ನನ್ನ ಹತ್ತಿರ ಓದುವ ಕನ್ನಡಕವಿಲ್ಲ" ಎನ್ನುತ್ತೇನೆ.

"ಏನೂ ತೊಂದರೆ ಇಲ್ಲ" ಎಂದವನು ಉತ್ತರಿಸುತ್ತಾನೆ.

"ನಿನಗಂತೂ ಏನೂ ತೊಂದರೆ ಇಲ್ಲ" ಎಂದು ಗೊಣಗಿಕೊಳ್ಳುತ್ತೇನೆ. ನಾನು ಹೇಳಿದ್ದು ಅವನಿಗೆ ನಿಜವಾಗಿ ಅರ್ಥವಾಯಿತೆ? ಎಂಬುದೇ ನನಗೆ ಸಂದೇಹ.

ಸಂಜೆಗೆ ಅವನು ಹಿಂದಿರುಗಿದಾಗ 'ತಗೊ' ಎಂದು ನನ್ನ ಕೈಗೆ ಒಂದು ಸಣ್ಣ ಭೂತಗಾಜನ್ನು ಕೊಡುತ್ತಾನೆ. ಈಗ ನಾನು ಒಂದೊಂದೆ ಪದಗಳನ್ನು ನೋಡುವುದಕ್ಕಾಗುತ್ತದೆ. ಕೊನೆಗೂ ನಾನು ಓದುವುದಕ್ಕೆ ಆರಂಭಿಸುತ್ತೇನೆ.

ಫ್ರೀಯಾ ಸ್ಟಾರ್ಕ್ ಪುಸ್ತಕವನ್ನು ನನಗಾಗಿಯೇ ಬರೆದಂತಿದೆ. ಪುಸ್ತಕ ಹೀಗೆ ಪ್ರಾರಂಭವಾಗಿದೆ: "ನಾವು ಅವನ್ನು ಬಯಸುವುದರಿಂದ, ಹಲವಾರು ವಸ್ತುಗಳು ಹೇಗೆ ನಮಗೆ ಇಷ್ಟಕರವಾಗಿರುತ್ತವೆಂಬುದನ್ನು ನಾನು ಗ್ರಹಿಸಿದ್ದೆ; ಹಾಗೆಯೆ ಅವುಗಳಿಲ್ಲದೆಯೂ ಜೀವನವನ್ನು ಎಷ್ಟು ಅನುಭವಿಸಬಹುದೆಂಬುದನ್ನೂ ಗ್ರಹಿಸಿದ್ದೆ. ಸುಖವನ್ನು ಕೊಡುವ ವಸ್ತುಗಳು ನಮ್ಮ ಗುಲಾಮರಾಗಿರಬೇಕೆ ವಿನಾ ನಮ್ಮ ಒಡೆಯರಾಗಿರಬಾರದೆಂಬುದನ್ನು ನಾನು

ಕಲಿತಿದ್ದೇನೆ ಹಾಗೂ ಕಲಿಯುತ್ತಲೇ ಇದ್ದೇನೆ."

ಮೂರು ವರ್ಷಗಳು ನಾಲ್ಕಕ್ಕೆ ಸೇರಿಕೊಳ್ಳುತ್ತವೆ, ನಾಲ್ಕು ಐದಕ್ಕೆ ಸೇರುತ್ತದೆ, ತಟಕ್ಕನೆ ಅಂದು ನಾನು ಬಿಡುಗಡೆಯಾಗುತ್ತೇನೆಂದು ನನಗೆ ತಿಳಿಸುತ್ತಾರೆ. ಯೋಚಿಸುವುದಕ್ಕಾಗಲೀ, ಚಿಂತಿಸುವುದಕ್ಕಾಗಲೀ ವೇಳೆ ಇಲ್ಲ. ನನ್ನ ಕಣ್ಣಿಗೆ ಹೊಸಬಟ್ಟೆಯನ್ನು ಕಟ್ಟಲಾಗುತ್ತದೆ. ಕೋಣೆಯಲ್ಲಿ ಕಾಯುತ್ತ ಕುಳಿತಿರುವಾಗ ನೆಲದ ಮೇಲಿದ್ದ ಭೂತಗಾಜನ್ನು ನೋಡುತ್ತೇನೆ. ಅದನ್ನು ಮೃದುವಾಗಿ ಎತ್ತಿ, ಹಿಂದೆ ಕಣ್ಣಿಗೆ ಕಟ್ಟಿಕೊಳ್ಳುತ್ತಿದ್ದ ಜಾಲಾದ ಬಟ್ಟೆಯೊಳಗೆ ಮಡಿಸಿಟ್ಟು, ಎರಡನ್ನೂ ನನ್ನ ಕಿಸೆಗೆ ಸೇರಿಸುತ್ತೇನೆ. ನನ್ನನ್ನೆಲ್ಲಿಗೇ ಒಯ್ದರೂ ಅವು ನನ್ನ ಜೊತೆಯಲ್ಲಿಯೇ ಬರುತ್ತವೆ.

೧೭೬೩ ದಿನಗಳು ಒತ್ತೆಯಾಳಾಗಿದ್ದು, ಬಿಡುಗಡೆ ಹೊಂದಿ, ಬ್ರಿಟನ್ನಿನಲ್ಲಿರುವ ನನ್ನ ಕುಟುಂಬದವರು ಹಾಗೂ ಸ್ನೇಹಿತರನ್ನು ಸೇರಿ ಹಲವು ವರ್ಷಗಳೇ ಕಳೆದಿವೆ. ವೈದ್ಯಕೀಯ ಚಿಕಿತ್ಸೆ ಪಡೆದು, ಅನಂತರ, ಆ ಸುದೀರ್ಘ ಏಕಾಂತದ ದಿನಗಳಲ್ಲಿ ನನ್ನ ತಲೆಯಲ್ಲಿ ನಾನು ಬರೆದಿದ್ದ ಪುಸ್ತಕವನ್ನು, ಕಾಗದದ ಮೇಲೆ ಬರೆಯಬೇಕೆಂದು ತೀರ್ಮಾನಿಸಿದೆ. ಕೇಂಬ್ರಿಜ್ ವಿಶ್ವವಿದ್ಯಾಲಯದ ಪಂಡಿತ ಮಂಡಳಿಯ ಗೌರವ ಸದಸ್ಯನಾಗಿ (ಫೆಲೊ) ಕೆಲಸಮಾಡಲು ಅಲ್ಲಿಯೇ ನೆಮ್ಮದಿಯಿಂದ ನೆಲಸಿದ್ದೆ.

ನನ್ನ ಪುಸ್ತಕದ ಹಸ್ತಪ್ರತಿ ಬರೆದು ಮುಗಿದಾಗ, ಒಂದು ವಿಶೇಷ ಭೋಜನ ಕೂಟದ ವ್ಯವಸ್ಥೆಯಾಗಿತ್ತು. ನಾನೊಂದು ಭಾಷಣ ಮಾಡಬೇಕಿತ್ತು. ಆ ಸಂದರ್ಭವನ್ನು ಕಾಲೇಜಿಗೆ ಬಂದು ಸಣ್ಣ ಕಾಣಿಕೆ ಕೊಡಲು ಉಪಯೋಗಿಸಬೇಕೆಂದು ತೀರ್ಮಾನಿಸಿದೆ. ಊಟದ ಬಳಿಕ ಒಂದೆರಡು ಮಾತುಗಳನ್ನಾಡಿ, ಕಾಣಿಕೆಯನ್ನು ಕೊಡಲೆಂದು ಲಕೋಟೆಯನ್ನು ಕೈಗೆತ್ತಿಕೊಂಡೆ. ಗಾಬರಿಯಾಯಿತು—ಲಕೋಟೆ ಖಾಲಿ.

ಕಾಲೇಜಿನ ಮುಖ್ಯಸ್ಥರು ಸಣ್ಣ ವಿರಾಮವೊಂದನ್ನು ಘೋಷಿಸಿದರು. ಕಳೆದುಹೋದ ವಸ್ತುಗಳನ್ನು ಹುಡುಕಲು ನನ್ನ ಕೊಠಡಿಗೆ ಓಡಿದೆ. ನನ್ನ ಕಣ್ಣಿಗೆ ಕಟ್ಟಲು ಉಪಯೋಗಿಸುತ್ತಿದ್ದ ಜಾಲಾದ ಬಟ್ಟೆ ಮತ್ತು ನಾನು ಓದಲು ಉಪಯೋಗಿಸುತ್ತಿದ್ದ ಮುರಿದ ಭೂತಗಾಜು—ಇವರೆಡೂ ನನ್ನ ಹಾಸಿಗೆಯ ಮೇಲಿದ್ದುವು. ಅವುಗಳಿಗೆ ನನ್ನನ್ನು ಬಿಟ್ಟುಹೋಗಲು ಇಷ್ಟವಿಲ್ಲವೇನೋ ಎನ್ನುವಂತಿತ್ತು—ಅವು ನನ್ನ ಜೊತೆ ಅಷ್ಟು ದಿನಗಳಿದ್ದುವು. ಆದರೆ ಹಿಂದಿರುಗಿದವನೇ ಆ ಎರಡು ಅಮೂಲ್ಯ ವಸ್ತುಗಳನ್ನು ನೀಡಿದೆ. ಅವು ಇಂದಿಗೂ ಕಾಲೇಜಿನಲ್ಲಿವೆ.

ನಾನು ಒಂಟಿಯಾಗಿದ್ದ ದಿನಗಳು ಈಗ ಕೇವಲ ನೆನಪು—ಕಾಡುವ ನೆನಪಲ್ಲ, ಆದರೆ ನನ್ನನ್ನು ಪೋಷಿಸುತ್ತಿರುವ ನೆನಪು. ಆ ದಿನಗಳಲ್ಲಿ ನನಗೆ ಅಷ್ಟೊಂದು ಭರವಸೆಯನ್ನು ನೀಡಿದ ಬಿಸಿಲುಕೋಲನ್ನು ಸ್ಮರಿಸಿಕೊಳ್ಳುತ್ತೇನೆ. ಅದರಿಂದ ಜೀವನದ ನಿಗೂಢತ್ವದ ಅಂಚನ್ನು ಮುಟ್ಟಲು ಸಣ್ಣ ರೀತಿಯ

ಲ್ಲಾದರೂ ಅವಕಾಶ ಸಿಕ್ಕಿದೆಯೆಂಬುದನ್ನು ನಾನು ಬಲ್ಲೆ.

ಕಷ್ಟಗಳು ಮನುಷ್ಯನನ್ನು ನಾಶ ಮಾಡದಿರಬಹುದೆಂಬುದನ್ನು ನಾನು ಆ ಕರಾಳದಿನಗಳಲ್ಲಿ ಕಲಿತೆ. ಗಾಢ ಒಂಟಿತನವನ್ನು ಸೃಜನಶೀಲ ಏಕಾಂತತೆಯಾಗಿ ಹೇಗೆ ಪರಿವರ್ತಿಸಬಹುದೆಂಬುದನ್ನೂ ಕಲಿತೆ.

ನೀರನ್ನು ದ್ರಾಕ್ಷಾರಸವಾಗಿ ಪರಿವರ್ತಿಸಬಹುದೆಂದು ಹೇಳಿದ್ದು ಏಸು. ಅದನ್ನು ಹೇಳಿದಾಗ ಏಸುವಿನ ಮನಸ್ಸಿನಲ್ಲೇನಿತ್ತೆಂದು ಈಗ ನನಗರ್ಥವಾಗಿವೆ.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯುವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ

ಕತ್ತಲೆಯ ಸೆರೆಯಲ್ಲಿ ನವೆಯುತಿರುವಾಗ ನೆನೆ
ವತ್ಸಕೃಷ್ಣನ ಜನನ ರಾಮಸತಿ ಬಂಧನವ
ಚಿತ್ರಿಸಿಕೊ ಬರಲಿಹುದು ಬೆಳಕು ದಿಟ ವಸುದೇವ
ವಾತ್ಸಲ್ಯ ಹನುಮಂತ ನಿಷ್ಠೆಯಲಿ ಅತ್ರಿಸೂನು

ಬೆಂಕಿ ಬಿದ್ದಿದೆ ಮನೆಗೆ

ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ!
ಎಲ್ಲರೂ ಎದ್ದೆದ್ದು ಓಡಿ ಬನ್ನಿ!
ಕನ್ನಡದ ಗಡಿ ಕಾಯೆ,
ಗುಡಿ ಕಾಯೆ, ನುಡಿ ಕಾಯೆ
ಕಾಯಲಾರೆನೆ ಸಾಯೆ!
ಓ ಬನ್ನಿ ಬನ್ನಿ!

ಹಾರೆಗುದ್ದಲಿಕೊಡಲಿ ನೊಗನೇಗಿಲೆತ್ತುತಲಿ,
ನೆಲದಿಂದ ಹೊಲದಿಂದ ಹೊರಟು ಬನ್ನಿ!
ಕನ್ನಡದ ನಾಡಿಂದ
ಕಾಡಿಂದ ಗೂಡಿಂದ
ಕಡಲಿಂದ ಸಿಡಿಲಿಂದ
ಗುಡುಗಿ ಬನ್ನಿ!

—ಕಯ್ಯಾರ ಕಿಞ್ಞಣ್ಣರೈ

ನರಕದ ಎರಡು ಮುಖಗಳು

ಶೋಭಾ ಪ್ರಮೋದ್
ಮಹಾಲಕ್ಷ್ಮೀ ಏಜೆನ್ಸೀಸ್
ಮಂಗೋನ್ ಅಂಚೆ, ರಾಯಘಡ ಜಿಲ್ಲೆ
ಮಹಾರಾಷ್ಟ್ರ–೪೦೩೧೦೪

'ಕೆಟ್ಟು ಪಟ್ಟಣ ಸೇರು' ಎಂಬ ಹಳೆಯ ನಾಣ್ಣುಡಿ ಇಂದಿನ ಯಾಂತ್ರಿಕ ಯುಗದಲ್ಲಿ ತುಸು ಹೆಚ್ಚೇ ನಿಜವಾಗಿದೆ, ದುರದೃಷ್ಟ. ಈ ನಾಣ್ಣುಡಿಗೆ ಇಂದು ಇನ್ನೊಂದು ಛಾಯೆಯೂ ಬಂದಿದೆ. 'ಪಟ್ಟಣ ಸೇರಿ ಕೆಟ್ಟುಹೋಗು!' ಈ ಗಾದೆಗಳ ಪೂರ್ಣ ಅರ್ಥವಾಗಲು ಮುಂದಿನ ಎರಡು ವಾಸ್ತವ ಚಿತ್ರಣಗಳನ್ನು ಓದಬೇಕು.

೧. ಪಟ್ಟಣ ಸೇರುವುದೇಕೆ?

ದೂರದ ಕರ್ನಾಟಕದವರಿಗೆ, ಕೇರಳದ ಮಲೆಯಾಳಿಗಳಿಗೆ,—"ಅಹಾ! ಮುಂಬೈ ಬದುಕು ಎಷ್ಟೊಂದು ಸುಂದರ! ನೌಕರಿಯನ್ನು ಅರಸಲು ಮುಂಬೈಗೆ ಹೋಗಬೇಕು" ಎಂಬ ವಿಚಾರವು ಕನಸಿನಲ್ಲಿ ಹೊಳೆದು, ನನಸಿನಲ್ಲಿ ಮುಂಬೈಗೆ ಹೋಗುವ ಸಂಕಲ್ಪ ಮಾಡಿಕೊಂಡು ಅಲ್ಲಿ ಹೋಗಿ ಕೆಲವರ್ಷ ಗಟ್ಟಿಯಾಗಿ ಬೇರೂರಿದ ತರುವಾಯ, ಯಾಂತ್ರಿಕ ಜೀವನಕ್ಕೆ ಬೇಸತ್ತು "ಅಯ್ಯೋ! ಇಲ್ಲಿಗೆ ಯಾಕೆ ಬಂದೆ? ಊರಿನಲ್ಲಿದ್ದು ಸುಖ ಶಾಂತಿ ಸಮಾಧಾನದಿಂದ ಬಾಳಬಹುದಾಗಿತ್ತಲ್ಲ" ಎಂಬ ಜ್ಞಾನೋದಯವಾಗುವಾಗ ಅರ್ಧ ಆಯುಷ್ಯವೇ ಕಳೆದು ಹೋಗಿರುತ್ತದೆ!

"ಮುಂಬೈ" ಹೆಸರನ್ನು ಬ್ರಿಟಿಷರು ಬಾಂಬೆ ಎಂದು ತಪ್ಪಾಗಿ ಉಚ್ಚರಿಸಿದರೂ ಅದು ನಮಗೆ ಸುಂದರವಾಗಿ ಕಂಡು, ಭಾರತೀಯರೆಲ್ಲರೂ 'ಬಾಂಬೆ" ಎಂದರು! ಕೆಲವರ್ಷಗಳ ಹಿಂದೆ, ಶಿವಸೇನಾದ ಶ್ರೀ ಬಾಳ ಠಾಕರೆಯವರು "ಮುಂಬೈ" ಎಂದು ಮರುನಾಮಕರಣ ಮಾಡಿದ ಬಳಿಕ ಅದೀಗ "ಮುಂಬಯೀ" ಆಗಿದೆ!

ಬೆಸ್ತ ಹಾಗೂ ಕುಣಬಿ ಜನಾಂಗದವರ ಕುಲದೇವಿಯ ಹೆಸರು "ಮುಂಗಾಬೆ ಆಂಬಾ", "ಮುಂಬಾ ದೇವಿ" ಎಂಬ ಹೆಸರಿನ ದೇವಾಲಯವೂ ಇಲ್ಲಿದೆ. ಮುಂಬಾ+ಆಯಿ (ಆಯಿ = ಅಮ್ಮಾ) ಹೀಗೆ ಇದು "ಮುಂಬಯಿ" ಆಗಿರುತ್ತದೆ.

ಕುಲಾಬಾ, ಪರೇಲ್, ಸಾಲಸಟ್ಟಿ, ಮಾತುಂಗಾ, ವರ್ಝು, ಮಲಕಿಗಾಂವ್ ಹೀಗೆ ಏಳು ದ್ವೀಪಗಳ ಸಮೂಹವು. ೧೦ ಮೈಲಿ ಉದ್ದ, ೧ರಿಂದ ೩ ಮೈಲಿ ಅಗಲವಾಗಿದ್ದು ಪೋರ್ಚುಗೀಸ್ ರಾಜಕುಮಾರಿ ಕೆಥರಿನ್ ಆಫ್ ಬಗಾರ್ಂಝಾ, ಬ್ರಿಟನ್ನಿನ ಎರಡನೆಯ

ಚಾರ್ಲ್ಸ್‌ನನ್ನು ವಿವಾಹವಾದಾಗ ಮುಂಬಯಿಯನ್ನು ವರದಕ್ಷಿಣೆಯಾಗಿ ಕೊಟ್ಟರು. ಮುಂದೆ ಬ್ರಿಟಿಷ್ ಸರಕಾರವು ೧೦ ಪೌಂಡ್‌ನಲ್ಲಿ ಈಸ್ಟ್ ಇಂಡಿಯಾ ಕಂಪನಿಗೆ ಬಾಡಿಗೆಯನ್ನೂ ಕೊಟ್ಟಿತು. ಮುಂಬಾದೇವಿ, ಮಹಾಲಕ್ಷ್ಮೀ ತಾಡದೇವ್, ಗಾಮ್‌ದೇವಿ, ವಾಳಕೇಶ್ವರ, ವಜ್ರೇಶ್ವರಿ ನಾಗದೇವಿ ಹೀಗೆ ಹಲವು ಶಿವ-ಶಕ್ತಿಗಳ ದೇವಾಲಯಗಳು ಜನಪ್ರಿಯವಾಗಿವೆ.

ಗಿರ್‌ಗಾಂವ್, ಮಾಹೀಮ್ ಬೀಚುಗಳಲ್ಲಿ ವಿಹರಿಸಬಹುದು. ಕಡ್ಲೆಪುರಿ–ಭೇಲ್‌ಪುರಿಗಳನ್ನು ತಿಂದು (ಕೆಂಪು ಬಣ್ಣಕ್ಕೆ ತಿರುಗಿದ!) ಸಾಗರದ ಅಲೆ-ಅಲೆಗಳ ಅಬ್ಬರ-ಉಬ್ಬರಗಳ ವೈಭವ–ಸೂರ್ಯಾಸ್ತ–ಸೂರ್ಯೋದಯದ ಚೆಲುವನ್ನು ಸವಿಯಬಹುದು. ಮಕ್ಕಳಿಗಾಗಿಯೇ ಎಸ್ಸೆಲ್ ವರ್ಲ್ಡ್, ನೆಹರೂ ತಾರಾಲಯ ಹಾಗೂ ಅಸಂಖ್ಯಾತ ಉದ್ಯಾನಗಳಿವೆ. ಜೇಬು ತುಂಬ ಹಣವನ್ನಿಟ್ಟು, ಬೇಕಾದುದನ್ನು ಖರೀದಿಸಬಹುದು. ತಾಜ್, ಅಶೋಕ್ ಮುಂತಾದ ಪಂಚತಾರಾ ಹೋಟೆಲ್‌ಗಳಿವೆ. ಅವು ಬೇಡವಾದರೆ ಕಾಮತ್, ಉಡುಪಿ ಹೋಟೆಲ್‌ಗಳಿವೆ. ಗುಜರಾತಿ, ಪಂಜಾಬಿ ರೆಸ್ಟೋರೆಂಟ್‌ಗಳಿವೆ. ನಿಮ್ಮ ನಿಮ್ಮ ಆರ್ಥಿಕ ಸ್ಥಿತಿಗೆ ಅನುಕೂಲವಾಗುವಂತೆ ತಿಂಡಿ–ತಿನಿಸುಗಳು ಊಟ–ವಸತಿ ಸೌಲಭ್ಯ ಲಭ್ಯವಿದೆ. ಇಲ್ಲಿ ರಿಕ್ಷಾಗಳು ಕಡಿಮೆ. ಮುಂಬೈಯ ಈ ತುದಿಯಿಂದ ಆ ತುದಿಗೆ ಪ್ರಯಾಣಿಸಲು ಲೋಕಲ್ ಟ್ರೈನುಗಳಿವೆ, ಬಸ್ಸುಗಳಿವೆ; ಬಾಡಿಗೆ ಟ್ಯಾಕ್ಸಿಗಳೂ ದೊರೆಯುತ್ತವೆ. ಹೀಗೆ ಮನಬಂದಂತೆ ವಾಹನಗಳಲ್ಲಿ ಸಂಚರಿಸಿ, ಹೊಟ್ಟೆ ತುಂಬಾ ಉಂಡು, ಲಾಡ್ಜ್‌ಗಳಲ್ಲಿ ನೆಲೆಸಿ, ವಿಹಾರಧಾಮಗಳನ್ನು ಕಣ್ತುಂಬ ನೋಡಿ, ಕೊನೆಗೂ ಧನ್ಯನಾದೆ" ಎಂದು ಉದ್ಗರಿಸಬಹುದು! ಇದು ಸ್ವರ್ಗದ ಕಲ್ಪನೆ ಆಯಿತು.

ಆದರೆ....ಪ್ರತಿ ದಿನವೂ ನೌಕರಿಯನ್ನು ಅರಸಿ, ೫೦೦೦ಕ್ಕಿಂತ ಹೆಚ್ಚಿನ ನಿರುದ್ಯೋಗಿಗಳು ಬಂದು ಮುಂಬೈ ತುಂಬುತ್ತಿದ್ದಾರೆ. ಮಿತಿ ಮೀರಿದ ಜನಸಂಖ್ಯೆಯಿಂದಾಗಿ—ವಸತಿ ಸಮಸ್ಯೆ, ನೀರಿನ ಸಮಸ್ಯೆ ತೀವ್ರವಾಗಿದೆ. ಕೈಗಾರಿಕೆ, ಕಾರ್ಖಾನೆಗಳಿಂದ ಜಲಮಾಲಿನ್ಯ, ವಾಯುಮಾಲಿನ್ಯ, ಶಬ್ದ ಮಾಲಿನ್ಯಗಳನ್ನು ವರ್ಣಿಸಲು ಇನ್ನೊಂದು ಮಹಾಭಾರತವೇ ಸಾಲದು! ಬಸ್ಸಿನಲ್ಲಿ, ರೈಲಿನಲ್ಲಿ ನೂಕು ನುಗ್ಗಲು; ಉಸಿರಾಡಲೂ ಸಾಧ್ಯವಾಗದ. ನಾವು ನಿಜಕ್ಕೂ ಬದುಕಿ
ಇದ್ದೇವೆಯೇ? ಎಂದು ಮನಸ್ಸೇ ಪ್ರಶ್ನಿಸು
ವಂತಹ ಜನಜಂಗುಳಿಯಲ್ಲಿ ಹೇಗಾದರೂ
ಮಾಡಿ, ಆರಡಿ ದೇಹವನ್ನು ತುರುಕಿ
ಪ್ರಯಾಣಿಸಿ ಸ್ಟಾಪ್ ಬಂದಾಗ, ಜೀವ
ಹಿಡಿಯಾಗಿಸಿಕೊಂಡು ಇಳಿದು, ಸದ್ಯ ಬದು
ಕಿದೆ! ಎಂದು ನಿಟ್ಟುಸಿರು ಬಿಡುವ ಪರಿಸ್ಥಿ
ಯಿದೆ. ರಸ್ತೆಯಲ್ಲಿ ಸಂಚರಿಸಲಾದರೂ
ಸುಖವಿದೆಯೇ?! ಅಲ್ಲಿಯೂ ತಿಮುಕೊ
ತಿಮುಕು.

ಮುಂಬೈಯಲ್ಲಿ ೬೦೦ ಚ.ಕಿ.ಮಿ
ಭೂಮಿಯಲ್ಲಿ ೧೨ ದಶಲಕ್ಷ ಜನರು ವಾಸಿಸು
ತ್ತಿದ್ದಾರೆ. ಹೀಗಾಗಿ ಹತ್ತು–ಇಪ್ಪತ್ತ
ಅಂತಸ್ತಿನ ಕಟ್ಟಡಗಳು, ಗಗನಚುಂ
ಫ್ಲಾಟುಗಳು ಎಲ್ಲೆಡೆಯಲ್ಲಿ ಕಂಡುಬ
ತ್ತವೆ. ಕೊಳಚೆ ಪ್ರದೇಶ, ಸ್ಲಂ ಏರಿಯ
ಗಳು, ಜೋಪಡ ಪಟ್ಟಿಗಳನ್ನೂ ಕ

ತಿಂದದ್ದು ಶಾಂತಿಯಾಗುತ್ತದೆ. ಹೀಗೆ ವಿರೋಧಾಭಾಸಗಳ ತವರೂರು ಈ ಮುಂಬಯಿ! ಶ್ರೀಮಂತರು–ಕೋಟ್ಯಧಿಪತಿಗಳಾಗಿದ್ದರೆ — ಬಡವರು ಕಡುಬಡವರಾಗಿ ಕಳ್ಳತನ ಮಾಡಬೇಕಾಗಿ ಬಂದಿದೆ. ರೈಲಿನಲ್ಲಿ ಪಿಕ್‌ಪ್ಯಾಕೇಟ್ ಮಾಡುವವರಲ್ಲಿ ೫೦ ಭಾಗ ೧೫ಕ್ಕಿಂತ ಚಿಕ್ಕ ವಯಸ್ಸಿನ ಬಾಲಕರು. ಕಾರಣ "ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ!"

ದಾವುದ್ ಇಬ್ರಾಹಿಂ, ಅರುಣ ಗವಳಿ, ಅಮರನಾಯಕ, ಛೋಟಾ ರಾಜನ್.... ಇತ್ಯಾದಿ ಗೂಂಡಾಗಳೆಂಬ ತಿಮಿಂಗಿಲಗಳು ಮುಂಬೈ ಸಾಗರವನ್ನು ನುಂಗಿಬಿಟ್ಟವೆ. ಜನ-ಜೀವನ ಅಸ್ತವ್ಯಸ್ತವಾಗಿದ್ದು, ರಸ್ತೆಯಲ್ಲಿ ಗುಂಡಿಕ್ಕಿ ಕೊಲ್ಲುವುದು ಸಾಮಾನ್ಯವಾಗಿರುವಾಗ ಮಧ್ಯಮ ವರ್ಗದವರ ಜೀವ ಅಪಾಯದಲ್ಲಿದೆ. ಬಿಲ್ಡರ್‌ಗಳಿಗೆ, ಶ್ರೀಮಂತರಿಗೆ, ಕಾರ್ಖಾನೆ ಮಾಲಿಕರಿಗೆ ಜೀವಭೀತಿ ಅಪಾರವಾಗಿದೆ. ದಿನನಿತ್ಯ ಪತ್ರಿಕೆಯಲ್ಲಿ ಕೊಲೆ, ಸುಲಿಗೆ, ಮಾರಾಮಾರಿ ಸಾವಿನ ವಾರ್ತೆಗಳೇ ತುಂಬಿರುತ್ತವೆ.

ಮುಂಬಯಿ ತಿಂದು-ತಿಂದು ಹೊಟ್ಟೆಯನ್ನು ಬೆಳೆಸಿದ ಬಕಾಸುರನಂತಾಗಿದೆ. ಅದರ ಹೊಟ್ಟೆ ಉಬ್ಬಿದ್ದು ಒಡೆದು ಹೋಗುವ ಸ್ಥಿತಿಯಲ್ಲಿದೆ! ಆದ್ದರಿಂದ ಇನ್ನಾದರೂ ಹೊರಗಿನಿಂದ ಬರುವವರನ್ನು ತಡೆದು, ಈಗ ವಾಸಿಸುವವರಿಗೆ ಚೆನ್ನಾಗಿ ಬಾಳಲು ಸಕಲ ಅಗತ್ಯಗಳನ್ನು ರೂಪಿಸಬೇಕಾಗಿದೆ. ಆದಕ್ಕಾಗಿ "ಡಯಟ್"ನ ಆವಶ್ಯಕತೆ ಮುಂಬಯಿಗಿದೆ. ಚೆನ್ನಾಗಿ ಡಯಟ್ ಮಾಡಿಕೊಂಡು ತೆಳ್ಳಗಾದರೆ, ಮುಂಬೈ ಬದುಕಬಲ್ಲದು; ಅಲ್ಲಿರುವ ಪ್ರಜೆಗಳೂ ನೆಮ್ಮದಿ ಕಾಣಬಹುದು!

ಆದರೆ ಜನಸಂಖ್ಯೆ ಮಿತಿ ಮೀರಿಹೋದರೆ ನರಕತಾಣವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಈಗ ಹೇಳಿ ನೀವು ನೌಕರಿ ಅರಸಲು ಮುಂಬಯಿಗೆ ಬರುತ್ತೀರೋ?!

೨. ಪಟ್ಟಣದಲ್ಲಿ ಕೆಡುವುದು ಹೇಗೆ?

ಮಹಾರಾಷ್ಟ್ರದ ರಾಯಘಡ್ ಜಿಲ್ಲೆಯಲ್ಲಿ ಡೊಂಗರ್‌ಕೋಳಿ, ಮಹಾದೇವ ಕೋಳಿ, ಕುಣಬಿ ಎಂಬ ಹೆಸರಿನ ಕೆಳವರ್ಗವಿದೆ. ಇವರು ಮರಾಠರಲ್ಲ; ಆದಿವಾಸಿಗಳೂ ಅಲ್ಲ. ಬೇಸಾಯ ಇವರ ಮೂಲ ಉದ್ಯೋಗವಾಗಿದ್ದು, ತಮ್ಮ ಹೊಲಗದ್ದೆಗಳಲ್ಲಿ ಭತ್ತ, ರಾಗಿಗಳನ್ನು ಬಿತ್ತಿ ಜೀವನೋಪಾಯ ಸಾಗಿಸುತ್ತಾರೆ. ಆದರೆ ಬೇಸಾಯದಲ್ಲಿ ಅತ್ಯಾಧುನಿಕ ತಂತ್ರಗಳಾಗಲೀ, ಯಂತ್ರಗಳಾಗಲಿ ಇವರಲ್ಲಿ ಉಪಲಬ್ಧವಿಲ್ಲ. ಮಳೆಯನ್ನೇ ಆಶ್ರಯಿಸಬೇಕಾಗುತ್ತದೆ. ನೀರು ಕಡಿಮೆ ಪ್ರಮಾಣದಲ್ಲಿರುವ ಕಾರಣ, ಬೇಸಿಗೆಯಲ್ಲಿ ಬೇಸಾಯ ಮಾಡಲಾಗುವುದಿಲ್ಲ.

ಅನಕ್ಷರತೆ, ಬಡತನ, ಅಜ್ಞಾನ, ರೋಗ-ರುಜಿನಗಳು, ಸಾಲಾಗಿ ಹುಟ್ಟುವ ಮಕ್ಕಳು —ಮುಂತಾದ ಕಾರಣಗಳಿಂದಾಗಿ ಕಡು ಬಡತನದಲ್ಲಿ ಜೀವಿಸುತ್ತಾರೆ. ಸ್ವಲ್ಪ ಕಲಿತ ಬಳಿಕ, ಗಂಡು ಮಕ್ಕಳು ಮುಂಬೈ ಪೇಟೆಗೆ ಹೋಗಿ ಕೂಲಿ ಕೆಲಸ, ಮನೆಗೆಲಸ ಮಾಡಿ. ಹಬ್ಬ ಹರಿದಿನಗಳಲ್ಲಿ ಊರಿಗೆ ಬರುತ್ತಾರೆ. ಮೀನು, ಮಾಂಸ, ಹೆಂಡಗಳಲ್ಲದೆ ಇವರು ಉಸಿರಾಡಲಾರರು!

ಹೆಣ್ಣು ಮಕ್ಕಳು ಬಹುತೇಕ ಅನಕ್ಷರಸ್ಥರು. ಕುಟುಂಬ ನಿರ್ವಹಣೆಗಾಗಿ, ಮನೆ ಕೆಲಸಕ್ಕೆ ಹೋಗುತ್ತಾರೆ. ನೂರಿಪ್ಪತ್ತು ರೂಪಾಯಿಗಳಿಂದ ಹೊಟ್ಟೆ ತುಂಬುವುದೇ? ಹಾಗಾಗಿ ಶೇ.೯೦ ಹೆಚ್ಚಿನ ಹೆಂಗಸರು ವೇಶ್ಯಾ ವೃತ್ತಿಯನ್ನು ಕೈಗೊಳ್ಳುತ್ತಾರೆ. ಸಾಹುಕಾರರ, ಸರಕಾರೀ, ಖಾಸಗಿ ಸಂಸ್ಥೆಗಳ ಸಾಹೇಬರ ಮೊದಲಾದವರ ದೈಹಿಕ ಹಸಿವೆಯನ್ನು ಕಡಿಮೆಗೊಳಿಸುತ್ತಾರೆ. ಘಟ್ಟದ ಕಡೆಯ ಅಧಿಕಾರಿಗಳು ತಮ್ಮ ಹೆಂಡತಿಯರನ್ನು ಮನೆಯಲ್ಲಿ ಬಿಟ್ಟು ಬಂದು, ಒಂಟಿಯಾಗಿ ನೌಕರಿ ಮಾಡುವುದರಿಂದ, ಅವರಿಗೆ ಅಡುಗೆ ಕೆಲಸ ಮಾಡಿಕೊಡುವ ನೆಪದಲ್ಲಿ ಹಾಸಿಗೆ ಕಾರ್ಯವನ್ನೂ ಸಂಭಾಳಿಸುತ್ತಾರೆ. ಹೆಣ್ಣಿನ ಈ ಸ್ಥಿತಿ ಅತ್ಯಂತ ದಯನೀಯ.

ಮುಂಬೈಯ ಕೆಂಪು ದ್ವೀಪದಲ್ಲಿರುವ ಶೇ.೫೦ ಹೆಂಗಸರಿಗೆ ಏಯ್ಡ್ಸ್ ರೋಗ ಬಂದಿದೆ. ಪುಣೆಯ ಬುಧವಾರ ಪೇಟೆಯ ವೇಶ್ಯೆಯರಲ್ಲಿ ಬಹುಸಂಖ್ಯಾತರು (ಶೇ.೪೦ಕ್ಕಿಂತ ಹೆಚ್ಚು) ಏಯ್ಡ್ಸ್ ರೋಗಿಗಳು. ಇವರ ಸಹವಾಸ ಮಾಡಿಬಂದ ಕಾರಣ, ರಾಯಘಡ್ ತರುಣರಲ್ಲಿ ಶೇ. ೧೦ಕ್ಕಿಂತ ಹೆಚ್ಚಿನವರು ಏಯ್ಡ್ಸ್ ರೋಗದಿಂದ ಕಳೆದ ಎರಡು ವರ್ಷಗಳಲ್ಲಿ ನಿಧನರಾಗಿದ್ದಾರೆ! ಇದು ವಿಚಿತ್ರವಾದರೂ ಸತ್ಯ. ಕುಣಬಿ ಸಮಾಜದ, ಡೊಂಗರಕೋಳಿ ಸಮಾಜದ ಮಹಿಳೆಯರ ರಕ್ತ ತಪಾಸಿಸಿದಾಗ ಶೇ. ೮ ರಷ್ಟು ಜನರಿಗೆ ಏಯ್ಡ್ಸ್ ರೋಗವಿರುವುದು ಪತ್ತೆಯಾಗಿದೆ.

೨೧ನೇ ಶತಮಾನದತ್ತ ನಾವು ಸಾಗುತ್ತಿದ್ದೇವೆ. ಆದರೆ "ಹಳ್ಳಿಯ ಉದ್ಧಾರವಾಗದೆ ದಿಲ್ಲಿಯ ಉದ್ಧಾರ ಸಾಧ್ಯವೇ"?! ಅಜ್ಞಾನ, ಅನಕ್ಷರತೆ, ಬಡತನ, ಮಿ ಮೀರಿದ ಕುಟುಂಬ ಜನಸಂಖ್ಯೆ ಇವುಗಳಿಂದ ಕೆಳವರ್ಗದ ಮಹಿಳೆಯರೂ ಇತರರಿಗೆ ಸೆರಗು ಹಾಸುವ ಕಾಯಕವನ್ನು ಮಾಡುತ್ತಿರುವುದು ಮಾತ್ರ ಅತ್ಯಂತ ಶೋಚನೀಯವಾಗಿದೆ.

ಹಲವು ಗುಪ್ತರೋಗ, ಲೈಂಗಿಕ ರೋಗ ಹಾಗೂ ಏಯ್ಡ್ಸ್ ರೋಗಗಳಿಂದ ಹೆಣ್ಣು ಮಕ್ಕಳು ೪೦ ವರ್ಷದೊಳಗೆ ಮುದುಕಿಯರಂತೆ ಕಂಡುಬಂದು, ರೋಗಗಳ ಉಗ್ರಾಣವಾಗಿದ್ದ ತಮ್ಮ ಶರೀರವನ್ನು ವಾಸಿಮಾಡಿಕೊಳ್ಳಲಾಗಡ, ಅಂತಿಮಕಾಲದಲ್ಲಿ ಪಶ್ಚಾತ್ತಾಪ ಪಟ್ಟು ಒಂದು ದಿನ ಮಣ್ಣಿನಲ್ಲಿ ಮಣ್ಣಾಗುತ್ತಾರೆ. ಶೇ.೯೦ಕ್ಕಿಂತ ಹೆಚ್ಚಿನವರ ಉದ್ಯೋಗ ಇದಾದ ಕಾರಣ ಇವರನ್ನು ತಿದ್ದಿ ಒಳ್ಳೆಯ ನಾಗರಿಕರನ್ನಾಗಿ ಮಾಡುವುದು ಎಂದರೆ "ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?" ಎಂಬಂತಾಗಿದೆ. ಮಹಾತ್ಮ ಫುಲೆ, ಸಾವರ್‌ಕರ್ ಅಂತಹವರು ಪುನಃ ಜನಿಸಿ ಬರಬೇಕು ಅಷ್ಟೆ!

ಗೀಳು

ಎಚ್. ಆರ್. ಚಂದ್ರವದನರಾವ್
೭೪೪, ೪೭ನೇ ಕ್ರಾಸ್. ೮ನೇ ಬ್ಲಾಕ್,
ಜಯನಗರ, ಬೆಂಗಳೂರು-೫೬೦ ೦೮೨

ಫೀನಿಕ್ಸ್ ಬಳಿ ಇಂಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ತ್ರಿನಯನ ಆ ಸಂಜೆ ಬೆಂಗಳೂರಿನಲ್ಲಿದ್ದ ಪವಿತ್ರಳನ್ನು ನೋಡಲು ಬರುವವನಿದ್ದ. ಅಕ್ಕನನ್ನು ತಮಾಷೆ ಮಾಡುತ್ತಾ ರೂಪಾ, "ತ್ರಿನಯನ ನೋಡಲು ಸುಂದರನಾಗಿರಬೇಕು. ಫೋಟೋದಲ್ಲಿ ನೋಡಿದ್ದೀವಲ್ಲಾ. ನೀನು ಒಪ್ಪಿದರೆ ಅವರು ಒಪ್ಪಬಹುದೆಂದು ಕಾಣುತ್ತದೆ. ಯಾವಾಗಲೂ ನಿನ್ನದೇ ತಕರಾರು. ಎತ್ತರವಾಗಿದ್ದರೆ ಅಡಿಕೆ ಮರ ಅನ್ನುತ್ತೀಯಾ, ಕುಳ್ಳಗಿದ್ದರೆ ತುಂಬೆ ಗಿಡ, ಬೆಳ್ಳಗಿದ್ದರೆ ಹುಡುಗಿ ತರಹ,ದಪ್ಪನಾಗಿದ್ದರೆ ಧಡಿಯ. ತ್ರಿನಯನ ೫.೮ ಎತ್ತರವಾಗಿದ್ದಾರಂತೆ, ಕಂದು ಬಣ್ಣವಂತೆ. ಫೋಟೋದಲ್ಲಿ ಚೆನ್ನಾಗಿ ಕಾಣುತ್ತಾರೆ. ಅಮೆರಿಕಾದಲ್ಲಿ ಪಿ.ಎಚ್.ಡಿ. ಮಾಡಿರುವ ಅವರಿಗೆ ವರ್ಷಕ್ಕೆ ಒಂದು ಲಕ್ಷ ಡಾಲರ್‌ಗೂ ಹೆಚ್ಚು ಬರುತ್ತಂತೆ"

"ನನಗಿಂತ ನಿನಗೆ ಅವರ ವಿಷಯದಲ್ಲಿ ಹೆಚ್ಚು ಕುತೂಹಲ ಅನಿಸುತ್ತಿದೆ. ಇನ್ನೇನು ಒಂದು ಗಂಟೆಗೆಲ್ಲಾ ಬರುತ್ತಾರಲ್ಲ. ನೋಡೋಣ. ನೀನೂ ನನ್ನ ಜೊತೆ ಇರು."

"ಅಕ್ಕಾ, ಬೇಡ. ಅವರು ನಿನ್ನನ್ನು ಬಿಟ್ಟು ನನ್ನನ್ನು ಮದುವೆಯಾಗುತ್ತೇನೆ ಎಂದರೆ ನಿನಗೆ ಎಲ್ಲಿಲ್ಲದ ಆಶಾಭಂಗ.

"ಏನು? ನೀನು ನನಗಿಂತ ತುಂಬ ಚೆನ್ನಾಗಿದ್ದೇನೆ ಎಂದು ಕೊಂಡಿದ್ದೀಯಾ?"

"ಹಾಗೇನಿಲ್ಲ. ಆದರೆ ಮದುವೆ ಆಗುವ ಹುಡುಗಿ ಜೊತೆ ಅವಳ ತಂಗಿ ಇರಬಾರದು. ನಾನು ಅವನನ್ನು ಕದ್ದು ನೋಡುತ್ತೇನೆ."

ಒಂದು ಗಂಟೆಯೊಳಗೆ ಪವಿತ್ರ ಮುಖ ತೊಳೆದು ಶೃಂಗಾರ ಮಾಡಿಕೊಂಡಳು. ಕಡು ನೀಲಿ ಬಣ್ಣದ ಮೈಸೂರು ಸಿಲ್ಕ್ ಸೀರೆಯಲ್ಲಿ ಬೆಳ್ಳಗಿದ್ದ ಅವಳು ನಿಜವಾಗಿಯೂ ಚೆನ್ನಾಗಿ ಕಾಣುತ್ತಿದ್ದಳು. ಆರುಗಂಟೆ ಹೊಡೆಯುತ್ತಿದ್ದಂತೆ ತ್ರಿನಯನ ಅವನ ತಾಯಿ ತಂದೆ ಕ್ಯಾಡಿಲಾಕ್ ಕಾರಿನಲ್ಲಿ ಅವರ ಮನೆಗೆ ಬಂದ ಕೂಡಲೇ ಅವರನ್ನು ಪವಿತ್ರಳ ತಾಯಿತಂದೆ ಆಹ್ವಾನಿಸಿ ಒಳಗೆ ಕರೆದುಕೊಂಡು ಬಂದರು. ಹಾಲಿನಲ್ಲಿ ಹಾಕಿದ್ದ ಸೋಫಾದಲ್ಲಿ ತಾಯಿತಂದೆ

ಅದರ ಪಕ್ಕದಲ್ಲಿದ್ದ ಸಿಂಗಲ್‌ಸೀಟ್ ಸೋಫಾದಲ್ಲಿ ತ್ರಿನಯನ ಕುಳಿತುಕೊಂಡರು. ಹವಾ ಬಗ್ಗೆ ಮಾತು ಆರಂಭವಾಗಿ, ರಾಜಶೇಖರ್ ದಂಪತಿಗಳು ಮದುವೆ ವಿಷಯಕ್ಕೆ ಬಂದರು. ಅಷ್ಟರಲ್ಲಿ ಬೆಳ್ಳಿತಟ್ಟೆಯಲ್ಲಿ ಕೇಸರಿ ಭಾತ್, ಉಪ್ಪಿಟ್ಟು, ಜೊತೆಗೆ ಚಮುಚವಿಟ್ಟು ಪವಿತ್ರ ಎಲ್ಲರಿಗೂ ತಂದು ಕೊಟ್ಟಳು. ಅವಳ ತಾಯಿ ಗ್ಲಾಸಿನಲ್ಲಿ ಎಲ್ಲರಿಗೂ ನೀರು ಕೊಟ್ಟು, ಬೋನ್ ಚೈನಾದಲ್ಲಿ ಬಿಸಿ ಕಾಫಿ ತಂದು ಕೊಟ್ಟರು. ತ್ರಿನಯನ ಪವಿತ್ರಳನ್ನು ಓದಿದ ಕಾಲೇಜು ಬಿಇನಲ್ಲಿ ಓದಿದ ವಿಷಯ, ಈಗ ಕೆಲಸದಲ್ಲಿರುವ ಸಂಸ್ಥೆ ಮುಂತಾಗಿ ಹಲವು ವಿಷಯಗಳನ್ನು ಕೇಳಿದ. ಅನಂತರ ರಾಜಶೇಖರ್ ದಂಪತಿಗಳು 'ಫೋನ್‌ನಲ್ಲಿ ವಿಷಯ ತಿಳಿಸುತ್ತೇವೆ' ಎಂದು ಹೇಳಿ ಮನೆಗೆ ವಾಪಸ್ಸಾದರು. ರೂಪಾ, ತ್ರಿನಯನನ್ನು ಕಿಟಕಿಯ ಸಂದಿನಿಂದ ನೋಡುತ್ತಲೇ ಇದ್ದಳು. ರಾಜಶೇಖರ್ ಮನೆ ಸೇರುತ್ತಲೇ ಪವಿತ್ರಳ ಮನೆಗೆ ಫೋನ್ ಮಾಡಿದರು ಅವರು ಹೇಳಿದರು—"ನಂಜುಂಡಪ್ಪನವರೇ, ಸಿಹಿ ಸುದ್ದಿ. ನಮ್ಮ ಹುಡುಗ ನಿಮ್ಮ ಹುಡುಗೀನ ಒಪ್ಪಿದ್ದಾನೆ. ನಮ್ಮದು ಒಂದೇ ಕಂಡೀಷನ್. ತ್ರಿನಯನ ಇನ್ನು ಮೂರು ವಾರದಲ್ಲಿ ಅಮೆರಿಕಾಕ್ಕೆ ವಾಪಸಾಗಬೇಕು. ಅಷ್ಟರಲ್ಲಿ ಮದುವೆ ಮಾಡಿ ಕೊಡಲು ಆಗುತ್ತೇತಾನೇ? ನಮ್ಮ ಕಡೆ ೧೫೦-೨೦೦ ಜನ ಬರುತ್ತಾರೆ. ಯಾವುದಾದರೂ ಹೋಟೆಲ್‌ನಲ್ಲಿ ಅರೇಂಜ್ ಮಾಡಿದರೂ ಸಂತೋಷ"

ನಂಜುಂಡಪ್ಪ ಹೇಳಿದರು-"ನೀವುಗಳು ಪವಿತ್ರಳನ್ನು ಒಪ್ಪಿರುವುದು ಸಂತೋಷ. ಆದರೆ ಒಂದು ವಿಷಯ ನಿಮಗೆ ಹೇಳಬೇಕು."

"ಏನು? ಕೇಳಿ ನಮಗೆ ಒಂದು ಕಾಸೂ ವರದಕ್ಷಿಣೆ ಬೇಡ"

"ಸರಿ, ಆದರೆ"

"ಆದರೆ ಏನು? ಹೇಳಿ"

"ಏನೂ ತಿಳಿದುಕೊಳ್ಳಬೇಡಿ. ತ್ರಿನಯನ 'ಕ್ಲೆಪ್ಟೋಮೇನಿಯರ್' ಎಂದು ನನ್ನ ಎರಡನೇ ಮಗಳು ರೂಪಾಳ ಭಾವನೆ"

"ಏನು?"

"ನಿನ್ನೆ ತ್ರಿನಯನ ತಿಂಡಿ ತಿಂದಾದ ಮೇಲೆ ಚಮುಚವನ್ನು ಜೋಬಿನಲ್ಲಿ ಹಾಕಿಕೊಂಡರು" ಎಂದಳು. ಅವಳ ಆರೋಪಣೆ ನಿಜವಾಗಿತ್ತು. ತ್ರಿನಯನನ ಕೋಟು ಜೋಬಿನಲ್ಲಿ ಬೆಳ್ಳಿ ಚಮುಚವಿತ್ತು. ಇದನ್ನು ಅವನ ತಾಯಿ ತಿಳಿಸುತ್ತಾ, ಏನೋ ಆಕಸ್ಮಾತ್ತಾಗಿ ಅವನು ಚಮುಚ ಜೋಬಿಗೆ ಹಾಕಿಕೊಂಡ" ಅಂದರು.

"ಇಲ್ಲ, ನಾವು ಅನೇಕ ಕಡೆ ವಿಚಾರಿದೆವು ಮೊದಲಿನಿಂದ ಈ ಗೀಳು ಆತನಿಗೆ, ಅಮೆರಿಕಾಕ್ಕೆ ಹೋದರೂ ಈ ಗೀಳು ಅವನನ್ನು ಬಿಟ್ಟಿಲ್ಲ. ಆದುದರಿಂದ ಪವಿತ್ರ ಈ ಸಂಬಂಧ ಬೇಡ ಎಂದು ಹೇಳಿದಳು," ಎಂದು ತಿಳಿಸಿದರು ನಂಜುಂಡಪ್ಪ.

"ಥ್ಯಾಂಕ್ಸ್" ಎಂದು ಹೇಳಿ ಟೆಲಿಫೋನ್‌ನನ್ನು ಕುಕ್ಕಿದರು ರಾಜಶೇಖರ್.

ಬಳ್ಳಾರಿಯ ಬಾಗಿಲು ತಟ್ಟುವ ಮಕ್ಕಳ ಭಕ್ಷಕ ಜೆಇ ರಾಕ್ಷಸ

ಡಾ|| ಸ. ಜ. ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ. ವಿ. ವ. ಸಂಘ
ಬಾಗಲಕೋಟೆ ೫೮೭೧೦೧

ಪ್ರತಿ ವರ್ಷದಂತೆ ಈ ವರ್ಷವೂ ಜೆ ಇ ರಾಕ್ಷಸ ಬಳ್ಳಾರಿಯನ್ನು ಹೊಕ್ಕಿದ್ದಾನೆ. ಹಲವಾರು ಮಕ್ಕಳ ಮೈಮೇಲೆ ತನ್ನ ಕ್ರೂರ ಬೆರಳುಗಳನ್ನು ಆಡಿಸತೊಡಗಿದ್ದಾನೆ. ಅವುಗಳಲ್ಲಿಯ ಒಂದು ಮಗುವನ್ನು ಎತ್ತಿ ಬಾಯಿಯಲ್ಲಿಟ್ಟು, ನುರಿಸಿ ನುಂಗಿದ್ದಾನೆ. ಇನ್ನೂ ಎಷ್ಟು ಮಕ್ಕಳನ್ನು ನುಂಗುವನೋ ಗೊತ್ತಿಲ್ಲ. ಈ ರಾಕ್ಷಸ ಹೋದ ವರ್ಷ, ೧೯೯೮ರಲ್ಲಿ ಭೇಟಿ ಕೊಟ್ಟಾಗ ೧೨೬ ಮಕ್ಕಳ ಮೈಮೇಲೆ ಕೈ ಆಡಿಸಿತ್ತು. ಅವುಗಳಲ್ಲಿಂದ ೨೮ ಮಕ್ಕಳನ್ನು ನುಂಗಿ ಹೋಗಿತ್ತು. ಈ ವರ್ಷ ಈಗಾಗಲೇ ಒಂದು ಮಗುವನ್ನು ನುಂಗಿದೆ. ಈ ಮಕ್ಕಳ ಭಕ್ಷಕ ೧೯೯೨ರಲ್ಲಿ ಭೇಟಿಕೊಟ್ಟಾಗ ೩೧೯ ಮಕ್ಕಳ ಬೆನ್ನು ತಟ್ಟಿ, ೬೬ ಮಕ್ಕಳನ್ನು ನುಂಗಿ ಹೊಟ್ಟೆ ತುಂಬಿಕೊಂಡಿತ್ತು. ಇತ್ತೀಚಿನ ದಿನಗಳಲ್ಲಿ ನಡೆದ ಭೀಕರ ಹಾವಳಿಗಳಲ್ಲಿ ೧೯೯೨ರ ಹಾವಳಿ ದೊಡ್ಡದು. ಈ ವರ್ಷ ರಾಕ್ಷಸನ ಯೋಜನೆ ಏನಿದೆಯೋ ಗೊತ್ತಿಲ್ಲ.

'ಜೆಇ' ಎಂಬುದು ರಾಕ್ಷಸನ ಹೆಸರು. ಇದು ರೂಢಿಯಲ್ಲಿ ಕರೆಯುವ ಹೆಸರು. ಪೂರ್ಣ ಹೆಸರು ಜಪಾನೀಯ ಮಿದುಳುರಿತ ಅಂದರೆ "ಜಾಪನೀಸ್ ಎನ್‌ಸೆಫೆಲೈಟಿಸ್" ರಾಕ್ಷಸ ಎಂದಾಕ್ಷಣ ಆಕಾರ ಗುಡ್ಡದಂತೆ ಇರಬೇಕೆಂದೇನೂ ಅಲ್ಲ. ಈ ರಾಕ್ಷಸನ ಆಕಾರ ಬಲು ಚಿಕ್ಕದು. ಕಣ್ಣಿಗೆ ಗೋಚರಿಸದು. ಸೂಕ್ಷ್ಮದರ್ಶಕ ಯಂತ್ರಕ್ಕೂ ನಿಲುಕದು. ಅದನ್ನು ನೋಡಲೇ ಬೇಕೆಂದರೆ ನೀವು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದಿಂದಲೇ ನೋಡಬೇಕು. ಅಂದರೆ ಒಂದು ಮಿಲಿಮೀಟರಿನಲ್ಲಿ ೧೦ ಸಾವಿರ ಭಾಗ ಮಾಡಬೇಕು. ಅಂಥ ೮ ಇಲ್ಲವೆ ಹತ್ತು ಭಾಗಗಳನ್ನು ಕೂಡಿಸಿದರೆ ಆಗುವ ಆಕಾರದಷ್ಟು ಇವನ ಗಾತ್ರ. ರಾಕ್ಷಸ ಎಷ್ಟು ಎತ್ತರವೋ ಅಷ್ಟೇ ಅಗಲವೂ ಹೌದು. ಹೀಗಾಗಿ ನೋಡಲು ಅದು ಚೆಂಡಿನಂತೆ ತೋರುವುದು. ಮೈತುಂಬ ಕೂದಲುಗಳಂಥ ಅಂಗಾಂಗಳು. ಈ ಅಂಗಾಂಗಗಳಿಂದ ರಾಕ್ಷಸ ಜೀವಕೋಶಗಳನ್ನು ಹಿಡಿಯಬಲ್ಲದು. ಅವುಗಳ

ಸಹಾಯದಿಂದ ಜೀವಕೋಶಗಳ ಮೇಲೆ ಓಡಾಡಬಲ್ಲದು. ಜೀವಕೋಶಗಳ ಭಿತ್ತಿಗಳಲ್ಲಿ ರಂಧ್ರ ಕೊರೆದು ಅವುಗಳ ದೇಹ ಸೇರಬಲ್ಲದು. ಜೀವಕೋಶಗಳಿಗೆ ಚಿತ್ರಹಿಂಸೆ ಕೊಟ್ಟು ಅವನ್ನು ಛಿದ್ರಗೊಳಿಸಬಲ್ಲದು. ಮಾನವ ದೇಹದ ಯಾವುದೇ ಜೀವಕಣವನ್ನು ಹಿಡಿಯಬಲ್ಲದು, ಭಕ್ಷಿಸಬಲ್ಲದು. ಆದರೆ ಈ ರಾಕ್ಷಸನಿಗೆ ವ್ಯಕ್ತಿಯ ಮಿದುಳಿನ ಜೀವಕೋಶ ಎಂದರೆ ಎಲ್ಲಿಲ್ಲದ ಪ್ರೀತಿ. ಮಿದುಳಿನ ಜೀವಕೋಶಗಳನ್ನು ರಾಶಿರಾಶಿಯಷ್ಟು ತಿನ್ನುವುದು. ಅದು ತಿಂದು ಎಸೆದಿರುವ ಜೀವಕೋಶಗಳ ಹೆಣಗಳು ಕೊಳೆತು ರೊಚ್ಚಾಗುತ್ತದೆ. ಕೊಳೆತು ನಾರುತ್ತದೆ. ಮಿದುಳನ್ನು ಕಳೆದುಕೊಂಡ ಮಗು ಬದುಕುವುದು ಹೇಗೆ ಸಾಧ್ಯ?

ನಾವು ಜೆಟ್ ವಿಮಾನಗಳನ್ನು ಬಳಸುವಂತೆ ಈ ರಾಕ್ಷಸ ಸೊಳ್ಳೆ ಅಂದರೆ ಗುಂಗಾಡುಗಳಲ್ಲಿ ಪ್ರಯಾಣ ಮಾಡುತ್ತದೆ. ರಾಕ್ಷಸ ಗವಿಗಳಲ್ಲಿ ವಾಸಮಾಡದೇ ಹಂದಿಗಳ ರಕ್ತದಲ್ಲಿ ಅವಿತುಕೊಂಡಿರುತ್ತದೆ. ಇದಕ್ಕೆ ಸ್ಥಳದಾನ ಮಾಡಿದ ಹಂದಿಯನ್ನು ಈ ರಾಕ್ಷಸ ಪೀಡಿಸುವುದಿಲ್ಲ. ಅಷ್ಟರಮಟ್ಟಿಗೆ ಅದು ಕೃತಜ್ಞ. ಹಂದಿಯೂ ಅಷ್ಟೇ. ಈ ರಾಕ್ಷಸನಿಗೆ ಹಂದಿ ವಸತಿ, ಊಟೋಪಚಾರ ಕೊಟ್ಟು ಆದರಿಸುತ್ತದೆ. ಹಂದಿಯ ಅದರ ಸತ್ಕಾರ ಉಂಡು ತನ್ನ ಸಂತತಿ ಹೆಚ್ಚಿಸಿಕೊಂಡು ಪ್ರಯಾಣಕ್ಕೆ ಸಿದ್ಧವಾಗುತ್ತದೆ. ಅಷ್ಟರಲ್ಲಿ ಹಂದಿಯ ಜೊತೆ ಜೊತೆಗೆ ಜೀವಿಸುವ ಸೊಳ್ಳೆಗೆ ರಾಕ್ಷಸನ ಅರಿಕೆ ತಲುಪುತ್ತದೆ. ಆಗ ಸೊಳ್ಳೆ ಹಂದಿಯ ತ್ವಚೆಯ ಮೇಲೆ ಕುಳಿತು ದೇಹದೊಳಗಿನ ರಾಕ್ಷಸ ಗಣ ಬರಬೇಕೆಂದು ಕೂಗು ಹಾಕುತ್ತದೆ. ಸೊಳ್ಳೆಯ ಸೀಟಿಯನ್ನು ಕೇಳಿದ ಒಡನೆ ರಾಕ್ಷಸ ಗಣ ವೇಗದಿಂದ ರಕ್ತದಲ್ಲಿ ಈಜುತ್ತ ಸೊಳ್ಳೆಯ ಕುಳಿತ ಸ್ಥಳದ ಕಡೆಗೆ ಬರುತ್ತವೆ. ಸೊಳ್ಳೆ ತನ್ನ ಮೊನಚಾದ ಸೊಂಡಿಲನ್ನು ಹಂದಿಯ ತ್ವಚೆಯಲ್ಲಿ ನೆಡುತ್ತದೆ. ಸೊಂಡಿಲನ್ನು ಸಾವಕಾಶವಾಗಿ ಕೇಶವಾಹಿನಿಗಳಲ್ಲಿ ಸೇರಿಸುತ್ತದೆ. ಈಗ ಸೊಳ್ಳೆ ಹಂದಿಯ ರಕ್ತವನ್ನು ಹೀರಲು ಪ್ರಾರಂಭಿಸುವುದು. ರಕ್ತದೊಡನೆ ದೊಡ್ಡ ಸಂಖ್ಯೆಯಲ್ಲಿ ರಾಕ್ಷಸ ಗಣ ನಾ ಮುಂದೆ ನೀ ಮುಂದೆ ಎಂದು ಸೊಳ್ಳೆಯ ಸೊಂಡಿಲನ್ನು ಸೇರುತ್ತವೆ. ನಿಜವಾಗಿ ರಾಕ್ಷಸ ಗಣಕ್ಕೆ ಸೊಳ್ಳೆ ಜಾಡಿಗೆ ಟ್ಯಾಕ್ಸಿ ಇದ್ದಂತೆ. ರಾಕ್ಷಸ ಗಣದ ಸೂಚನೆಯಂತೆ ಸೊಳ್ಳೆಗಳು ಹಾರುತ್ತ ಮಾನವರ ತ್ವಚೆಯ ಮೇಲೆ ಬಂದು ಕೂರುತ್ತವೆ. ತಮ್ಮ ಮೊನಚಾದ ಸೊಂಡಿಲನ್ನು ಕೇಶವಾಹಿನಿಗಳಲ್ಲಿ ಸೇರಿಸುತ್ತವೆ. ವಿಮಾನದಿಂದ ಪ್ರಯಾಣಿಕರು ಇಳಿಯುವಾಗ ಉಪಯೋಗಿಸುವ ಏಣಿಯಂತೆ ಸೊಳ್ಳೆಯ ಸೊಂಡಿಲು ಕಾರ್ಯ ಮಾಡುತ್ತದೆ. ರಾಕ್ಷಸ ಗಣವೆಲ್ಲ ಸೊಳ್ಳೆಯ ಸೊಂಡಿಲಿನಿಂದ ಇಳಿದು ಮಾನವರ ರಕ್ತದಲ್ಲಿ ಜಿಗಿಯುತ್ತವೆ. ಈಗ ಅವುಗಳ ಪ್ರವಾಸ ಮುಗಿದಂತೆ. ತಡಮಾಡದೇ ಅವು ಅವಸರ ಅವಸರದಿಂದ ದೇಹವ ತುಂಬ ವ್ಯಾಪಿಸಿ ಬಿಡುತ್ತವೆ. ದೇಹದಲ್ಲಿ ರಾಕ್ಷಸ ಗಣಕ್ಕೆ ಜಾಸ್ತಿ ರುಚಿಯೆನಿಸುವ ಮಿದುಳಿನಲ್ಲಿ ಸೇರಿ ಅದನ್ನು ತಿಂದು ಕೆಡಿಸುತ್ತವೆ.

ದುರ್ದೈವದಿಂದ ಮಿದುಳಿನ ಎಲ್ಲ ಜೀವಿಗಳು ನಾಶವಾದರೆ ಮುಗಿಯಿತು ಜೀವವನ್ನು ಕಳೆದುಕೊಂಡಂತೆಯೆ ಮಾನವ ದೇಹ ಸೇರಿದ ರಾಕ್ಷಸ ಗಣ

ಹೊರಬರುವುದೇ ಇಲ್ಲ. ಅಲ್ಲಿಯೇ ಬೆಳೆದು ಅಲ್ಲಿಯೇ ಮಿದುಳು ಜೀವಕೋಶಗಳನ್ನು ನಾಶಮಾಡಿ ತಾವೂ ನಾಶವಾಗುತ್ತವೆ. ಒಂದು ರೀತಿಯಿಂದ ಇದು ಮಾನವ ಹಾಗೂ ರಾಕ್ಷಸ ಗಣದ ನಡುವೆ ಸಂಭವಿಸುವ ಅಪಘಾತ ಎಂದೇ ನೋಡಬೇಕು. ಹಾನಿ ಎರಡೂ ಕಡೆಗೆ ನಡೆಯುತ್ತದೆ. ಅನೇಕ ಸಲ ಈ ಅಪಘಾತ ಮಾನವನ ಅಂತ್ಯದಲ್ಲಿ ಕೊನೆಗಾಣುತ್ತದೆ.

ಹಂದಿಯ ದೇಹದಲ್ಲಿ ಒಂದು ಹೊಂದಾಣಿಕೆ ಇರುತ್ತದೆ. ಕಾರಣ ರಾಕ್ಷಸ ಗಣ ವೃದ್ಧಿಸುತ್ತ ಹೋದರೂ ಹಂದಿಗೆ ಯಾವ ಹಾನಿಯನ್ನು ಮಾಡುವುದಿಲ್ಲ. ಸೊಳ್ಳೆಗಳ ಮುಖಾಂತರ ರಾಕ್ಷಸ ಗಣ ಒಂದು ಹಂದಿಯಿಂದ ಇನ್ನೊಂದು ಹಂದಿಗೆ ವರ್ಗ ಮಾಡಿಸಿಕೊಳ್ಳಬಹುದು. ಹೊಸ ಹಂದಿಗೆ ಸ್ಥಳಾಂತರವಾಗಬಹುದು. ಮಾನವರಲ್ಲಿ ಇಂಥ ವ್ಯವಸ್ಥೆ ಇಲ್ಲ. ರಾಕ್ಷಸಗಣವು ಹಂದಿಯಿಂದ ಹಂದಿಗೆ, ಹಂದಿಯಿಂದ ಮಾನವರಿಗೆ ತಲುಪಲು ಸಾಧ್ಯ. ಮಾನವರಿಂದ ಮಾನವರಿಗೆ ಬರಲಾರದು.

ಪ್ರಾರಂಭದಲ್ಲಿ ಈ ರೋಗ ಜಪಾನ್ ದೇಶದಲ್ಲಿ ಪತ್ತೆಯಾಗಿದ್ದ ಕಾರಣ ರೋಗಕ್ಕೆ ಆ ಹೆಸರು (ಜೆಇ) ಮುಂದೆ ಆ ರೋಗ ಹಲವಾರು ಬೇರೆ ದೇಶಗಳಲ್ಲೂ ಇರುವುದೆಂದು ತಿಳಿಯಿತು. ಹಾಗೆಯೇ ಭಾರತದಲ್ಲಿಯೂ ಇದೆ. ತಮಿಳುನಾಡು, ಆಂಧ್ರ, ಇವುಗಳಿಗೆ ಹೊಂದಿಕೊಂಡಿದ್ದ ಕರ್ನಾಟಕದಲ್ಲಿ ಈ ರೋಗ ಇದೆ. ಬೇರೆ ಪ್ರಾಂತಗಳಲ್ಲಿ ಆಗೊಮ್ಮೆ ಈಗೊಮ್ಮೆ ರೋಗ ತಲೆ ಎತ್ತುವುದು.

ಈ ರೋಗದ ಕಾರಣವೆಂದರೆ ಒಂದು ವೈರಸ್ ಜೀವಿ ಹಂದಿಗಳ ದೇಹದಲ್ಲಿ ಸಮೃದ್ಧಿಯಾಗಿ ಬೆಳೆಯುವುದು. ಸೊಳ್ಳೆಗಳು ಈ ವೈರಸ್ ಜೀವಿಯನ್ನು ಹಂದಿಯಿಂದ ಹಂದಿಗೆ ಸ್ಥಳಾಂತರಿಸುವುದು. ಹಂದಿಯಿಂದ ಮಾನವರಿಗೂ ಸ್ಥಳಾಂತರಿಸುವುದು. ಆದರೆ ಇಂದಿನವರೆಗೆ ಮಾನವರಿಗೆ ರೋಗ ಪ್ರಸಾರವಾಗುವುದು ಎಂಬುದು ಗೊತ್ತಾಗಿಲ್ಲ. ರೋಗವನ್ನು ಪ್ರತಿಬಂಧಿಸುವುದೆಂದರೆ ಹಂದಿಗಳು ಮಾನವರಿಂದ ದೂರವಿರಬೇಕು. ಸೊಳ್ಳೆಗಳು ಮಾನವರನ್ನು ಕಡಿಯದಂತೆ ನೋಡಬೇಕು. ರೋಗ ಬಂದಾಗ ಕೊಡುವ ಮದ್ದುಗಳೆಂದರೆ, ರೋಗ ಲಕ್ಷಣಗಳನ್ನು ಶಮನಗೊಳಿಸುವ ಮದ್ದುಗಳು ಹಲವಾರು ವರ್ಷಗಳಿಂದ ಈ ರೋಗವು ಬಳ್ಳಾರಿಯನ್ನು ಪೀಡಿಸುತ್ತ ಬಂದಿದೆ. ಪ್ರತಿ ವರ್ಷ ಸೆಪ್ಟಂಬರ್ ತಿಂಗಳಿನಲ್ಲಿ ತಲೆ ಎತ್ತುತ್ತಲಿದೆ. ಮತ್ತೆ ಮರೆಯಾಗುತ್ತಿದೆ. ಯುಕ್ತ ಕ್ರಮಗಳನ್ನು ಪಾಲಿಸಿದರೆ ರೋಗ ಸಂಪೂರ್ಣ ಮಾಯವಾಗುವುದು. ಆದರೆ ಸರ್ಕಾರ ಹಾಗೂ ಸಮಾಜಗಳು ನಿಷ್ಠೆಯಿಂದ ಕೆಲಸ ಮಾಡುವುದನ್ನು ಬಿಟ್ಟಿವೆ. ರೋಗವು ಬೀಗರು ಬಂದಂತೆ ಪ್ರತಿ ವರ್ಷ ಬರುತ್ತಲೇ ಇದೆ.

ಜೆಇ ರೋಗ ಯಾವ ವಯಸ್ಸಿನವರನ್ನಾದರೂ ಪೀಡಿಸಬಲ್ಲದು. ಆದರೆ ಅದಕ್ಕೆ ಜಾಸ್ತಿ ರುಚಿ ಎಂದರೆ ಮಕ್ಕಳ ಮಿದುಳು. ನಾವು ಒಬ್ಬ ರೋಗಿ ಜೆಇಯಿಂದ ಬಳಲುತ್ತಾನೆ ಎಂದು ಖಚಿತ ಪಡಿಸಿದರೆ, ಆ ರೋಗ ಇನ್ನೂ ೨೦೦ ರಿಂದ ೧೦೦೦ ಜನರನ್ನು ತಲಪಿದೆ ಎಂದೇ ಅರ್ಥ. ಇಂಥವರಲ್ಲಿ ರೋಗ ಲಕ್ಷಣ ಕಾಣಬಹುದು ಇಲ್ಲವೆ ಕಾಣಲಿಕ್ಕಿಲ್ಲ. ರೋಗ ಪ್ರಕಟವಾಗಲು ಹಲವು ದಿನಗಳು ಬೇಕು. ಇಂದು

ಸೊಳ್ಳೆ ಕಡಿದು ರೋಗಾಣುಗಳನ್ನು ಬೇರೆ ಮಾನವರ ದೇಹದಲ್ಲಿ ಬಿಟ್ಟಾದ ಮೇಲೆ ೧೪ ದಿನಗಳಾದ ತರುವಾಯ ರೋಗ ಲಕ್ಷಣ ಕಾಣತೊಡಗುತ್ತದೆ.

ಪ್ರಾರಂಭದಲ್ಲಿ ಜ್ವರ ಮೂಡುತ್ತದೆ. ಏನು ಮದ್ದು ಉಪಚಾರ ಮಾಡಿದರೂ ಜ್ವರ ನಿಲ್ಲುವುದಿಲ್ಲ. ಜ್ವರದೊಡನೆ ತಲೆ ಶೂಲೆ ಕಾಣಿಸುತ್ತದೆ. ಮೂರನೆಯ ಲಕ್ಷಣವೆಂದರೆ ವಾಂತಿ. ಬರಬರುತ್ತ ರೋಗಿಯ ಪ್ರಜ್ಞೆ ತಪ್ಪುವುದು. ರೋಗಿಗೆ ಸಂಪರು ಬಡಿಯುತ್ತದೆ. ಕೊನೆ ಕೊನೆಗೆ ಸೆಟೆಬೇನೆ ಕೂಡಿ ರೋಗಿ ಮರಣ ಹೊಂದುವನು. ರೋಗಿಯ ಜೀವ ಅಪಾಯದಿಂದ ಪಾರಾದರೆ ಹಲವಾರು ನರದೌರ್ಬಲ್ಯಗಳು ಉಳಿಯಬಹುದು. ರೋಗಿಗಳಲ್ಲಿ ಸುಮಾರು ಪ್ರತಿಶತ ೩೦ ರಷ್ಟು ಜನ ಯಾವುದೇ ಮದ್ದಿಲ್ಲದೇ ಸಂಪೂರ್ಣ ಗುಣ ಹೊಂದುತ್ತಾರೆ. ಇನ್ನುಳಿದ ೩೦ ರಷ್ಟು ಜನ ಅಲ್ಪ ಸ್ವಲ್ಪ ತೊಂದರೆಯನ್ನು ಅನುಭವಿಸಿ ಗುಣ ಹೊಂದುತ್ತಾರೆ. ಇನ್ನುಳಿದವರು ಹಾನಿಗೊಳಗಾಗುತ್ತಾರೆ.

ರೋಗ ಶುಶ್ರೂಷೆ ಉಪಚಾರಗಳು ಅತಿ ಮುಖ್ಯ; ಆದರೆ ರೋಗನಿವಾರಣೆ ಸದಾ ಅಧಿಕ ಮುಖ್ಯ. ಹಂದಿಗಳಿಗೂ ರೊಚ್ಚಿಗೂ ಬಡವರಿಗೂ ನಂಟು; ಜೆಇ ರೋಗವಾಹಕ ಹಂದಿ. ಅಂದಮೇಲೆ ನಿವಾರಣೋಪಾಯ ತೀರ ಸುಲಭ: ಜನರಿಗೆ ಶುಚಿ ನೈರ್ಮಲ್ಯಗಳ ತುರ್ತು ಅವಶ್ಯಕತೆ ಕುರಿತು ಪ್ರಾಯೋಗಿಕ ಶಿಕ್ಷಣ, ಪರಿಸರದಲ್ಲೆಲ್ಲೂ ರೊಚ್ಚೆಗೂಡದಂತೆ ಮುನ್ನೆಚ್ಚರ ಮತ್ತು ಹಂದಿಗಳ ವೈಜ್ಞಾನಿಕ ಸಾಕಣೆ. ಸಮಾಜ, ಸರ್ಕಾರ ಮತ್ತು ಜನ ಸಹಕರಿಸಿ ದುಡಿಯದಿದ್ದರೆ ಜೆಇ ಮತ್ತೆ ಮತ್ತೆ ಭೇಟಿ ಕೊಡುವುದು ಕ್ರಮ-ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ. ಇಲ್ಲಿ ಬಡತನ-ಸಿರಿತನ ಅಲ್ಲ— ಶುಚಿಯಾಗಿರಬೇಕು, ಪರಿಸರವನ್ನು ನಿರ್ಮಲವಾಗಿಟ್ಟುಕೊಳ್ಳಲೇಬೇಕು ಎಂಬ ಪ್ರಜ್ಞೆ ಅತಿ ಮುಖ್ಯ.

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ ;
ಹಸಿಗೋಡೆಯ ಹರಳಿನಂತೆ
ಹುಸಿ ಹೋಗದ ಕನ್ನಡ

—ಚನ್ನವೀರ ಕಣವಿ

ಐರೋಪ್ಯ ರಾಷ್ಟ್ರಗಳಿಗೊಂದು ಹೊಸ ಕರೆನ್ಸಿ : ಯುರೊ

ಟಿ. ಎಸ್. ಲಲಿತ

೭೦೨, ಮೊದಲ ಮಹಡಿ, ೧೭ ನೇ ಮೇನ್
ಸರಸ್ವತೀಪುರ, ಮೈಸೂರು–೫೭೦೦೦೯

ವಿಶ್ವದ ಆರ್ಥಿಕ ಮಾರುಕಟ್ಟೆಯನ್ನಾಳು ತ್ತಿರುವ ಡಾಲರ್‌ಗೆ ಈಗೊಂದು ಹೊಸ ಪ್ರತಿಸ್ಪರ್ಧಿಯ ಆಗಮನ. ಪತ್ರಿಕೆಗಳು ಅದರ ಬಗ್ಗೆ ಸಾಕಷ್ಟು ಬರೆದಿವೆ, ಬರೆಯು ತ್ತಿವೆ. ಜನ ಎಲ್ಲೆಲ್ಲೂ ಅದರ ಬಗ್ಗೆ ಚರ್ಚಿಸು ತ್ತಾರೆ. ಇದು ಹೊಸತೊಂದು ಕರೆನ್ಸಿ 'ಯೂರೊ'ದ ಜನ್ಮಕಥೆ.

ಯೂರೋಪಿಯನ್ ಒಕ್ಕೂಟದ ೧೫ ದೇಶಗಳಲ್ಲಿ, ೧೧ ದೇಶಗಳ ಸಾಮಾನ್ಯ (ಕಾಮನ್) ಕರೆನ್ಸಿ ಎನಿಸಿ, ೩೦೦ ಮಿಲಿ ಯನ್ ಜನಜೀವನದ ಮೇಲೆ ಪ್ರಭಾವ ಬೀರುತ್ತಿರುವ ಈ ಕರೆನ್ಸಿ ಸಧ್ಯಕ್ಕೆ ಪೋಸ್ಟರ್‌ಗಳಲ್ಲಿ, ಚಿತ್ರಗಳಲ್ಲಿ ಹಾಗೂ ಟೆಲಿವಿಜನ್‌ಗಳಲ್ಲಿ ಮಾತ್ರ ನೋಡಲು ಸಾಧ್ಯ. ಆದರೆ ಕಂಪೆನಿಗಳು ವೇತನವನ್ನು ಯೂರೋಗೆ ಪರಿವರ್ತಿಸುತ್ತವೆ. ಬ್ಯಾಂಕ್ ಉಳಿತಾಯವನ್ನು ಯೂರೋಗಳಿಗೆ ರೂಪಾಂತರಿಸು ತ್ತವೆ. ಆಸ್ತಿಯ ಮಾರಾಟ ಯೂರೋ ಮುಖಾಂತರ ನಡೆಯುತ್ತಿದೆ. ಸಾಮಾನಿನ ದರಗಳು ಯೂರೋಗಳಲ್ಲಿ ಸೂಚಿಸಲ್ಪಡು ತ್ತವೆ. ಆದರೂ ಈ ಯೂರೊ ಸದ್ಯಕ್ಕೆ ಸ್ಪರ್ಶಕ್ಕೆ ಸಿಗದ, ನೋಟಕ್ಕೆ ನಿಲುಕದ ನಾಣ್ಯ. ಮಕ್ಕಳಿಂದ ಹಿಡಿದು, ಅಧಿಕಾರಿ ಗಳವರೆಗೂ ಇದರ ಉಪಯೋಗದ ಬಗ್ಗೆ ಸಾಕಷ್ಟು ವರ್ಣರಂಜಿತ ಸಾಹಿತ್ಯ ವಿಶ್ವದ ಮಾರುಕಟ್ಟೆಗಳನ್ನು ತುಂಬಿವೆ. ಆದರೆ ಖಾಸಗಿ ವ್ಯಕ್ತಿಗಳು ಇದರ ಉಪಯೋಗದ ಬಗ್ಗೆ ಪರಿಣತರಾಗಲು ಇನ್ನೂ ಎರಡೂವರೆ ವರ್ಷಗಳ ಕಾಲಾವಧಿ ಇದೆ. ಅಂದರೆ ಯೂರೋ ಸಾರ್ವಜನಿಕರಿಗಾಗಿ ಜಾರಿಗೆ ಬರುವುದು ೨೦೦೨ ರ ಜನವರಿಗೆ.

ಇರುಳು ಕಳೆದು ಬೆಳಕು ಹರಿವಷ್ಟರಲ್ಲಿ ಯೂರೋ ಜನ್ಮ ತಳೆಯಲಿಲ್ಲ. ಇದರ ಹಿಂದೆ ಸುಮಾರು ೪೦ ವರ್ಷಕ್ಕೂ ಮೀರಿದ ಚಿಂತನೆ ಇದೆ. ಎರಡನೆಯ ಮಹಾ ಯುದ್ಧಾನಂತರ, ೧೯೪೬ ರಲ್ಲಿ ಬ್ರಿಟಿಷ್ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಯುರೋಪಿಯನ್ ದೇಶಗಳ ಅಭಿವೃದ್ಧಿಗಾಗಿ ಒಂದು 'ಸಂಯುಕ್ತ ಯುರೋಪ್ ಒಕ್ಕೂಟ' (ಅಮೆರಿಕಾ ಸಂಯುಕ್ತ ಸಂಸ್ಥಾನಗಳಂತೆ), ಹಾಗೂ ಯುರೋಪಿಯನ್ ದೇಶಗಳಿಗಾಗಿ ಒಂದು ಸಾಮಾನ್ಯ ಕರೆನ್ಸಿಯನ್ನು ಜಾರಿಗೆ

ತರಬೇಕೆಂದು ಪಟ್ಟ ಪ್ರಯತ್ನ ಫಲಿಸಲಿಲ್ಲ. ಕೆಲವು ವರ್ಷಗಳ ಅನಂತರ ಜನತೆಯ ಹಿತ ದೃಷ್ಟಿಯಿಂದ ಸಾಮಾನ್ಯ ಯುರೋಪಿಯನ್ ಒಕ್ಕೂಟವಲ್ಲದಿದ್ದರೂ ಸದಸ್ಯ ರಾಷ್ಟ್ರಗಳ ನಡುವೆ ಕೊಡುಕೊಳ್ಳುವಿಕೆಯಲ್ಲಿ ಯಾವುದೇ ಗಡಿಯ ತಡೆಯಿಲ್ಲದ ಸಾಮಾನ್ಯ ಯುರೋಪ್ ಮಾರುಕಟ್ಟೆಯೊಂದನ್ನು ಸ್ಥಾಪಿಸುವ ಆಲೋಚನೆ ಪುಷ್ಟಿಗೊಳ್ಳತೊಡಗಿತು.

ಎರಡನೆಯ ವಿಶ್ವಸಮರದ ಅನಂತರ, ಎಲ್ಲೆಡೆ ಶಾಂತಿ ಅನಿಶ್ಚಿತವಾಗಿತ್ತು. ಪ್ರತಿ ದೇಶವೂ ತನ್ನ ಸಂಪನ್ಮೂಲಗಳನ್ನು ಗುರುತಿಸಲು ಪ್ರಯತ್ನಿಸಿದ್ದವು. ಪರಸ್ಪರ ಭಿನ್ನಾಭಿಪ್ರಾಯಗಳನ್ನು ಮರೆತು, ದೇಶ ದೇಶದ ನಡುವೆ ಆರ್ಥಿಕ ಸಹಕಾರವಿದ್ದಲ್ಲಿ ವಿಶ್ವದಲ್ಲಿ ಶಾಂತಿ ನೆಲೆಸಲು ಸಹಕಾರಿಯಾಗಬಲ್ಲದೆಂಬ ಅಂಶವನ್ನು ರಾಷ್ಟ್ರೀಯ ನಾಯಕರು ಅರಿತರು.

೧೯೫೧ ರಲ್ಲಿ ಫ್ರಾನ್ಸ್, ಇಟಲಿ, ಪಶ್ಚಿಮ ಜರ್ಮನಿ, ಬೆಲ್ಜಿಯಂ, ನೆದರ್‌ಲೆಂಡ್ಸ್ ಹಾಗೂ ಲಕ್ಸೆಮ್‌ಬರ್ಗ್ ಒಟ್ಟಾಗಿ 'ಯೂರೋಪಿಯನ್ (ಕೋಲ್ ಮತ್ತು ಸ್ಟೀಲ್)' ಕಲ್ಲಿದ್ದಲು ಹಾಗೂ ಉಕ್ಕು ಕಮ್ಯೂನಿಟಿಯನ್ನು ರಚಿಸಿದವು. ಉಕ್ಕು, ಕಲ್ಲಿದ್ದಲು ಹಾಗೂ ಕಬ್ಬಿಣದ ಅದಿರನ್ನು ಯಾವುದೇ ಸದಸ್ಯ ರಾಷ್ಟ್ರಕ್ಕೆ ಆಮದು ತೆರಿಗೆ ರಹಿತವಾಗಿ ಸಾಗಿಸಲು ಸಾಮಾನ್ಯ ಮಾರುಕಟ್ಟೆಯೊಂದು ರಚಿತವಾಯಿತು. ೫ ವರ್ಷಗಳ ಅನಂತರ ಈ ಯೋಜನೆ ಅತ್ಯಂತ ಯಶಸ್ವಿ ಎನಿಸಿದ್ದು ಸದಸ್ಯರ ಅರಿವಿಗೆ ಬಂತು. ಈ ಆರ್ಥಿಕ ಸಹಕಾರ ಹಾಗೂ ಅಭಿವೃದ್ಧಿಯನ್ನು ಮತ್ತಷ್ಟು ದೃಢಗೊಳಿಸಲು ನಿರ್ಧರಿಸಿ ೧೯೫೭ ರಲ್ಲಿ 'ರೋಮ್' ಒಪ್ಪಂದಕ್ಕೆ ಸಹಿ ಹಾಕಲು ನಿರ್ಧರಿಸಿದರು. ೧೯೭೩ ರಲ್ಲಿ ಬ್ರಿಟನ್, ಡೆನ್ಮಾರ್ಕ್, ರಿಪಬ್ಲಿಕ್ ಆಫ್ ಐರ್ಲೆಂಡ್‌ಗಳೂ ಕೂಡ ಈ ಯೂರೋಪಿಯನ್ ಕಮ್ಯೂನಿಟಿಯ ಸದಸ್ಯರಾದವು. ೧೯೮೧ ರಲ್ಲಿ ಗ್ರೀಸ್, ೧೯೮೬ರಲ್ಲಿ ಸ್ಪೇನ್ ಹಾಗೂ ಪೋರ್ಚುಗಲ್, ಅನಂತರ ಆಸ್ಟ್ರಿಯ, ಫಿನ್ಲೆಂಡ್ ಹಾಗೂ ಸ್ವೀಡನ್‌ಗಳೂ ಇವುಗಳ ಜೊತೆಗೂಡಿದವು. ಸಕ್ರಿಯವಾಗಿ ಈ ಒಕ್ಕೂಟದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಪ್ರತಿದೇಶಗಳಿಂದ ಆಯ್ದ ಸದಸ್ಯರ 'ಯೂರೋಪಿಯನ್ ಕೌನ್ಸಿಲ್' ಎನ್ನುವ ನಿಯೋಗವೊಂದು ಬ್ರಸೆಲ್ಸ್‌ನಲ್ಲಿ ರಚಿತವಾಯ್ತು. ಈ ನಿಯೋಗದ ಎಲ್ಲ ದೇಶಗಳ ಅಧ್ಯಕ್ಷರೂ ವರ್ಷಕ್ಕೆರಡು ಬಾರಿ ಬ್ರಸ್ಸೆಲ್‌ನಲ್ಲಿ ಸಭೆ ಸೇರುತ್ತಾರೆ.

೧೯೮೯ ರಲ್ಲಿ ನಡೆದ ಮತ್ತೊಂದು ಘಟನೆ ವಿಶ್ವವನ್ನು ಚಕಿತಗೊಳಿಸಿತು. ಪೂರ್ವ ಹಾಗೂ ಪಶ್ಚಿಮ ಜರ್ಮನಿಯನ್ನು ವಿಭಜಿಸುವ ಬರ್ಲಿನ್ ಗೋಡೆಯುರುಳಿ, ಜರ್ಮನಿ ಒಗ್ಗೂಡಿತು. ೧೯೯೧ ರ ಡಿಸೆಂಬರ್‌ನಲ್ಲಿ ಯೂರೋಪಿಯನ್ ಕಮ್ಯೂನಿಟಿಯ ಸದಸ್ಯ ರಾಷ್ಟ್ರಗಳ ಮುಖ್ಯಸ್ಥರು ಹಾಲೆಂಡಿನ 'ಮ್ಯಾಸ್ಟ್ರಿಕ್ಸ್'ನಲ್ಲಿ ಸಭೆ ಸೇರಿದರು. ಮುಖ್ಯಸ್ಥರಾದ ಜರ್ಮನಿಯ ಛಾನ್ಸಲರ್ ಹೆಲ್ಮಟ್ ಕೋಲ್, ಫ್ರಾನ್ಸಿನ ಅಧ್ಯಕ್ಷ ಫ್ರಾಂಕೋಸ್ ಮಿತ್ತೆರಾ ಹಾಗೂ ಯೂರೋಪಿಯನ್ ಯೂನಿಯನ್ ಕಮಿಷನರ್ ಜಾಕ್ವೆಸ್ ಡಿಲಾರೆಸ್, ಒಂದು ಪ್ರತ್ಯೇಕ ಯೂರೋಪಿಯನ್ ಕರೆನ್ಸಿ

ಯೂರೋಪಿಯನ್ ಮಾನಿಟರಿ ಯೂನಿಯನ್ [EMU] ಹಾಗೂ ಯೂರೋಪಿಯನ್ ಸೆಂಟ್ರಲ್ ಬ್ಯಾಂಕೊಂದನ್ನು [ECB] ಸ್ಥಾಪಿಸುವ ಬೇಡಿಕೆ ಮುಂದಿಟ್ಟರು.

ಈ ಸಲಹೆ ಕೆಲವು ಸದಸ್ಯ ರಾಷ್ಟ್ರಗಳಲ್ಲಿ ತಮ್ಮ ರಾಷ್ಟ್ರೀಯ ಗುರುತಳಿಸಿ ಹೋಗುವ ಭೀತಿ ಹುಟ್ಟಿಸಿತು. ೧೫ ಯೂರೋಪಿಯನ್ ದೇಶಗಳಲ್ಲಿ ೧೧ ದೇಶಗಳು ಮ್ಯಾಸ್ಟ್ರಿಕ್ಟ್ ಒಪ್ಪಂದಕ್ಕೆ ಒಪ್ಪಿದವು. ಯೂರೋಪಿಯನ್ ದೇಶಗಳು, ಯೂರೋಪಿಯನ್ ಮಾನಿಟರಿ ಯೂನಿಯನ್‌ಗೆ ಸೇರಬೇಕಾದಲ್ಲಿ ಯೂರೋಪಿಯನ್ ಕಮ್ಯೂನಿಟಿ ತನ್ನದೇ ಕೆಲವು ತಾಂತ್ರಿಕ ಷರತ್ತುಗಳನ್ನು, ಬಲವಾದ ಆರ್ಥಿಕ ನಿಬಂಧನೆಗಳನ್ನು ಪೂರೈಸಬೇಕೆಂದಿತು. ಅದು ತನ್ನಿಂದ ಅಸಾಧ್ಯವೆನಿಸಿದ ಗ್ರೀಸ್ ಒಕ್ಕೂಟದಿಂದ ಹೊರಗುಳಿಯಿತು. ಡೆನ್ಮಾರ್ಕ್, ಸ್ವೀಡನ್ ಕೆಲವು ರಾಜಕೀಯ ಕಾರಣಗಳಿಗಾಗಿ ಒಕ್ಕೂಟ ಸೇರಲಿಲ್ಲ. ಬ್ರಿಟನ್ ಕಾದು ನಿರೀಕ್ಷಿಸುವ ನೀತಿಯನ್ನಳವಡಿಸಿಕೊಂಡಿದೆ. ಮುಂದಿನ ಬೆಳವಣಿಗೆಗಳನ್ನು ಗಮನಿಸಿ ಅನಂತರ ಈ ನಾಲ್ಕು ದೇಶಗಳೂ ಹಾಗೂ ಕೆಲ ಪೂರ್ವ ಯೂರೋಪಿಯನ್ ದೇಶಗಳೂ ಒಕ್ಕೂಟಕ್ಕೆ ಸೇರಬಹುದು.

೧೯೯೮ರ ಮೇ ೩ರಂದು ಬ್ರಸೆಲ್ಸ್‌ನಲ್ಲಿ ಸಭೆ ಸೇರಿದ ಒಕ್ಕೂಟ ೧೯೯೯ರ ಜನವರಿ ೧ರಿಂದ ಹೊಸ ಯೂರೋಪಿಯನ್ ಸಾಮಾನ್ಯ ಕರೆನ್ಸಿ 'ದ ಯೂರೋ'ವನ್ನು ಚಲಾವಣೆಗೆ ತರಬೇಕೆಂದು ಅಂತಿಮವಾಗಿ ನಿರ್ಧರಿಸಿತು. ೧೯೯೮ರ ಡಿಸೆಂಬರ್ ೩೧ರ ಮಧ್ಯರಾತ್ರಿ ಚರ್ಚಿನ ಗಂಟೆ ಇಪ್ಪತ್ತನೆಯ ಶತಮಾನದ ಕೊನೆಯ ವರ್ಷವನ್ನು ಸ್ವಾಗತಿಸಿತು. ಈ ಹಬ್ಬದುತ್ಸಾಹದ ವಾತಾವರಣದಲ್ಲಿ ಯೂರೋಪ್ ಖಂಡ ಪ್ರಮುಖ ಘಟನೆಯೊಂದಕ್ಕೆ ಸಾಕ್ಷಿಯಾಯ್ತು. ಹನ್ನೊಂದು ದೇಶಗಳ ಕರೆನ್ಸಿಯ ಬದಲಿಗೆ ಸ್ಥಾನ ಪಡೆದ ಕರೆನ್ಸಿ 'ಯೂರೋ' ಜನ್ಮ ತಳೆದಿತ್ತು. ಯೂರೋಪಿನಾದ್ಯಂತ ಸಂತೋಷ, ಚಿಂತೆ, ಕುತೂಹಲ ಇತ್ಯಾದಿ ಸಮ್ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾದವು.

ಒಕ್ಕೂಟದ ೧೧ ಸದಸ್ಯ ರಾಷ್ಟ್ರಗಳು ತಮ್ಮ ಖಾಸಗಿ ಕರೆನ್ಸಿಯ ಉಪಯೋಗವನ್ನು ಬಿಟ್ಟು, ಅವುಗಳನ್ನು ಪ್ರಮಾಣದ ಅನುಪಾತದಲ್ಲಿ ಯೂರೋಗಳಿಗೆ ಪರಿವರ್ತಿಸಿವೆ. ಈ ದೇಶಗಳ ರಾಷ್ಟ್ರೀಯ ಕರೆನ್ಸಿಯ 'ಲೇಗಸಿ ಕರೆನ್ಸಿ' ಎಂದು ಕರೆಯಲ್ಪಡುತ್ತಿವೆ. ವ್ಯವಸ್ಥೆಯ ಅನುಕೂಲಕ್ಕಾಗಿ ಯೂರೋದ ಜೊತೆ ಜೊತೆಗೆ ಈ ಸ್ಥಳೀಯ ಕರೆನ್ಸಿಯೂ ೨೦೦೧ರ ಡಿಸೆಂಬರ್‌ವರೆಗೂ ಚಲಾವಣೆಯಲ್ಲಿರುತ್ತದೆ. ೨೦೦೨ರ ಜನವರಿಯಿಂದ ಜರ್ಮನ್ 'ಮಾರ್ಕ್' ಆಗಲಿ, ಫ್ರಾನ್ಸಿನ 'ಫ್ರಾಂಕ್' ಆಗಲಿ ಚಲಾವಣೆಯಲ್ಲಿರದೆ, ಎಲ್ಲೆಡೆಯೂ ಯೂರೋದ ಕಾರುಬಾರು. ಈಗ ನಗದು ರಹಿತ ವಹಿವಾಟುಗಳಲ್ಲಿ ಯೂರೋ ಒಕ್ಕೂಟದ ದೇಶಗಳ ನಡುವೆ ಉಪಯೋಗಿಸಲ್ಪಡುತ್ತಿವೆ.

ಭಾರತೀಯ ರಿಸರ್ವ್ ಬ್ಯಾಂಕಿನಂತೆ EMU, ECBಯ ಆಡಳಿತಕ್ಕೊಳಪಟ್ಟಿದೆ. ಯೂರೋದ ಅಸ್ತಿತ್ವದೊಂದಿಗೆ ECB ಬಲಗೊಂಡಿದೆ. ಸದಸ್ಯ ರಾಷ್ಟ್ರಗಳ ನಿಯಮಕ್ಕೊಳಪಡದ ECBಯ ಕಾರ್ಯವ್ಯಾಪ್ತಿ ಸದಸ್ಯ ರಾಷ್ಟ್ರಗಳಿಗಿಂತ ಹಿರಿದು.

ಯಾವ ಸದಸ್ಯ ರಾಷ್ಟ್ರವೂ ಇದಕ್ಕೆ ಆಜ್ಞೆ ಮಾಡುವಂತಿಲ್ಲ. ಯಾವೊಂದು ದೇಶದ ಬಗೆಗೂ ಇದಕ್ಕೆ ಪಕ್ಷಪಾತವಿಲ್ಲ. ಯಾವುದೇ ದೇಶ ವಿಶೇಷ ಸಮಸ್ಯೆಯನ್ನೆದುರಿಸಬೇಕಾದರೂ ಅದರ ಬಗ್ಗೆ ವಿಶೇಷ ನಡವಳಿಕೆ ಇಲ್ಲ.

ಜನಕ್ಕೆ ಸಮೃದ್ಧಿ, ಸುಭಿಕ್ಷೆ ತರುವ ನಿರೀಕ್ಷೆಯಿಂದ ರಾಷ್ಟ್ರೀಯ ನೇತಾರರು ಹೊರಗಿನ ನಿಯೋಗವೊಂದಕ್ಕೆ ಸ್ವಇಚ್ಛೆಯಿಂದಲೇ ತಮ್ಮ ಅಧಿಕಾರವನ್ನು ಬಿಟ್ಟುಕೊಟ್ಟಿರುವುದೊಂದು ವಿಶೇಷ ನಿರ್ಧಾರವೇ ಸರಿ. ಆರ್ಥಿಕ ಸುಭದ್ರತೆಯ ಗುರಿ ECB ಯ ನಿರ್ಧಾರಗಳಿಗೆ ಪ್ರಮುಖ ಮಾರ್ಗದರ್ಶಿ. ಪ್ರತಿವರ್ಷ ಶೇ. ೨ ಕ್ಕಿಂತ ಹೆಚ್ಚಿನ ಬೆಲೆ ಏರಿಕೆಯನ್ನು ತಡೆಗಟ್ಟುವುದು ಇದರ ಪ್ರಮುಖ ಉದ್ದೇಶ. EMUನ 'ಯೂರೋ'ದೊಂದಿಗೆ ಯೂರೋಪಿಯನ್ ಮಾರುಕಟ್ಟೆ ವಿಸ್ತರಿಸಿ, ವಿಶ್ವದಲ್ಲೇ ಎರಡನೆಯ ಸ್ಥಾನ ಪಡೆಯುತ್ತದೆ. ವಸ್ತುಗಳ ಸಾಗಣೆ ಸರಳವಾಗುತ್ತದೆ. ಪ್ರವಾಸಿಗಳಿಗೆ ಇದರಿಂದ ಅನುಕೂಲ. ವ್ಯಾಪಾರಸ್ಥರು ಬೇರೆ ಬೇರೆ ದೇಶದೊಂದಿಗಿನ ವ್ಯಾಪಾರಕ್ಕಾಗಿ ಸಂಬಂಧಪಟ್ಟ ಕರೆನ್ಸಿಗಳ ಏರ್ಪಾಡು ಮಾಡುವ ಅಗತ್ಯವಿಲ್ಲ. ಡಾಲರ್ ಹಾಗೂ 'ಯೆನ್' (ಜಪಾನ್ ಕರೆನ್ಸಿ) ನೊಂದಿಗೆ ಯೂರೋ ಕೂಡ ಪ್ರಮುಖ ಕರೆನ್ಸಿಯೆನಿಸುತ್ತದೆ.

ಈ ಎಲ್ಲ ಅನುಕೂಲತೆಗಳ ಮಧ್ಯೆ ಸಮಸ್ಯೆಗಳುದ್ಭವಿಸುವುದೇ ಇಲ್ಲವೆಂದೇನಿಲ್ಲ. ಸಿಂಗಲ್ ಕರೆನ್ಸಿ ಇರುವಾಗ ಸ್ಥಳೀಯ ಸಮಸ್ಯೆಗಳು ಇತರ ದೇಶಗಳ ಮೇಲೂ ಪರಿಣಾಮ ಬೀರುತ್ತದೆ. ಏಕೆಂದರೆ EMU ಸ್ಥಳೀಯ ಸಮಸ್ಯೆಗಳಿಗೆ ಗಮನ ಕೊಡುವುದಿಲ್ಲ. ದೇಶ ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಸ್ವತಂತ್ರವಾಗಿದ್ದಲ್ಲಿ, ಅಲ್ಲಿನ ಸೆಂಟ್ರಲ್ ಬ್ಯಾಂಕುಗಳು ಸಂದರ್ಭಕ್ಕನುಸಾರವಾಗಿ ಬದಲಾವಣೆಗಳನ್ನು ಮಾಡಿಕೊಳ್ಳಬಲ್ಲದು. ಆದರೆ ECB ಒಂದು ದೇಶದ ಸಮಸ್ಯೆಗೆ ಗಮನ ಕೊಡದೆ ಇಡೀ EMU ಪರವಾಗಿ ತನ್ನ ನೀತಿಯನ್ನು ರೂಪಿಸುತ್ತದೆ. ಇಂಥ ಸಮಸ್ಯೆಗಳೆದುರಾದಾಗ 'ಯೂರೋ'ದ ಪಾತ್ರವನ್ನು ಇಡೀ ವಿಶ್ವ ಕುತೂಹಲದಿಂದ ಕಾದು ನೋಡುತ್ತದೆ.

ಪ್ರಾರಂಭದಲ್ಲಿ ಯಾವುದೇ ಬದಲಾವಣೆಯನ್ನು ಜನ ವಿರೋಧಿಸುತ್ತಾರೆ. ಸದಸ್ಯ ರಾಷ್ಟ್ರಗಳು ಈ ಪದ್ಧತಿಯಿಂದಾಗಿ ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾದರೆ ಅದಕ್ಕೆ ಬೆಂಬಲ ನೀಡುತ್ತವೆ. ಭಾರತೀಯ ರಿಸರ್ವ್ ಬ್ಯಾಂಕ್ ೨೦೦೧ ರವರೆಗೂ ಠೇವಣಿಯನ್ನು 'ಯೂರೋ'ದ ಮೂಲಕ ತೆಗೆದುಕೊಳ್ಳಲು ಕಮರ್ಷಿಯಲ್ ಬ್ಯಾಂಕುಗಳಿಗೆ ಅನುಮತಿ ನೀಡಿದೆ. ಕರೆನ್ಸಿ ಮಾರುಕಟ್ಟೆಗಳಿಗೊಂದು ಸವಾಲೊಡ್ಡಿನಿಂತಿರುವ ಯೂರೋವನ್ನೇ ಪಾವತಿ ಮಾಡಬೇಕೆಂದು ಯೂರೋಪಿಯನ್ ಒಕ್ಕೂಟ ಬೇಡಿಕೆ ಮುಂದಿಟ್ಟರೆ ಭಾರತ ಅದನ್ನು ಪೂರೈಸುವ ಸ್ಥಿತಿಯಲ್ಲಿರಬೇಕು.

ಯೂರೋದ ಪರಿಚಯ ಏಷ್ಯನ್ ದೇಶಗಳಿಗೆ ಸಂಯುಕ್ತ ಏಷ್ಯನ್ ದೇಶಗಳ ಕೂಟವೊಂದನ್ನು ರಚಿಸುವ ಆಲೋಚನೆಯನ್ನು ತರಬಹುದು. ಪರಸ್ಪರ ಆರ್ಥಿಕ ಅವಲಂಬನೆ ಆ ದೇಶಗಳ ನಡುವಿನ ಇತರ ಬಿಕ್ಕಟ್ಟುಗಳನ್ನು ಪರಿಹರಿಸಬಹುದೇನೋ.

ಒಟ್ಟಿನಲ್ಲಿ ಯೂರೋಕ್ಕೆ ಪರಿವರ್ತನೆ ಹೊಂದಿರುವುದು ಯೂರೋಪಿಯನ್ ದೇಶಗಳ ಗಮ್ಯಾರ 'ಗಣ್ಯ' ನಿರ್ಧಾರವಾಗಿದೆ.

ಇಂಥ ಜನರು ಬೇಕು

ಗೋಪಾಲ ಆಶ್ರಿತ

೭-೫-೪೩, 'ರಮಾನಿಲಯ'
ಜವಾಹರನಗರ, ರಾಯಚೂರು-೫೮೪೧೦೧

ಕಾಲುದಾರಿಯಲ್ಲೊಬ್ಬ ಶಿಕ್ಷಕ

ಬೆಳಿಗ್ಗೆ ೬ ಗಂಟೆಗೆ ಮುಂಬಯಿಯ ಕಾಲ್ದಾರಿಯಲ್ಲಿ ಜನರ ಓಡಾಟವಿರದೆ, ಶಾಂತ ವಾತಾವರಣ ಇರುತ್ತದೆ. ಆದರೆ ಸಮುದ್ರಕ್ಕೆ ಎದುರಾಗಿರುವ ಮುಂಬಯಿಯ ಬಾಂದ್ರಾದಲ್ಲಿಯ ಕಾರ್ಟರ ರಸ್ತೆಯಲ್ಲಿ ಮಾತ್ರ ಗಲಾಟೆ ನಡೆದಿರುತ್ತದೆ. ಸುಮಾರು ೩ ಡಝನ್ ಎಳೆ ಹಾಗೂ ಶುಭ್ರ ಮಕ್ಕಳು ಕಾಲ್ದಾರಿಯಲ್ಲಿ ಹಾಕಿದ ಚಾಪೆಗಳ ಮೇಲೆ ಕುಳಿತು ಅಕ್ಷರಗಳನ್ನು ಪಠಿಸುವುದು, ಅಥವಾ ಕೂಗಿ ಮಗ್ಗಿ ಹೇಳುವುದು ಇಲ್ಲವೆ ಗುಯಿಗುಡುತ್ತ ಪಾಟಿಗಳಮೇಲೆ ಗೀಚುವುದನ್ನು ಕಾಣಬಹುದು. ಈ ಬಡಮಕ್ಕಳ ಚಟುವಟಿಕೆಯನ್ನು ಸೂಕ್ಷ್ಮವಾಗಿ ಗಮನಿಸುವ ವ್ಯಕ್ತಿಯೇ ೭೯ ವರ್ಷದ ಜಿ.ಎಲ್.ಸಿಂಘ್. -ಈ ಏಕೈಕ ಹಾಗೂ ವಿಶಿಷ್ಟ ಕಾಲ್ದಾರಿಯ ವರ್ಗದ ಸ್ಥಾಪಕ.

ಸೈನ್ಯದ ಯುದ್ಧೋಪಕರಣ ಶಾಖೆಯಲ್ಲಿ ಅಧಿಕಾರಿಯಾಗಿದ್ದ ಸಿಂಘ್ ನಿವೃತ್ತನಾಗಿದ್ದ. ಮನೆಕಟ್ಟುವ ಕೂಲಿ ಕೆಲಸಗಾರರ ಮಕ್ಕಳು ಗುಡಿಸಿಲಿನಲ್ಲಿರುವುದು ಮತ್ತು ಅವರಿಗೆ ಯಾವುದೇ ರೀತಿಯ ಮೂಲ ಶಿಕ್ಷಣ ದೊರೆಯುತ್ತಿಲ್ಲವೆಂಬುದು ಸಿಂಘನ ಗಮನಕ್ಕೆ ಬಂತು. ಇಂಥ ಬಡಮಕ್ಕಳಿಗಾಗಿ ಒಂದು ವರ್ಗ ನಡೆಸಬೇಕೆಂದು ನಿರ್ಧರಿಸಿ ೧೯೭೭ರ ಗಾಂಧೀ ಜಯಂತಿಯಂದು ಪ್ರಾರಂಭ ಮಾಡಿದ. ಆಗ ಅವನು ಮಾನಸಿಕವಾಗಿ ಬಹಳ ದುಃಖಿಯಾಗಿದ್ದ. ಕೆಲವೇ ದಿನಗಳ ಹಿಂದೆ ಅವನ ಪತ್ನಿ ತೀರಿಕೊಂಡಿದ್ದಳು. ಇದಾದ ಸ್ವಲ್ಪ ಸಮಯದ ಅನಂತರ ಅವನ ಮಗ ಒಂದು ಕಾರು ಅಪಘಾತದಲ್ಲಿ ಮರಣ ಹೊಂದಿದ್ದ. ಏನಾದರೂ ಉಪಯುಕ್ತ ಕೆಲಸ ಮಾಡಬೇಕೆಂಬ ಹಂಬಲವಿದ್ದ ಸಿಂಘ್ ಚಿಕ್ಕಮಕ್ಕಳಿಗೆ ಪಾಠ ಹೇಳಿಕೊಡಲು ಮುಂದಾದ. ಪ್ರಾರಂಭದಲ್ಲಿ ಕೇವಲ ಎರಡು ಬಾಲಕಿಯರು ಕಲಿಯಲು ಸಿದ್ಧರಾದರು. ಆದರೆ ಈಗ ಈ ಸಂಖ್ಯೆ ೩೨ಕ್ಕೇರಿದೆ. ೧೭ ಬಾಲಕಿಯರ ಮತ್ತು ೧೫ ಬಾಲಕರಿರುವ ಈ ಚಿಕ್ಕ ವರ್ಗದಲ್ಲಿನ ಮಕ್ಕಳ ವಯಸ್ಸು ೨ರಿಂದ ೧೦ ವರ್ಷಗಳು.

ಮೂಲ : ಜನವರಿ ೯೯ ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ 'ಹೀರೋಸ್ ಫಾರ್ ಟುಡೇ' ಲೇಖನ.

ಮೊದಲು ಮಕ್ಕಳ ಹಾಜರಿಯನ್ನು ತೆಗೆದುಕೊಳ್ಳುವುದರಿಂದ ಮೊದಲುಗೊಂಡು ಎಲ್ಲಾ ಕೆಲಸವನ್ನು ತಾನೇ ಮಾಡುತ್ತಿದ್ದ. ಆದರೆ ಅವನಿಂದ ಪ್ರೇರಣೆ ಪಡೆದ ಆ ಬಡಾವಣೆಯಲ್ಲಿನ ಜನರು ಶಾಲೆಯ ಇತರ ಬೇಡಿಕೆಗಳನ್ನು ಪೂರೈಸುವಲ್ಲಿ ಸಿಂಘನಿಗೆ ನೆರವಾದರು. ಇಲ್ಲಿಯವರೆಗೆ ಈ ಎರಡು ಗಂಟೆಯ ವರ್ಗ (ಈ ವರ್ಗ ಬೆಳಿಗ್ಗೆ ೮ಕ್ಕೆ ಮುಕ್ತಾಯ ಗೊಳ್ಳುತ್ತದೆ) ಕಳೆದ ೧೫ ತಿಂಗಳಿನಿಂದ ಒಂದು ದಿನವೂ ಎಡೆಬಿಡದೆ ನಡೆಯುತ್ತಲಿದೆ. ಹೋದವರ್ಷ ಮಳೆಗಾಲದಲ್ಲಿ ಈ ಮಕ್ಕಳ ಪಾಲಕರು, ಮೇಲಂತಸ್ತು ಕಟ್ಟುತ್ತಿದ್ದಂತೆ, ನೆಲಭಾಗವನ್ನು ಬಳಸಿಕೊಂಡು ಸಿಂಘ್ ಮಕ್ಕಳಿಗೆ ಪಾಠ ಹೇಳದ.

ಪಾಠ ಹೇಳಿಕೊಡುವುದು ಮುಗಿದ ನಂತರ ಸಿಂಘ್ ಒಂದು ಧರ್ಮಾರ್ಥ ಸಂಸ್ಥೆಗೆ ಹೋಗಿ ಒಂದು ದಿನದ ಗಳಿಕೆಯನ್ನು ದಾನವಾಗಿ ನೀಡುತ್ತಾನೆ. ಚಿಕ್ಕ ಮಕ್ಕಳಿಗೆ ಈ ರೀತಿ ಸಹಾಯ ಮಾಡುವಲ್ಲಿ ತನಗೆ ಬಹಳ ತೃಪ್ತಿ ಸಿಗುತ್ತದೆಂದು ಅವನು ಹೇಳುತ್ತಾನೆ. "ಇದರಿಂದಾಗಿ ನನ್ನ ನೆನಪಿನ ಶಕ್ತಿ ಮತ್ತು ಆರೋಗ್ಯ ಬಹಳಷ್ಟು ಸುಧಾರಿಸಿದೆ. ಅದಕ್ಕೂ ಮಿಗಿಲಾಗಿ, ನನ್ನ ಜೀವನಕ್ಕೊಂದು ದಿಶೆ ದೊರಕಿದಂತಾಗಿದೆ" ಎಂದೆನ್ನುತ್ತಾನೆ.

—ಲೀನಾ ಎಲ್. ಹಲ್ದಾನಕರ

೨) ಮಾರಕದಾಳಿ

೧೯೯೬ರ ಆಗಸ್ಟ್ ತಿಂಗಳಿನ ಒಂದು ಬೆಳಿಗ್ಗೆ ೩೪ ವರ್ಷದ ಡಾನಾಗೂಡ್ಜ್ ಸ್ನಾನಗೃಹದಿಂದ ಹೊರಗೆ ಬರುತ್ತಿದ್ದಂತೆ ಯಾರೋ ಚೀರುತ್ತಿರುವ ಧ್ವನಿ ಅವಳಿಗೆ ಕೇಳಿಸಿತು. ಹಿಂದೆ ದಾದಿಯಾಗಿ ಕೆಲಸ ಮಾಡಿದ್ದ ಈ ಮಹಿಳೆ ತನ್ನ ಉಡುಪು ಧರಿಸಿ ಮನೆಯಿಂದ ಹೊರಗೆ ಬರುತ್ತಿದ್ದಂತೆ ಎರಡು ನಾಯಿಗಳು ಒಬ್ಬ ಚಿಕ್ಕ ಬಾಲಕಿಯನ್ನು ಹತ್ತಿರದ ಶಾಲಾ ಬಸ್ ನಿಲ್ದಾಣದ ಬದಿಯಿಂದ ಎಳೆದೊಯ್ಯುತ್ತಿದ್ದುದನ್ನು ಕಂಡಳು. ಆ ಬಾಲಕಿಯ ಕೈಕಾಲು ರಕ್ತಮಯವಾಗಿತ್ತು.

ಕೂಡಲೆ ರಸ್ತೆ ಬದಿಗೆ ಧಾವಿಸಿದ ಗೂಡ್ಜ್ ಮೊದಲು ಆ ಬಾಲಕಿಯನ್ನು ಎತ್ತಿಕೊಂಡಳು. ಕರಿಯ ರೊಟವೀಲರ್ ಮಿಕ್ಸ್ ಮತ್ತು ಕಂದುಬಣ್ಣದ ಶಫರ್ಡ್‌ಮಿಕ್ಸ್ ತಳಿಯ ಆ ನಾಯಿಗಳು ಆ ಮಹಿಳೆಯ ತೋಳಿನಲ್ಲಿದ್ದ ಬಾಲಕಿಯೆಡೆಗೆ ಹಾರಿದವು. ಗೂಡ್ಜ್ ಕರಿಯ ನಾಯಿಯನ್ನು ಜೋರಾಗಿ ಒದ್ದಳಲ್ಲದೆ, ಒಂದು ತೋಳಿನಿಂದ ಬಾಲಕಿಯನ್ನು ತಬ್ಬಿಕೊಂಡು ಇನ್ನೊಂದು ಕೈಯಿಂದ ಕಂದುಬಣ್ಣದ ನಾಯಿಗೆ ಬಲವಾಗಿ ಗುದ್ದಿದಳು. ಆದರೂ ಆ ನಾಯಿಗಳು ಮತ್ತೆ ಮತ್ತೆ ಬಾಲಕಿಯ ಕಡೆಗೆ ಹಾರಿದವಲ್ಲದೆ, ಕಡಿದು ಮಾಂಸ ಕಿತ್ತುಕೊಂಡವು.

'ಯಾರಾದರೂ ಸಹಾಯ ಮಾಡಿರಿ!' ಎಂದು ಗೂಡ್ಜ್ ಚೀರುತ್ತಿದ್ದಂತೆ ಜನರು ಬಂದು ಸೇರಹತ್ತಿದರು. ಅನಂತರ ಆ ಬಾಲಕಿಯನ್ನು ನಾಯಿಗಳು ಬಲವಾಗಿ ಎಳೆದದ್ದು ಅವಳಿಂದ ಬೇರ್ಪಡಿಸಿದ್ದು ಕಂಡಿತು. ಆ ಬಾಲಕಿ ಕೆಳಗೆ ಬಿದ್ದ ಕೂಡಲೆ ನಾಯಿಗಳು ಅವಳ ಮೇಲೆ ಹಾರಿ ಅವಳ ತಲೆ, ಹೆರಳು, ಕೈಕಾಲುಗಳನ್ನು, ಗೊಂಬೆಯನ್ನು ಹರಿದು ತಿನ್ನುವಂತೆ, ಕಡಿಯ ಹತ್ತಿದವು.

ಇವನ್ನು ಕಂಡ ಗೂಡ್ಜ್ ಆ ಬಾಲಕಿಯ ಧ್ಯೆ ತನ್ನ ದೇಹವನ್ನು ಒಡ್ಡಿದಳು. ಅವಳ ಲ ಧಡ ಭಾಗದಲ್ಲಿ ಬಹಳ ತೀವ್ರವಾದ ೋವು ಆಗಹತ್ತಿತು. ನಾಯಿಗಳು ವಳನ್ನೇ ಕಡಿಯಹತ್ತಿದವು. ಅವಳ ಡೆಯ ಭಾಗದಲ್ಲಿ ಕಡಿದಾಗಲೂ ಅವಳು ಲಿವಿಲಿ ಒದ್ದಾಡಿದಳಾದರೂ ಸರಿದಾಡ ಲ್ಲ. ಅವಳ ಕೆಳಗಿದ್ದ ಆ ಮಗು 'ನಾನು ಾಯುತ್ತಿದ್ದೇನೆ' ಎಂದು ಕೂಗಿತು.

ಒದ್ದಾಡುತ್ತ ಗೂಡ್ಜ್ ಎದ್ದು ನಿಂತಳು. ುತ್ತೆ ನಾಯಿಗಳು ಆ ಬಾಲಕಿಯ ಮೇಲೆ ಕ್ರಮಣ ಮಾಡಿದವು. ಗೂಡ್ಜ್ ಒಂದು ಾಯಿಯನ್ನು ಎಳೆದೊಗೆದಳಲ್ಲದೆ ನ್ನೊಂದನ್ನು ಬಲವಾಗಿ ಒದ್ದಳು. ಟ್ರಕ್ಕಿನಲ್ಲಿ ಹೋಗುತ್ತಿದ್ದ ಇಬ್ಬರು ಈ ದೃಶ್ಯ ೋಡಿ ಇಳಿದುಬಂದು ನಾಯಿಗಳನ್ನು ಡಿಸುತ್ತಿದ್ದಂತೆ, ಬಾಲಕಿಯ ರಕ್ಷಣೆಗಾಗಿ ಗೂಡ್ಜ್ ತನ್ನ ಮನೆಗೆ ಕರೆದೊಯ್ದಳು.

ಆರೋಗ್ಯ ಇಲಾಖೆಯ ಕಾರ್ಯಕರ್ತರು ಬಂದು ೯ ವರ್ಷದ ಆ ಬಾಲಕಿ ಸೆಲಿನಾ ಟ್ಟಿವೆನ್ಸ್‌ಳನ್ನು ಆಸ್ಪತ್ರೆಗೆ ಸಾಗಿಸಿದರು. ಆರು ಗಂಟೆಗಳಿಗಿಂತ ಹೆಚ್ಚು ಕಾಲ ಆ ಬಾಲಕಿಯ ಮೇಲೆ ಶಸ್ತ್ರ ಚಿಕಿತ್ಸೆ ನಡೆಸಲಾಯಿತು. ಗೂಡ್ಜ್‌ಳಿಗಾದ ಕಡಿತದ ಗಾಯಗಳಿಗೆ ಚಿಕಿತ್ಸೆ ನೀಡಿ ಅವಳನ್ನು ಮನೆಗೆ ಕಳಿಸಲಾಯಿತು. ಆ ಗಾಯಗಳಿಂದ ಚೇತರಿಸಿಕೊಳ್ಳಲು ಅವಳಿಗೆ ೬ ತಿಂಗಳು ಬೇಕಾಯಿತು. ಆದರೂ ಅವಳು "ನಾನು ಮಾಡಿದ ಕೆಲಸದ ಬಗ್ಗೆ ನನಗೆ ವಿಷಾದವಿಲ್ಲ" ಎಂದೆನ್ನುತ್ತಾಳೆ.

"ಡಾನಾ ನನ್ನ ಜೀವ ಉಳಿಸಿದಳು... ಅವರೆಂದರೆ ನನಗೆ ಬಲು ಪ್ರೀತಿ" ಎಂದೆನ್ನುತ್ತಾಳೆ ಸೆಲಿನಾ.

—ಲೊರೆನಾ ಪೆಪ್ಸರ ಎಡ್ಲೆನ್

೩) ರಕ್ತದಾನದಲ್ಲಿ ದಾಖಲೆ

ವೈದ್ಯ ಸೇವೆಯ ತಂತ್ರಜ್ಞರು ರಕ್ತ ತೆಗೆದುಕೊಳ್ಳಲು ತೋಳಿನಲ್ಲಿ ಚುಚ್ಚುತ್ತಿರುವಂತೆ ಬಿಲ್ ಒಬ್ರಿಯಾನನಿಗೆ ಹೆದರಿಕೆಯಾಗುವುದೇ ಇಲ್ಲ. ಅವನು ಈ ಮೊದಲು ಈ ರೀತಿ ಚುಚ್ಚಿಸಿಕೊಂಡದ್ದುಂಟು. ನ್ಯೂಯಾರ್ಕ್ ನಗರದ ದೂರವಾಣಿ ಕಂಪೆನಿಯೊಂದರಲ್ಲಿ ನಿರ್ವಹಣಾಧಿಕಾರಿಯಾಗಿ ನಿವೃತ್ತನಾಗಿರುವ ೬೭ ವರ್ಷದ ಈ ವೃದ್ಧ ೧೯೫೧ರಿಂದ ಸುಮಾರು ೪೫ ಲೀಟರನಷ್ಟು ರಕ್ತ—೯ ಜನರ ದೇಹಕ್ಕೆ ಸಾಲುವಷ್ಟು—ನೀಡಿದ್ದಾನೆ.

ಒಬ್ರಿಯಾನ್ ಮೊದಲಸಲ ರಕ್ತದಾನಿಯಾದದ್ದು ಕೊರಿಯನ್ ಯುದ್ಧದ ಕಾಲದಲ್ಲಿ. "ನನ್ನ ಜೊತೆಯ ಸೈನಿಕರನ್ನು ಉಳಿಸಲು ಈ ರೀತಿ ಮಾಡಿದೆ" ಎಂದು ಹೇಳುತ್ತಾನೆ. ಈಗ ೪೭ ವರ್ಷಗಳ ನಂತರ ಕೂಡಾ ಅವನು ರಕ್ತ ನೀಡುತ್ತಲಿದ್ದಾನೆ. ಅವನು ಈ ಅವಧಿಯಲ್ಲಿ ಎಷ್ಟು ಜನರ ಜೀವ ಉಳಿಸಿದ್ದಾನೆಂಬುದರ ಕಲ್ಪನೆ ಅವನಿಗೆ ಇಲ್ಲ. ಆದರೆ ಎರಡು ಘಟನೆಗಳು ಮಾತ್ರ ಎದ್ದು ಕಾಣುತ್ತವೆ.

೧೯೬೩ರ ಒಂದು ರಾತ್ರಿ ೧.೩೦ ಕ್ಕೆ ಒಬ್ರಿಯಾನನಿಗೆ ಆ ಊರಿನ ಆಸ್ಪತ್ರೆಯಿಂದ ಕರೆ ಬಂತು. ಒಬ್ಬ ಗರ್ಭಿಣಿ ಮಹಿಳೆಗೆ ತುರ್ತಾಗಿ ಶಸ್ತ್ರ ಚಿಕಿತ್ಸೆ ನಡೆಯಲಿತ್ತು. ಅವಳಲ್ಲಿ ರಕ್ತದ ಕೊರತೆಯಿತ್ತು. "ನಾನು

ಸ್ವಲ್ಪ ರಕ್ತ ಕೊಟ್ಟು ಮನೆಗೆ ಹೋಗಿ ಮಲಗಿದೆ" ಎಂದೆನ್ನುತ್ತಾನೆ. ಒಂದು ವಾರದ ನಂತರ ಸಮಾಚಾರ ಪತ್ರಿಕೆಯಲ್ಲಿ ಆ ಮಹಿಳೆಯ ತಾಯಿ ತನ್ನ ಮಗಳಿಗೆ ಮತ್ತು ಮೊಮ್ಮಗುವಿನ' ಪ್ರಾಣ ಉಳಿಸಿದ ಎಲ್ಲ' ಅಪರಿಚಿತ ದಾನಿಗಳಿಗೆ ಕೃತಜ್ಞತೆ ಸಲ್ಲಿಸಿದ್ದಳು.

೧೯೭೬ ರಲ್ಲಿ ಒಬ್ರಿಯಾನನ ಹಿರಿಯ ಮಗಳು ಅನ್ನಿಗೆ ಬೆನ್ನಲ್ಲಿ ಶಸ್ತ್ರಚಿಕಿತ್ಸೆ ಮಾಡಬೇಕಾಗಿತ್ತು. ಆದರೆ ಆಸ್ಪತ್ರೆಯಲ್ಲಿ ಸಾಕಷ್ಟು O–ನೆಗೆಟಿವ್ ರಕ್ತವಿರಲಿಲ್ಲ. ಮತ್ತೆ ಒಬ್ರಿಯಾನ್ ತನ್ನ ತೋಳನ್ನು ಚಾಚಿದ.

ಎಷ್ಟೋಸಲ, ಒಬ್ರಿಯಾನ್ ರಕ್ತ ನೀಡಿ ೫೬ ದಿನಗಳಾಗುವ ಒಳಗೆ ಮತ್ತೆ ರಕ್ತ ಶೇಖರವಾಗುವ ಅವಧಿ–ಮೊದಲೇ ರ[...] ಕೊಟ್ಟಿದ್ದುಂಟು. ಅವರು ಅವನನ್ನು [...] ಯುವುದೂ ಮುಂದುವರೆದಿದೆ. "ಅವ[...] 'ಏ ಬಿಲ್ ನಿನ್ನ ೫೬ ದಿನಗಳು ಮುಗಿ[...] ವೆಯೆ?' ಎಂದು ಕೇಳುತ್ತಾರೆ. ಹಾಗಾ[...] ದ್ದರೆ ನಾನು ಹೋಗಿ ಮತ್ತೆ ನೀಡುತ್ತೇನ[...] ಎಂದು ಒಬ್ರಿಯಾನ್ ಹೇಳುತ್ತಾನೆ.

"ಕೊನೆಯ ಕರೆ ಗಂಟೆ ಬಾರಿಸಿದಾ[...] ಸಂತಪೀಟರ 'ನೀನು ಏನು ಸಾಧಿಸಿದೆ[...] ಎಂದು ಕೇಳಿದರೆ 'ನಾನು ಇಷ್ಟು ರಕ್ತವನ್[...] ನೀಡಿದ್ದೇನೆ' ಎಂದು ಹೇಳುವೆ. ಅಷ್ಟರಿಂ[...] ನನಗೆ ಪ್ರವೇಶ ದೊರಕಲೇಬೇಕು" ಎಂದ[...] ನಗುತ್ತ ಹೇಳುತ್ತಾನೆ ಒಬ್ರಿಯಾನ್.

—ನ್ಯೂಯಾರ್ಕ್ ಪೋಸ್ಟ್‌ನಲ್ಲಿ ಗ್ರ[...]
ಟಿ. ಮನ್[...]

ಕನ್ನಡಿಗರೇ ನಾವು ನಮ್ಮ ಆಲಸ್ಯವನ್ನು ಬಿಡೋಣ : ಭ್ರಾಮಕ ಕಲ್ಪನೆಗಳನ್ನು ಬಿಟ್ಟುಬಿಡೋಣ ; ಮತ್ತು ಮುಂದಿನ ಮಾರ್ಗಕ್ಕೆ ಹತ್ತೋಣ. ಪಾತಾಳಕ್ಕಿಳಿದ ನಮ್ಮ ಕರ್ನಾಟಕ ಆರ್ಯ ಸಂಸ್ಕೃತಿ ಯನ್ನು ನಾವು ಉದ್ಧರಿಸದೆ ಇನ್ನಾರು ಉದ್ಧರಿಸುವರು.

—ಆಲೂರು ವೆಂಕಟರಾವ್

೯೯೯-೨೦೦೦ ಭಾರತದ: ಪ್ರವಾಸೋದ್ಯಮ ವರ್ಷ

ಎನ್. ಆರ್. ಪಾಟೀಲ್
ಸಾರ್ಟಿಂಗ್ ಕಛೇರಿ
ಆರ್.ಎಂ.ಎಸ್. ಹೊಸಪೇಟೆ—೫೮೩೨೦೧

ಪ್ರವಾಸ—ರಾಷ್ಟ್ರೀಯ ಭಾವೈಕ್ಯ ; ಆರ್ಥಿಕ ಅಭಿವೃದ್ಧಿ

ಒಂದು ಕಾಲದಲ್ಲಿ ಪ್ರವಾಸವೆಂದರೆ ಪುಣ್ಯ ಕ್ಷೇತ್ರಗಳ ಸಂದರ್ಶನವೆಂದೇ ತಿಳಿದುಕೊಳ್ಳಲಾಗಿತ್ತು. ಆದರೆ ಇಂದು ಪ್ರವಾಸದ ವಿಷಯ ತುಂಬ ವಿಶಾಲ. ಪ್ರಕೃತಿಯ ಪರಮಾನಂದ ನೀಡುವ ರಮಣೀಯ ದೃಶ್ಯಗಳ ಪ್ರದೇಶಗಳು, ಚಾರಿತ್ರಿಕ ಶಿಲಾ ಸ್ಮಾರಕಗಳು, ಕಟ್ಟಡಗಳು, ಜಲಪಾತಗಳು, ಅಪೂರ್ವ ಚಿತ್ರಕಲಾ ಆಲಯಗಳು.... ಇವೆಲ್ಲವುಗಳೂ ಇಂದು ಪ್ರವಾಸೋದ್ಯಮದ ಪ್ರಗತಿಗೆ ಸಹಾಯ ಹಸ್ತ ನೀಡಿವೆ. ಅಮೆರಿಕಾದ ನಯಾಗರ ಜಲಪಾತ, ಚೀನಾದ ಮಹಾಗೋಡೆ, ಆಸ್ಟ್ರೇಲಿಯಾದ ಹವಳ ದ್ವೀಪಗಳನ್ನು ವೀಕ್ಷಿಸಿದಾಗ ಮನಸ್ಸು ರೋಮಾಂಚನಗೊಳ್ಳುತ್ತದೆ. ಹಾಗಾಗಿಯೇ ಇಂದು ಜಗತ್ತಿನಾದ್ಯಂತ ಪ್ರವಾಸಿಗರ ಸಂಖ್ಯೆ ದಿನೇ ದಿನೇ ಬೆಳೆಯುತ್ತಲಿದೆ. ಆದಕ್ಕಾಗಿ ಪ್ರಸ್ತುತ ವರ್ಷವನ್ನು ಕೇಂದ್ರ ಸರಕಾರವು "ಪ್ರವಾಸೋದ್ಯಮ ವರ್ಷ" ವೆಂದು ಘೋಷಿಸಿದೆ.

ಇಂದು ಪ್ರವಾಸೋದ್ಯಮ ಜಗತ್ತಿನಲ್ಲಿ ತುಂಬ ತೀವ್ರಗತಿಯಲ್ಲಿ ಬೆಳೆಯುತ್ತಿದೆ. ಈ ಉದ್ಯಮವು ಇಂದು ಕೈಗಾರಿಕೆಗೆ ನಂತರದ ಸ್ಥಾನದಲ್ಲಿದ್ದು, ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಲಿದೆ. ಪ್ರಪಂಚದ ಪ್ರವಾಸೋದ್ಯಮದ ಭೂಪಟದಲ್ಲಿ ಭಾರತಕ್ಕೂ ಒಂದು ಮಹತ್ವದ ಸ್ಥಾನವಿದೆ. ಸುಮಾರು ೫೦೦೦ ವರ್ಷಗಳ ಭವ್ಯ ಸಾಂಸ್ಕೃತಿಕ ಪರಂಪರೆಯ ಜೊತೆಗೆ ನಿಸರ್ಗ ರಮಣೀಯವಾಗಿರುವ ಭಾರತದಲ್ಲಿ ಪ್ರವಾಸೋದ್ಯಮ ಬೆಳೆಯಲು ಸಾಕಷ್ಟು ಅವಕಾಶಗಳಿವೆ. ಆದರೆ ಸ್ವಾತಂತ್ರ್ಯ ಭಾರತದ ಈ ಅರ್ಧ ಶತಮಾನದುದ್ದಕ್ಕೂ ನಮ್ಮ ದೇಶದ ಪ್ರವಾಸೋದ್ಯಮವು ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿಯಾಗಿಲ್ಲ.

ಪ್ರವಾಸದ ಅನುಭವ ವಿಶಿಷ್ಟವಾದುದು. ನಿಸರ್ಗ ತಾಣಗಳು, ವಿನೋದ ಪ್ರಸಂಗಗಳು ಮನಕ್ಕೆ ಮುದ ನೀಡುತ್ತವೆ. ವಿವಿಧ ಪ್ರಾಂತ ದೇಶಗಳನ್ನು ಸಂದರ್ಶಿಸಿದಾಗ ಅಲ್ಲಿಯ ಇತಿಹಾಸ, ಕಲೆ, ಸಂಸ್ಕೃತಿಯ ಅರಿವು ಉಂಟಾಗುತ್ತದೆ. ಹೊಸಬರೊಂದಿಗಿನ ಒಡನಾಟ, ಹೊಸ ಆಚಾರ-ವಿಚಾರಗಳು ನಮ್ಮ ಚಿಂತನೆಯ ಪರಿಧಿಯನ್ನು ವಿಸ್ತಾರಗೊಳಿಸುತ್ತವೆ. ಅಲ್ಲದೇ ರಾಷ್ಟ್ರೀಯ ಹೊಂದಾಣಿಕೆ,

ಭಾವೈಕ್ಯತೆ ಬೆಳವಣಿಗೆಗೆ ಸಹಾಯಕವಾಗುತ್ತದೆ. ಅಂತಾರಾಷ್ಟ್ರೀಯ ಪರಿಜ್ಞಾನ ಮುಂತಾದವಕ್ಕೆ ಪ್ರವಾಸ ತುಂಬ ಸಹಕಾರಿಯಾಗಿದೆ.

ಭಾರತ ನಿಸರ್ಗ ರಮ್ಯತೆಯ ದೇಶ. ನಮ್ಮ ಪ್ರಾಕೃತಿಕ ಸೊಬಗು ಮಂಜು ಮುಸುಕಿದ ಹಿಮಾಲಯದಿಂದ ಹಿಡಿದು ಮರುಭೂಮಿ ರಾಜಾಸ್ಥಾನದವರೆಗೆ ಹಬ್ಬಿದೆ. ಪಶ್ಚಿಮ ಘಟ್ಟಗಳ ರಮ್ಯತೆ, ಮೇಘಾಲಯ, ನಾಗಾಲ್ಯಾಂಡ್, ತ್ರಿಪುರಾದ ಕಾಡುಗಳು, ಗೋವಾದಂಥಹ ಕಡಲತಡಿಗಳು, ವಿಭಿನ್ನ ಬಗೆಯ ಪ್ರಾಣಿ-ಪಕ್ಷಿ ಸಂಕುಲಗಳಿಂದ ಕೂಡಿರುವ ಭಾರತ ನಿಜಕ್ಕೂ ಪ್ರಪಂಚದ ಆಕರ್ಷಣೀಯ ಪ್ರವಾಸೀ ದೇಶಗಳಲ್ಲಿ ಒಂದಾಗಿದೆ. ಹಲವಾರು ಸಾಮ್ರಾಜ್ಯಗಳು ಆಳ್ವಿಕೆ ನಡೆಸಿ ಗತಿಸಿದ ಅವಶೇಷಗಳ ಜೊತೆಗೆ ಬೃಹತ್ ನಾಗರೀಕತೆಗೆ ಜನ್ಮ ನೀಡಿದ ಸ್ಮಾರಕಗಳು ಈ ನೆಲದಲ್ಲಿವೆ. ದಕ್ಷಿಣ ಭಾರತದ ಭವ್ಯ ದೇವಾಲಯಗಳು, ತಾಜ್ ಮಹಲ್, ಕೆಂಪುಕೋಟೆ, ರಾಜಸ್ಥಾನದ ಅರಮನೆಗಳು ಮನಸೂರೆಗೊಳ್ಳುತ್ತವೆ. ಇಷ್ಟೆಲ್ಲಾ ಪ್ರಕೃತಿ ಸೌಂದರ್ಯ ಸ್ಥಳಗಳು, ಇತಿಹಾಸ ಪ್ರಸಿದ್ಧ ಸ್ಥಳಗಳು ಇಲ್ಲಿದ್ದರೂ ಪ್ರವಾಸೋದ್ಯಮದಲ್ಲಿ ಪ್ರಗತಿ ಸಾಧಿಸಲಾಗಿಲ್ಲ. ಈ ಕೊರತೆಯನ್ನು ನೀಗಲೆಂದೇ ಕೇಂದ್ರ ಸರಕಾರವು ಪ್ರವಾಸೋದ್ಯಮ ಅಭಿವೃದ್ಧಿಗಾಗಿ ದೃಢ ಹೆಜ್ಜೆ ಇರಿಸಿದೆ. ಪ್ರಸ್ತುತ ವರ್ಷವನ್ನು "ಭಾರತಕ್ಕೆ ಭೇಟಿ ನೀಡಿ" ಎಂದು ಘೋಷಿಸಿದೆ. ಇನ್ನುಮುಂದೆ ಪ್ರತಿ ವರ್ಷ ೧೦೦ ಕೋಟಿ ವೆಚ್ಚ ಮಾಡಿ ದೇಶದಲ್ಲಿನ ೫೦ ದರ್ಶನೀಯ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಸರಕಾರ ನಿರ್ಧರಿಸಿದೆ.

ಈ ಯೋಜನೆ ಜಾರಿಯ ವೆಚ್ಚದಲ್ಲಿ ಅರ್ಧ
ದಷ್ಟು ಹಣವನ್ನು ಆಯಾ ರಾಜ್ಯಗಳು ಭರಿ
ಬೇಕೆಂದು ಹೇಳಲಾಗಿದೆ. ಇದಕ್ಕೆ ರಾಜ್ಯ
ಗಳು ಸೂಕ್ತ ಸಹಕಾರ ನೀಡಿದರೆ ಭಾರತದ
ಪ್ರವಾಸೋದ್ಯಮ ಲಾಭದಾಯಕ
ವಾಗುವುದರಲ್ಲಿ ಸಂದೇಹವಿಲ್ಲ.

ಪ್ರಗತಿಗಾಗಿ ಪ್ರಯತ್ನ

ಪ್ರಪಂಚದ ಪ್ರವಾಸೋದ್ಯಮದಲ್ಲಿ
ಭಾರತದ ಪಾಲು ಶೇಕಡಾ ೦.೪೮ರಷ್ಟು
ಭಾರತಕ್ಕೆ ಪ್ರತಿವರ್ಷ ಬರುವ ವಿದೇಶಿ
ಪ್ರವಾಸಿಗರ ಸಂಖ್ಯೆ ೨೪ ಲಕ್ಷ ಮಾತ್ರ
ಅದೇ ಹಾಂಗ್‌ಕಾಂಗ್, ಸಿಂಗಪೂರ್ ದೇ
ಗಳನ್ನು ನೋಡಲು ಬರುವ ವಿದೇಶೀಯ
ಸಂಖ್ಯೆ ಒಂದು ಕೋಟಿಗೂ ಹೆಚ್ಚು! ಕಳೆ
ದಶಕದಲ್ಲಿ ಚೀನಾದೇಶಕ್ಕೆ ಬಂದ ಪ್ರವಾ
ಗರ ಸಂಖ್ಯೆ ೫ ಕೋಟಿಯಿಂದ ೭ ಕೋಟಿ
ಏರಿದೆ. ಆದರೆ ಭಾರತದಲ್ಲಿ ೨೪ ಲಕ್ಷ ದಾ
ಲಿಲ್ಲ. ೧೯೮೫ರಲ್ಲಿ ಪ್ರಪಂಚ ಪ್ರವಾಸಿಗ
ಸಂಖ್ಯಾನುಸಾರ ೧೩ನೇ ಸ್ಥಾನದಲ್ಲಿ ಚೀನ
ಇತ್ತು. ಆದರೆ ೧೯೯೭ರಷ್ಟರಲ್ಲಿ ವ್ಯಾಪ
ಅಭಿವೃದ್ಧಿ ಸಾಧಿಸಿ ೫ನೇ ಸ್ಥಾನಕ್ಕೆ ಬ
ಪಡೆದಿದೆ. ಆದರೆ ನಮ್ಮಲ್ಲಿ ಕೆಟ್ಟ ರಸ್ತೆಗಳ
ಸಾರಿಗೆ, ವಸತಿ, ಹೊಟೇಲ್‌ನಂಥ ಮೂ
ಅಗತ್ಯಗಳ ಕೊರತೆ ಒಂದೆಡೆಯಾದ
ರಾಜಕೀಯ ಅಸ್ಥಿರತೆ, ಸಾಮಾಜಿಕ ಅಶಾಂ
ಭಯೋತ್ಪಾದನೆ ಪ್ರಕರಣಗಳಿಂದಾ
ವಿದೇಶೀ ಪ್ರವಾಸಿಗರ ಸಂಖ್ಯೆಯ
ಇಳಿಮುಖವಾಗಿದೆ.

ಪ್ರವಾಸೋದ್ಯಮ ಸಂಸ್ಥೆಯ ಅ
ಅಂಶಗಳ ಪ್ರಕಾರ ಎರಡು ದಶಕಗಳ ಹಿ
ಜಗತ್ತಿನ ಜನಸಂಖ್ಯೆ ೪೪೦ ಕೋಟಿ ಇತ್ತ

ಆಗ ಜಗತ್ತಿನ ಪ್ರವಾಸಿಗರ ಸಂಖ್ಯೆ ೨೮.೭೦ ಕೋಟಿ ಇತ್ತು. ೧೭ ವರ್ಷಗಳಲ್ಲಿ ಜಗತ್ತಿನ ಜನಸಂಖ್ಯೆ ೫೨೦ ಕೋಟಿಗೇರಿ ಅದರಲ್ಲಿಯು ೫೯ ಕೋಟಿ ಜನ ಜಗತ್ತಿನ ವಿವಿಧ ದೇಶಗಳಿಗೆ ಪ್ರವಾಸ ಕೈಗೊಂಡಿದ್ದರೆನ್ನಲಾಗಿದೆ. ಈ ಸಂಸ್ಥೆಯ ಅಂದಾಜಿನ ಪ್ರಕಾರ ೨೦೨೦ರ ವೇಳೆಗೆ ಪ್ರಪಂಚದ ಜನಸಂಖ್ಯೆ ೭೮೦ ಕೋಟಿಯಾಗುತ್ತದೆ ಎಂದು ಹೇಳಲಾಗಿದ್ದು ಇದರಲ್ಲಿ ಪ್ರವಾಸಿಗರ ಸಂಖ್ಯೆ ೧೬೦ ಕೋಟಿ ಎಂದು ಅಂದಾಜಿಸಲಾಗಿದೆ. ೧೯೯೭ರಲ್ಲಿ ೬೧ ಕೋಟಿ ೭೦ ಲಕ್ಷ ಜನ ಪ್ರವಾಸಿಗರು ವಿವಿಧ ದೇಶಗಳಿಗೆ ಪ್ರವಾಸಕೈಗೊಂಡಿದ್ದರು. ಈ ಸಂಖ್ಯೆಯಲ್ಲಿ ಅದೇ ವರ್ಷ ಭಾರತಕ್ಕೆ ಬಂದ ವಿದೇಶೀ ಪ್ರವಾಸಿಗರ ಸಂಖ್ಯೆ ಕೇವಲ ೨೪ ಲಕ್ಷ! ನಮ್ಮ ದೇಶದ ೧೨೦ ವಿಮಾನ ನಿಲ್ದಾಣಗಳಲ್ಲಿ ಅಂತಾರಾಷ್ಟ್ರೀಯ ವಿಮಾನಗಳು ಇಳಿಯಲು ಕೇವಲ ೧೨ ನಿಲ್ದಾಣಗಳಲ್ಲಿ ಮಾತ್ರ ಅವಕಾಶವಿದೆ.

ಸ್ವಾತಂತ್ರ್ಯ ಭಾರತವನ್ನು ಆರಂಭದಿಂದಲೂ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಪ್ರಯತ್ನ ಮಾಡುತ್ತ ಬಂದಿದೆ. ಆದರೆ ಪ್ರಗತಿ ತೃಪ್ತಿಕರವಾಗಿರಲಿಲ್ಲ. ೧೯೪೮ರಲ್ಲಿ ಜಾನ್ ಸಾರ್ಜಂಟರ್ ನೇತೃತ್ವದಲ್ಲಿ ನೇಮಿಸಿದ ಸಮಿತಿ ಅದೇ ವರ್ಷ ತನ್ನ ವರದಿ ನೀಡಿತ್ತು. ಇದಾದ ೧೮ ವರ್ಷಗಳ ನಂತರ ೧೯೬೬ರಲ್ಲಿ ಸ್ಥಾಪನೆಯಾದ ಪ್ರವಾಸೋದ್ಯಮ ಅಭಿವೃದ್ಧಿ ಸಂಸ್ಥೆಯ ಸಾಧನೆ ಹೀಗಿದೆ:

* ಪ್ರವಾಸಿಗರ ಅನುಕೂಲಕ್ಕಾಗಿ ದೇಶಾದ್ಯಂತ ೫೯,೦೦೦ ಹೊಟೇಲ್‌ಗಳನ್ನು ನಿರ್ಮಿಸುವ ಪ್ರಯತ್ನ ನಡೆದಿದೆ.
* ೨೧ನೇ ಶತಮಾನದ ವೇಳೆಗೆ ದೇಶದಲ್ಲಿ ೧೦,೦೦೦ ಹೊಟೇಲ್ ಸ್ಥಾಪಿಸುವ ಗುರಿ ಇರಿಸಿಕೊಳ್ಳಲಾಗಿದೆ.
* ಭಾರತೀಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಐ.ಟಿ.ಡಿ.ಸಿ) ಪ್ರವಾಸಿಗರ ಅನುಕೂಲಕ್ಕಾಗಿ ೧೯೫೦ಕ್ಕಿಂತಲೂ ಮೊದಲು ಕಟ್ಟಿದ್ದ ಅರಮನೆಯನ್ನು, ಕೋಟೆಗಳನ್ನು 'ಹೆರಿಟೇಜ್' ಹೊಟೇಲ್‌ಗಳೆಂದು ಪರಿಗಣಿಸಿ ಬಳಸಿಕೊಂಡಿದೆ.
* ಭರತಪುರ ಪಕ್ಷಿಧಾಮ, ಕಾಂಚೆರಂಗ, ಗೀರ್, ಕನ್ಹಾ, ದಾಂಡೇಲಿ ಮುಂತಾದ ಕಡೆಗಳಲ್ಲಿ ಅರಣ್ಯ ತಂಗುದಾಣಗಳನ್ನು ನಿರ್ಮಿಸಲಾಗಿದೆ.
* ಪರ್ವತಾರೋಹಣ, ದೋಣಿ ಸ್ಪರ್ಧೆ, ಜಾತ್ರೆ, ಧಾರ್ಮಿಕ ಸಭೆ, ಸಂಗೀತ, ನೃತ್ಯ, ಕರಕುಶಲ ವಸ್ತುಗಳ ಪ್ರದರ್ಶನ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಂಡು ಪ್ರವಾಸಿಗರನ್ನು ಆಕರ್ಷಿಸಲು ಪ್ರಯತ್ನಿಸಲಾಗಿದೆ.
* ಭಾರತೀಯ ರೇಲ್ವೆ ವಿಶೇಷ ರಿಯಾಯಿತಿ ವ್ಯಾಸುಗಳನ್ನು ನೀಡಿ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡಿದೆ. ಅಲ್ಲದೆ ಗಾಲಿಗಳ ಮೇಲೆ ಅರಮನೆ ರೈಲನ್ನು ಮುಖ್ಯ ಪ್ರವಾಸೀ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸಿದೆ.
* ಭಾರತೀಯ ವಿಮಾನಯಾನವು 'ಡಿಸ್ಕವರ್ ಇಂಡಿಯಾ' ಎಂಬ ಜನಪ್ರಿಯ ಯೋಜನೆ ಪ್ರವಾಸಿಗರಿಗಾಗಿ ಹಾಕಿಕೊಂಡಿದೆ.

* ಧಾರ್ಮಿಕ ಕ್ಷೇತ್ರಗಳ ಪ್ರವಾಸಕ್ಕಾಗಿ ಅನುವು ಮಾಡಲು "ಭಾರತೀಯ ಯಾತ್ರಿ ಆವಾಸ್ ವಿಕಾಸ್ ಸಮಿತಿ"ಯು ಅಸ್ತಿತ್ವದಲ್ಲಿದೆ.
* ೧೯೯೧ರಲ್ಲಿ 'ಟೂರಿಸ್ಂ ಆಕ್ಷನ್ ಪ್ಲ್ಯಾನ್' ಎಂಬ ಘೋಷಣೆ ಹೊರಡಿಸಿ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಸ್ಥಳೀಯ ಮತ್ತು ವಿದೇಶೀ ಪ್ರವಾಸಿಗರಿಗೆ ನಿಯಮಗಳನ್ನು ಸರಳಗೊಳಿಸಲಾಯಿತು.
* ಕಳೆದ ವರ್ಷ ಕೊಲಂಬೋದಲ್ಲಿ ಜರುಗಿದ ಸಾರ್ಕ್ ಶೃಂಗಸಮಾವೇಶದಲ್ಲಿ ಸಾರ್ಕ್ ರಾಷ್ಟ್ರಗಳ ಮಧ್ಯೆ ನೇರ ವಿಮಾನ ಸೌಕರ್ಯ, ವೀಸಾ ಮಾರ್ಪಾಡು, ಸುಂಕ ನಿಯಮಗಳನ್ನು ಸುಲಭಗೊಳಿಸುವುದರ ಬಗೆಗೆ ನಿರ್ಧಾರ ಕೈಗೊಳ್ಳಲಾಗಿದೆ. ಸದಸ್ಯ ರಾಷ್ಟ್ರಗಳ ಪ್ರವಾಸೋದ್ಯಮ ಸಮಿತಿಯು ಅಭಿವೃದ್ಧಿಗಾಗಿ ಸಿದ್ಧಪಡಿಸಿದ ಕರಡನ್ನು ಅಂಗೀಕರಿಸಲಾಗಿದ್ದು ಇದನ್ನು "ಕೊಲಂಬೋ ತೀರ್ಮಾನ" ಎಂದು ಕರೆಯಲಾಗಿದೆ.
* ಭಾರತ ಸರಕಾರ ಇತ್ತೀಚೆಗೆ ಪ್ರವಾಸೋದ್ಯಮಕ್ಕೆ 'ಎಕ್ಸ್‌ಪೋರ್ಟ್ ಹೌಸ್' ಸ್ಥಾನಮಾನ ನೀಡಿದೆ.

ಹೊರಗಿನಿಂದ ಬಂದು ನಮ್ಮನ್ನು ತುಳಿದವರನ್ನು ಮತ್ತು ತುಳಿಯುತ್ತಿರುವವರನ್ನು ಪೂಜಿಸಿ ಪಾಪಿಗಳಾಗಿದ್ದೇವೆ. ಈಗ ಕ್ಲೈಬ್ಯವನ್ನು ದೂರ ಮಾಡಬೇಕಾದ ಕಾಲ. ನಮ್ಮ ಆಲಸ್ಯವೇ ನಮ್ಮ ಮೃತ್ಯು. ಕನ್ನಡಿಗರು ಮೂಲೆ ಮೂಲೆಗಳಲ್ಲಿ ಉಗ್ರ ಚಳುವಳಿಯನ್ನು ಕೈಗೊಳ್ಳಬೇಕು. ಸಾಹಿತ್ಯ, ಸಂಗೀತ, ರಾಜಕಾರಣ, ಔದ್ಯೋಗ, ಸಮಾಜ ಯಾವ ಹೆಸರಿನಲ್ಲಿ ಪರಾಕ್ರಮಣ ಕಂಡುಬಂದರೂ ಕನ್ನಡಿಗರು ಎದುರಿಸಬೇಕು.

—ಅನಕೃ

ಶಾಖವಿಲ್ಲದೆ ಬೆಳಕು?

ಡಾ|| ಬಿ. ಎಸ್. ಶೈಲಜಾ
ಜವಹರ್‌ಲಾಲ್ ನೆಹರೂ ತಾರಾಲಯ
ಶ್ರೀ ಟಿ. ಚೌಡಯ್ಯ ರಸ್ತೆ, ಬೆಂಗಳೂರು-೧

ಜೀವಕಾರಣ ಮೂಲ ಗೂಢವಾಗಿರ್ದೊಡಂ
ಭಾವಿಕಾಸದ ಬೆಳಕನಾದನಿತು ಗಳಿಸಿ
ಕೈವಲ್ಯ ಪಥವನರಸುತ ಯಾತ್ರಿಸಬೇಕು
ದೀವಿಗೆಯು ಮತಿಯೊಂದೆ ಮಂಕುತಿಮ್ಮ

ಬೆಳಕಿದ್ದ ಮೇಲೆ ಶಾಖ ಇರಲೇಬೇಕೇ? ಒಂದಲ್ಲ ಒಂದು ಸಲ ಈ ಪ್ರಶ್ನೆ ಎಲ್ಲರನ್ನೂ ಕಾಡಿರಬಹುದು. ಇದ್ದಕ್ಕಿದ್ದ ಹಾಗೆ 'ಪವರ್ ಕಟ್' ಆಯಿತೆಂದುಕೊಳ್ಳಿ. ಕತ್ತಲಲ್ಲಿ ಕೈತಡವಿ ಬೆಂಕಿಪೊಟ್ಟಣ ಹುಡುಕಿ ಗೀಚುತ್ತೀರಿ. ಕೈಸುಟ್ಟೀತು ಎಂಬ ಎಚ್ಚರಿಕೆಯ ಮಾತು ಅನಾವಶ್ಯಕ. ದೀಪ ಬೆಳಗುತ್ತೀರಿ. ಮೋಂಬತ್ತಿಯೋ ಇರಬಹುದು, ಸೀಮೆ ಎಣ್ಣೆ ಬುಡ್ಡಿಯೋ ಇರಬಹುದು—ಶಾಖ ವಂತೂ ಇರುತ್ತದೆಯಲ್ಲವೇ?

ಹಾಗಾದರೆ ಶಾಖವಿಲ್ಲದೇ ಬೆಳಕಿರಲು ಸಾಧ್ಯವೇ? ಈ ಪ್ರಶ್ನೆ ತುಂಬಾ ಹಳೆಯದು. ಮುನ್ನೂರು–ನಾನೂರು ವರ್ಷಗಳ ಹಿಂದೆ ಬೆಂಕಿಯಿಲ್ಲದೆ ಹೊಗೆಯಿಲ್ಲ ಎಂಬಗಾದೆಯಂತೆ ಶಾಖವಿಲ್ಲದೆ ಬೆಳಕಿಲ್ಲ ಎಂಬ ವಾಕ್ಯ ಜನಜನಿತವಾಗಿತ್ತು. ಈ ಬಗ್ಗೆ ನಡೆದ ಜಿಜ್ಞಾಸೆ ಸ್ವಾರಸ್ಯಕರವಾಗಿದೆ.

ಎನ್‌ಸೈಕ್ಲೋಪೀಡಿಯ ಬ್ರಿಟಾನಿಕಾದ ಮೂರನೆಯ ಆವೃತ್ತಿ ಸುಮಾರು ೧೭೫೦ ರಲ್ಲಿ ಪ್ರಕಟವಾಯಿತು. ಅದರಲ್ಲಿ ಬೆಳಕು ಎಂಬುದರ ವಿಶ್ಲೇಷಣೆಯೋ ಹೀಗಿದೆ: ಈಗ ನಮಗೆ ಇದು ವಿಚಿತ್ರ ಅನ್ನಿಸಬಹುದು. —ಆಗ ಬೆಳಕಿನ ಬಗ್ಗೆ ಎರಡು ಸಿದ್ಧಾಂತಗಳಿದ್ದುವು. ಖ್ಯಾತ ವಿಜ್ಞಾನಿ ರೆನೆ ದ ಕಾರ್ಟೆಯದು ಕಾರ್ಟೀಸಿಯನ್ ಸಿದ್ಧಾಂತ ಹೀಗಿದೆ—"ಬೆಳಕು ಒಂದು ದ್ರವ. ಇದು ಸರ್ವಾಂತರ್ಯಾಮಿ. ಇದು ಹರಿಯುವಂತೆ ಮಾಡಲು ಪ್ರಚೋದನೆ ದೊರಕಿದಾಗ ವಸ್ತುಗಳು ನಮಗೆ ಕಾಣುತ್ತವೆ." ಖ್ಯಾತ ಭೌತ ವಿಜ್ಞಾನಿ ಐಸಾಕ್ ನ್ಯೂಟನ್‌ನ ಸಿದ್ಧಾಂತ ಇನ್ನೊಂದು—"ಬೆಳಕು ಎಂದರೆ ಸೂಕ್ಷ್ಮವಾದ ಕಣಗಳ ಪ್ರವಾಹ. ಯಾವುದೇ ವಸ್ತು ಕಾಣಬೇಕಾದರೆ ಅದರಿಂದ ಎಲ್ಲಾ ದಿಕ್ಕುಗಳಿಗೂ ಈ ಕಣ

ಗಳು ಧಾವಿಸುತ್ತಿರಬೇಕು." ಈ ಸಿದ್ಧಾಂತಗಳು ಇಂದು ನಮಗೆ ಅಸಮರ್ಪಕ ಎಂದು ತೋರಬಹುದು. ಆದರೆ ಅಲ್ಲಿಯವರೆಗೂ ಜನ ನಂಬಿಕೊಂಡು ಬಂದದ್ದೇನು?— ಬೆಳಕು ಎನ್ನುವುದು ನಮ್ಮ ಕಣ್ಣಿನಿಂದ ಹೊರಡುವ ಸೂಕ್ಷ್ಮ ಕಣಗಳ ಪ್ರವಾಹ— ಎಂದು! ಇದಂತೂ ಈಗ ಹಾಸ್ಯಾಸ್ಪದ ಎನಿಸುವುದಲ್ಲವೇ?

ಬೆಳಕಿನ ಗುಣಗಳ ಪರಿಚಯ ಮಾಡಿಕೊಡುವಾಗ ಶಾಖವೂ ಬೆಳಕಿನ ಮೂಲಕ್ಕೆ ಅತ್ಯಗತ್ಯ ಎಂಬ ತಿಳುವಳಿಕೆ ಮೂಡಿತ್ತು ಎಂಬುದು ಅರಿವಾಗುತ್ತದೆ. ವಿಲಿಯಮ್ ಹರ್ಷೆಲ್ ಎಂಬ ಖ್ಯಾತ ಖಗೋಳಜ್ಞ ನಡೆಸಿದ ಪ್ರಯೋಗವನ್ನು ನೆನೆಸಿಕೊಳ್ಳಬಹುದು. ಪ್ರಿಸ್ಮ್ ಅಥವಾ ಪಟ್ಟಕವನ್ನಿಟ್ಟು ಬಿಳಿ ಬಣ್ಣವನ್ನು ಏಳು ಬಣ್ಣಗಳಾಗಿ ವಿಭಜಿಸಿದನಂತರ ಒಂದೊಂದು ಬಣ್ಣದ ಬಳಿಯೂ ಉಷ್ಣತಾಮಾಪಿಯನ್ನಿಟ್ಟು ಯಾವಬಣ್ಣದ ಉಷ್ಣತೆ ಹೆಚ್ಚು ಎಂದಾತ ಅಳತೆಮಾಡಿದ್ದ. ಇದರಿಂದ ನೇರಿಳೆ ಬಣ್ಣದಾಚೆ ಉಷ್ಣತೆ ಕನಿಷ್ಠ. ಕೆಂಪು ಬಣ್ಣದಾಚೆ ಗರಿಷ್ಠ ಎಂದಾತ ತಿಳಿದುಕೊಂಡಿದ್ದ. ಬಣ್ಣಕ್ಕೂ ಉಷ್ಣತೆಗೂ ಗಂಟುಹಾಕಿದ. ಕುಲುಮೆಗಳನ್ನು ಬಳಸುತ್ತಿದ್ದವರು ಈ ವಿಷಯವನ್ನು ಅನುಭವದಿಂದ ತಿಳಿದುಕೊಂಡಿದ್ದರು.

ಹಾಗಾದರೆ ಜಿಜ್ಞಾಸೆ ಉಂಟಾಗಲು ಕಾರಣವೇನು?

ಖ್ಯಾತ ವಿಜ್ಞಾನಿ ರಾಬರ್ಟ್‌ಬಾಯ್ಲ್‌ನ ಜೀವನಚರಿತ್ರೆಯಲ್ಲಿ ಒಂದು ಪುಟದಲ್ಲಿ ಹೀಗಿದೆ—"೧೬೬೨ರ ಫೆಬ್ರವರಿ ೧೫ರಂದು ಸೇವಕನೊಬ್ಬ (ಬಾಯ್ಲ್‌ಗೆ) ಮಾಂಸದ ಒಂದು ತುಂಡನ್ನು ತಂದು ತೋರಿಸಿದ. ಅದು ಖಾದ್ಯಯೋಗ್ಯವಾಗಿಯೇನೋ ಇತ್ತು. ಕೆಟ್ಟಿರಲಿಲ್ಲ. ಆದರೆ ವಿಶೇಷವೆಂದರೆ, ಅದು ಹೊರಸೂಸುತ್ತಿದ್ದ ಬೆಳಕು. ಬಾಯ್ಲ್‌ಗೆ ಇದರ ಕಾರಣ ಹೊಳೆಯಲಿಲ್ಲ. ಬಹುಶಃ ವಾತಾವರಣದಲ್ಲಿ ಏನೋ ವಿಶೇಷ ವ್ಯತ್ಯಾಸ ಉಂಟಾಗಿರಬೇಕೆಂದು ಊಹಿಸಿದ ಆತ ವಾಯುಭಾರ, ಉಷ್ಣತೆ ಇವನ್ನೆಲ್ಲಾ ದಾಖಲು ಮಾಡಿಕೊಂಡ."

೧೬೪೧ರ ಈ ವರದಿಯನ್ನು ನೋಡಿ— "ಬಡ ಹೆಂಗಸೊಬ್ಬಳು ಒಂದು ಪೌಂಡ್ ಮಾಂಸವನ್ನು ಕೊಂಡಳು. ಮರುದಿನ ಉಪಯೋಗಿಸುವ ಉದ್ದೇಶವಿತ್ತು. ಆಕೆಗೆ ಅಡುಗೆಮನೆಯೇ ಮಲಗುವ ಮನೆಯಾಗಿತ್ತು. ರಾತ್ರಿ ದೀಪವಾರಿಸಿದಾಗ ಆಕೆ ಇಡೀ ಕೋಣೆಯಲ್ಲಿ ಪ್ರಕಾಶ ಹರಡಿರುವುದನ್ನು ಗಮನಿಸಿದಳು. ಬೆಳಕು ಮಾಂಸದಿಂದ ಬರುತ್ತಿತ್ತು. ಇದರಿಂದ ಅಚ್ಚರಿಗೊಂಡ ಆಕೆ ಆ ಮಾಂಸದ ತುಂಡನ್ನು ನಗರದ ಗವರ್ನರ್‌ಗೆ ತೋರಿಸಿದಳು. ಈ ವೈಚಿತ್ರ್ಯವನ್ನು ಇತರ ಎಲ್ಲಾ ಅಧಿಕಾರಿಗಳೂ ಗಮನಿಸಿ ಅಚ್ಚರಿಪಟ್ಟರು."

ಆಗಾಗ್ಗೆ ಇಂಥ ವರದಿಗಳು ಪ್ರಕಟವಾಗುತ್ತಲೇ ಇದ್ದುವು. ಹೆಚ್ಚಾಗಿ ಸ್ಮಶಾನದಲ್ಲಿ ಇಂಥ ಬೆಳಕು ಕಾಣಿಸಿಕೊಳ್ಳುತ್ತಿತ್ತು. ಭೂತಚೇಷ್ಟೆ ಎಂದೆಲ್ಲಾ ವದಂತಿಗಳು ಹಬ್ಬಿದುವು. "ದೀಪದ ಜಾಕ್", "ಬಣವೆ ಹೊತ್ತವಿಲ್" ಹೀಗೆಲ್ಲಾ ಅಡ್ಡ ಹೆಸರುಗಳು ಜನಪ್ರಿಯವಾದುವು. ಬೆಳಕಿನ ರಹಸ್ಯ ನಿಗೂಢವಾಗಿಯೇ ಉಳಿಯಿತು.

ಹೀಗೆ ಜನರನ್ನು ಚಕಿತಗೊಳಿಸುತ್ತಿದ್ದ ಬೆಳಕು ಮಾಂಸದ ತುಂಡಿಗೆ, ಶ್ಮಶಾನಕ್ಕೆ

ಮಾತ್ರ ಸೀಮಿತವಾಗಿರಲಿಲ್ಲ. ಕೆಲವೊಂದು ಸಸ್ಯಗಳೂ ಬೆಳಕು ಬೀರುವುದನ್ನು ಜನ ಗಮನಿಸಿದ್ದರು. ೧೭೦೪ ರಲ್ಲಿ ಹಡಗಿನಲ್ಲಿ ಯಾನಿಸುತ್ತಿದ್ದ ಫಾದರ್ ಚಾರ್ಲ್ಸ್ ಎಂಬಾತ "ಸಮುದ್ರವೂ ಬೆಳಕು ಬೀರುತ್ತದೆ. ಕಗ್ಗತ್ತಲ ರಾತ್ರಿಯಲ್ಲಿ ಹಡಗಿನ ಡೆಕ್ ಮೇಲೆ ನಿಂತು ಈ ಬೆಳಕಿನಿಂದ ಪುಸ್ತಕ ಓದುವುದು ನನಗೆ ಸಾಧ್ಯವಾಯಿತು" ಎಂದು ಬರೆದಿದ್ದಾನೆ. ಬೆಳಕುಬೀರುವ ಹುಳುಗಳೂ, ಹಾರುವ ಮಿಣುಕುಹುಳಗಳು ಎಲ್ಲರಿಗೂ ಪರಿಚಿತವೇ.

ಹೀಗೆ ವೈವಿಧ್ಯಮಯ ಬೆಳಕಿನ ಮೂಲಗಳು ಮುಖ್ಯವಾಗಿ ಶಾಖವಿಲ್ಲದವು ಇಂದು ವಿಶೇಷ ಅಧ್ಯಯನದ ವಸ್ತುಗಳಾಗಿವೆ. ಈ ಎಲ್ಲ ಮೂಲಗಳಲ್ಲಿ ಜೀವಜಗತ್ತಿನ ಅಂಶಗಳೇ ಮುಖ್ಯ ಪಾತ್ರಧಾರಿಗಳಾಗಿರುವುದನ್ನು ತಿಳಿದು ಇಂದು ಇವನ್ನು ಜೈವಿಕ ದೀಪ್ತಿ ಅಂದರೆ ಬಯೋಲ್ಯೂಮಿನಿಸೆನ್ಸ್ ಎಂದು ಕರೆದಿದ್ದಾರೆ.

ಈ ಬೆಳಕಿನ ಉದ್ದೇಶವೇನು ? ಇದು ಮುಂದಿನ ಪ್ರಶ್ನೆ.

ಸ್ಕ್ವಿಡ್ ಎಂಬ ಜಾತಿಯ ಮೀನು ತನ್ನ ಬಾಯಿಯೊಳಗೆ ಒಂದು ಗೂಡನ್ನಿರಿಸಿಕೊಂಡಿದೆ. ವಿಬ್ರಿಯಾ ಫಿಷೆರಿ ಎಂಬ ಬ್ಯಾಕ್ಟೀರಿಯಾಗಳನ್ನು ನುಂಗಿ ಇದು ಆ ಗೂಡಿನಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳುತ್ತದೆ. ಬೆಳಕು ಬೀರುವ ಈ ಬ್ಯಾಕ್ಟೀರಿಯಾಗಳನ್ನು "ಟಾರ್ಚ್"ನಂತೆ ಉಪಯೋಗಿಸಿಕೊಳ್ಳುತ್ತದೆ. ಸಮುದ್ರತಳಕ್ಕೆ—ಕಡಿಮೆ ಬೆಳಕಿರುವ ಸ್ಥಳಕ್ಕೆ—ಹೋಗಿ ಬಾಯಿ ತೆರೆದೊಡನೆ ಬೆಳಕು ಹೊರಗೆ ಚೆಲ್ಲುತ್ತದೆ. ಆಹಾರ ಕಣ್ಣಿಗೆ ಬೀಳುತ್ತದೆ. ಹೀಗೆ ಪದೇ ಪದೇ ಬಾಯಿ ತೆರೆದು ಮುಚ್ಚುತ್ತಿರುವುದರಿಂದ ಒಳಗಿರುವ ಬ್ಯಾಕ್ಟೀರಿಯಾಗಳಿಗೆ ಆಮ್ಲಜನಕ ದೊರೆಯುತ್ತದೆ. ಹೀಗೆ ಬಾಯಿಯೊಳಗೇ ಉಳಿಯುವ ಬ್ಯಾಕ್ಟೀರಿಯಾಗಳ ಮುಂದಿನಗತಿ ಏನು ? ಪ್ರಕೃತಿ ಅದಕ್ಕೂ ಒಂದು ಪರಿಹಾರ ಒದಗಿಸಿದೆ. ಹಗಲಿನಲ್ಲಿ ಬ್ಯಾಕ್ಟೀರಿಯಾಗಳ ಆವಶ್ಯಕತೆ ಹೆಚ್ಚಿಲ್ಲ. ಆಗ ಮೀನು ತನ್ನ ಈ ಬಂದಿಗಳನ್ನು ಬಿಡುಗಡೆಮಾಡುತ್ತದೆ. ಸಂಜೆಯವರೆಗೂ ಸ್ವಚ್ಛಂದವಾಗಿ ವಿಹರಿಸುವ ಅವನ್ನು ಕತ್ತಲಾದೊಡನೆ ಪುನಃ ಹಿಡಿದಿಟ್ಟುಕೊಳ್ಳುತ್ತದೆ.

ಇನ್ನು ಕೆಲವೊಂದು ಮೀನುಗಳು ಶತ್ರುಧಾಳಿಯನ್ನು ತಡೆಯಲು ಇದ್ದಕ್ಕಿದ್ದಂತೆ ಬೆಳಕು ಚಿಮ್ಮಿಸಿ ಅವನ್ನು ತಬ್ಬಿಬ್ಬು ಮಾಡುತ್ತವೆ. ತಾವು ಪರಾರಿಯಾಗುತ್ತವೆ. ಸಾಧಾರಣವಾಗಿ ಮಣ್ಣಿನಲ್ಲಿ ಕಾಣಸಿಗುವ ಎರೆಹುಳುಗಳೂ ವಿಶೇಷ ಸಂದರ್ಭಗಳಲ್ಲಿ ಬೆಳಕನ್ನು ಚಿಮ್ಮಿಸಬಲ್ಲುವೆಂದು ವಿಜ್ಞಾನಿಗಳು ಈಚೆಗೆ ಕಂಡುಕೊಂಡಿದ್ದಾರೆ.

ಸಮುದ್ರದಲ್ಲಿ ಬೆಳೆಯುವ ವಿಶೇಷ ರೀತಿಯ ಆಲ್ಗೆ ಎಂಬ ಸಸ್ಯ ರಾತ್ರಿಯಲ್ಲಿ ಬೆಳಗುತ್ತದೆ. ಇದರಿಂದಲೇ ಕತ್ತಲೆಯಲ್ಲೂ ಸುತ್ತಲಿನ ಪರಿಸರ ಮಂಕಾಗಿ ಕಾಣುತ್ತದೆ.

ಕತ್ತರಿಸಿ ಹಾಕಿದ ಮರದ ಬೊಡ್ಡೆಗಳು ಮತ್ತು ಉರುಳಿ ಬಿದ್ದು ಸಾಯುತ್ತಿರುವ ಮರಗಳ ಮೇಲೆ ಬೆಳೆಯುವ ಹನಿಫಂಗಸ್ ಎಂಬ ವಿಶೇಷ ಜಾತಿಯ ಅಣಬೆಯೂ ಬೆಳಕನ್ನು ಬೀರುತ್ತದೆ. ಎರಡನೆಯ ಪ್ರಪಂಚ

ಯುದ್ಧದ ಸಂದರ್ಭದಲ್ಲಿ ಹಳ್ಳ, ಗುಣಿಗಳಲ್ಲಿ ಅವಿತಿಟ್ಟುಕೊಂಡು ಓಡಾಡುತ್ತಿದ್ದ ಸೈನಿಕರು ಇವನ್ನು ಹೆಲ್ಮೆಟ್‌ಗೆ ಸಿಕ್ಕಿಸಿಕೊಂಡು ಓಡಾಡುತ್ತಿದ್ದರಂತೆ.

ಕೊಳೆಯುತ್ತಿರುವ ಮಾಂಸ ಮತ್ತು ಮೂಳೆಗಳಲ್ಲಿ ಬೆಳೆಯುವ ಬ್ಯಾಕ್ಟೀರಿಯಗಳು ಜೈವಿಕ ದೀಪ್ತಿಯಿಂದ ಬೆಳಗಬಲ್ಲವು. ಇದರಿಂದಲೇ ಕೊಳ್ಳಿದೆವ್ವ ಮುಂತಾದ ಕಲ್ಪನೆ ಮಾಡಿರುವುದು ಸಾಧ್ಯ.

ಈ ಸೃಷ್ಟಿ ವೈಚಿತ್ರ್ಯದ ರಹಸ್ಯವನ್ನು ಈಗತಾನೇ ಅರ್ಥಮಾಡಿಕೊಳ್ಳುವ ಪ್ರಯತ್ನ ಆರಂಭವಾಗಿದೆ. ಜೈವಿಕ ದೀಪ್ತಿ ಬೀರುವ ಬ್ಯಾಕ್ಟೀರಿಯಾಗಳು ಇಲಿಯಂತಹ ಪ್ರಾಣಿಯ ದೇಹ ಹೊಕ್ಕು ನಿಧಾನವಾಗಿ ಹರಡುವುದನ್ನು ಸುಲಭವಾಗಿ ಗಮನಿಸಬಹುದು. ಈಥಾಳಿಗೆ ಸಿಕ್ಕ ಇಲಿ ಸಾಯುವ ಮುನ್ನ ವಿಶೇಷವಾಗಿ ಬೆಳಗುತ್ತಾ ಸಾಯುತ್ತದೆ!

ಇದೇ ತತ್ತ್ವವನ್ನು ಉಪಯೋಗಿಸಿ ರೋಗ ನಿದಾನ ಅಂದರೆ ಶರೀರದೊಳಗಿನ ಗಂಟುಗಳನ್ನು, ಹುಣ್ಣುಗಳನ್ನು ಪತ್ತೆ ಮಾಡುವ ಪ್ರಯತ್ನ ನಡೆದಿದೆ. ರೋಗಗ್ರಸ್ತ ಇಲಿಗೆ ಈ ಬ್ಯಾಕ್ಟೀರಿಯಾಗಳನ್ನು ಚುಚ್ಚಿ, ಅದು ಹೊರಸೂಸುವ ಬೆಳಕಿನ ಸಹಾಯದಿಂದ ರೋಗದ ಉಲ್ಬಣತೆಯನ್ನು ಗುರುತಿಸುವ ಪ್ರಯತ್ನ ನಡೆದಿದೆ.

ಇತ್ತೀಚಿನ ತಂತ್ರವಿದ್ಯೆಯ ಆವಿಷ್ಕಾರವಾದ ಟ್ಯೂಬ್‌ಲೈಟ್‌ಗಳು, ಲೇಸರ್‌ಗಳು ಶಾಖವಿಲ್ಲದ ಬೆಳಕಿನ ಮೂಲಗಳೇ ಆದರೂ ಇಲ್ಲಿ ಅನ್ವಯವಾಗುವ ತತ್ತ್ವವೇ ಬೇರೆ. ಕ್ವಾಂಟಮ್ ಸಿದ್ಧಾಂತದ ಉದಾಹರಣೆಗಳಿವು.


ಈ ಎಲ್ಲ ವೈವಿಧ್ಯಮಯ ಜೈವಿಕ ದೀಪ್ತಿಯ ಆಕರಗಳನ್ನು ಗುರುತಿಸಿದ್ದು ಹೇಗೆ? ಇದಕ್ಕೆ ಅತ್ಯವಶ್ಯವಾಗಿ ಬೇಕಾದದ್ದು ಸೂಕ್ಷ್ಮದೃಷ್ಟಿ ಶಕ್ತಿ ಎಂಬುದೇನೋ ನಿಜ. ಹಾಗಾದರೆ ನಮ್ಮ ನಿಮ್ಮ ಕಣ್ಣಿಗೆ ಕಾಣುವುದಿಲ್ಲವೇ?

ಖಂಡಿತ ಕಾಣುತ್ತದೆ. ಆದರೆ ಕಾಣುವ ಪ್ರಯತ್ನ ಮಾಡಿದಲ್ಲಿ ಮಾತ್ರ. ರಾತ್ರಿ 'ಪವರ್‌ಕಟ್' ಆದೊಡನೆ ಮೋಂಬತ್ತಿ ಹಚ್ಚುವ ಮೊದಲು ಐದು ನಿಮಿಷ ಕಾದು ನೋಡಿ. ಕಗ್ಗತ್ತಲಿಗೆ ನಿಮ್ಮ ಕಣ್ಣು ಹೊಂದಿಕೊಂಡ ಮೇಲೆ, ಕಿಟಕಿಯಾಚೆ ಕಣ್ಣುಹಾಯಿಸಿ. ಜೈವಿಕ ದೀಪ್ತಿಯ ಈ ಆಕರಗಳು ನಿಮ್ಮ ಸುತ್ತಮುತ್ತಲಲ್ಲೇ ಇರಬಹುದು. ಏನೂ ಕಾಣಲಿಲ್ಲವೇ? ಅಸಂಖ್ಯ ನಕ್ಷತ್ರಗಳನ್ನು ನೋಡಿ ಆಗಸದಲ್ಲಿ ಇಷ್ಟೊಂದು ನಕ್ಷತ್ರಗಳಿದ್ದುವು ಎಂಬುದು ನಿಮ್ಮ ಗಮನಕ್ಕೆ ಬಂದಿತ್ತೇ?

ಕ್ರಮೇಣ ಮನೆಯೊಳಗಿನ ಗೋಡೆಗಳು ನಿಚ್ಚಳವಾಗಿ ಕಾಣತೊಡಗುತ್ತವೆ ಎಂಬುದು ನಿಮ್ಮ ಅನುಭವಕ್ಕೆ ಬರುತ್ತದೆ. ಹೆಪ್ಪು ಹಾಕಿರುವ ಹಾಲಿನ ಮುಚ್ಚಳ ತೆಗೆದು ನೋಡಿ ಅದರ ಕ್ಷೀಣವಾದ ಜೈವಿಕದೀಪ್ತಿ ಅದರ ಬಣ್ಣ ಬಿಳಿ ಎಂದು ಸ್ಪಷ್ಟಪಡಿಸುತ್ತದೆ. ನಿಮ್ಮ ದೃಷ್ಟಿಶಕ್ತಿಗೆ ನೀವೇ ಆಶ್ಚರ್ಯಪಡುತ್ತೀರಿ.

ಕತ್ತಲಾದೊಡನೆ ವಿದ್ಯುದ್ದೀಪದ ಮೊರೆ ಹೋಗುವ ಇಂದಿನ ನಗರವಾಸಿಗಳಿಗೆ ಕಣ್ಣಿನ ಈ ಅಸಾಧಾರಣ ಶಕ್ತಿಯ ಪರಿಚಯ ಪಡೆಯುವ ಅವಕಾಶವೇ ಇಲ್ಲದಂತಾಗಿದೆ.

ಹಾಗಾಗಿ ಅಮಾವಾಸ್ಯೆಯ ಕಗ್ಗತ್ತಲ ರಾತ್ರಿಯಲ್ಲೂ ನಿರ್ಭೀತಿಯಿಂದ ಕಾಡ ಹಾದಿ ತುಳಿಯುವ ರೈತರ ಆತ್ಮವಿಶ್ವಾಸ ಇದರಲ್ಲಿ ಮಾಯವಾಗುತ್ತಿದೆ. ಅಷ್ಟೇಅಲ್ಲ ದೂರದಲ್ಲಿ ಕಾಣುವ ಮಿಂಚು, ಮೋಡದ ಕಾರಣ ಚಂದ್ರ ಸೂರ್ಯರ ಸುತ್ತ ಕಾಣುವ ಪ್ರಭಾವಳಿ (ಗೂಡುಕಟ್ಟುವುದು) ಇವೂ ಕೂಡ ಕೇವಲ ಪಠ್ಯಪುಸ್ತಕಗಳಿಂದಲೇ ಕಲಿಯಬೇಕಾದ ಪರಿಸ್ಥಿತಿ ಒದಗಿಬಂದಿದೆ. ಇದಕ್ಕೆ ಪರಿಹಾರ ಏನು?



ತಾಯೆ ಬಾರ ಮೊಗವ ತೋರ, ಕನ್ನಡಿಗರ ಮಾತೆಯೆ।
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ!
    ನಮ್ಮ ತಪ್ಪನೆನಿತೊ ತಾಳ್ವೆ,
    ಅಕ್ಕರೆಯಿಂದೆಮ್ಮನಾಳ್ವೆ;
    ನೀನೇ ಕಣಾ ನಮ್ಮ ಬಾಳ್ವೆ,
    ನಿನ್ನ ಮರೆಯಲೆಮ್ಮವು—
ತನು ಕನ್ನಡ, ಮನ ಕನ್ನಡ, ಧನ ಕನ್ನಡವೆಮ್ಮವು.

—ಎಂ. ಗೋವಿಂದ ಪೈ

ಕೊಲೆಗಾರನಿಗೆ ಹಾಕಿದ ಗಾಳ

ಭಾರತಿಭಟ್
೫೩೪, ೧೫ ನೇ ಮೈನ್
೫ ನೇ ಕ್ರಾಸ್, ಸರಸ್ವತೀಪುರ
ಮೈಸೂರು

ಒಬ್ಬ ತಾಯಿಗೆ ಬರೀ ತನ್ನ ಮಾತುಗಳ ಮೂಲಕ ಮತ್ತು ತನಗಾದ ನೋವಿನ ಮೂಲಕ ತನ್ನ ಮಗನ ಕೊಲೆಗಾರನನ್ನು ಅಡಗಿ ಕುಳಿತಲ್ಲಿಂದ ಹೊರಗೆ ಬರುವಂತೆ ಮಾಡಲು ಸಾಧ್ಯವೆ?

ಅಮೆರಿಕಾದ ಒಹಾಯೋದ ಬಸ್ನಾಕ್ ಎಂಬ ಪಟ್ಟಣದಲ್ಲಿ ಆ ದಿನ ಶನಿವಾರ ಬೆಳಗ್ಗಿನ ಜಾವ ಮಳೆ ಹನಿಯುತ್ತಿತ್ತು. ಕಬ್ಬಿಣದ ಕೆಲಸಗಾರ ೨೧ ವರ್ಷದ ಜೆಮಿ ಪಾಕ್ಸನ್ ಬಿಳಿ ಮರದ ಹಲಗೆಗಳಿಂದ ಕಟ್ಟಿದ ತನ್ನ ಮನೆಯಲ್ಲಿ ಒರಗಿ ಕುಳಿತು ನಿಧಾನವಾಗಿ ಕಾಫಿ ಕುಡಿದು, ಡೋನಟ್ಸ್ ತಿಂದು ಮುಗಿಸಿದ. ಅನಂತರ ೭ ಗಂಟೆಗೆ ಸ್ವಲ್ಪ ಸಮಯವಿರುವಾಗ ತನ್ನ ಬಿಲ್ಲು ಬಾಣಗಳನ್ನು ಹಿಡಿದುಕೊಂಡು ಜಿಂಕೆಯನ್ನು ಬೇಟೆಯಾಡಲು ಹೊರಟ.

ಜೆಮಿ ೧೧ ಗಂಟೆಗೆ ಹಿಂದಿರುಗಿ ಬರಬಹುದೆಂದು ಆವನ ತಾಯಿ ೪೯ ವರ್ಷದ ಜೀನ್ ದಾರಿ ನೋಡುತ್ತಿದ್ದಳು. ೨-೪೦ಕ್ಕೆ ಅಂಗಳದಲ್ಲಿ ಪೊಲೀಸರ ಕಾರು ಬಂದು ನಿಂತದ್ದು ಆಕೆಗೆ ಕಾಣಿಸಿತು. ಅವಳು ಓಡುತ್ತಾ ಹೊರಗೆ ಬಂದಳು. ಅಲ್ಲಿ ಅವಳ ಪತಿ ಆಧಾರಕ್ಕಾಗಿ ಲೈಟು ಕಂಬವನ್ನು ಹಿಡಿದುಕೊಂಡು ನಿಂತಿದ್ದ. ಅವನನ್ನು ನೋಡುತ್ತಲೇ ಅವಳ ಮನಸ್ಸು ತಳಮಳಗೊಂಡಿತು. "ನನ್ನ ಹತ್ತಿರ ಏನೂ ಹೇಳಬೇಡ, ನಮ್ಮ ಜಿಮ್ಮಿ ಸತ್ತಿಲ್ಲ!" ಎಂದಾಕೆ ಕಿರುಚಿದಳು.

ಎದೆಗೆ ಮತ್ತು ಬೆನ್ನಿಗೆ ಕೋವಿಯ ಗುಂಡು ತಾಗಿ ಸತ್ತ ಅವಳ ಮಗನ ಶವ ಅವತ್ತು ಎಂದರೆ ೧೯೯೦ ನವಂಬರ ೧೪ನೇ ತಾರೀಖಿನಂದು ಗುಡ್ಡದ ಬದಿಯಲ್ಲಿ ಕಾಣಸಿಕ್ಕಿತ್ತು. ಯಾರೋ ಅವನನ್ನು ಕೊಲೆ ಮಾಡಿದ್ದರು. ಪೊಲೀಸರು ಸಂಶಯವಿದ್ದವರನ್ನೆಲ್ಲಾ ಪ್ರಶ್ನಿಸಿ ನೋಡಿದರು. ಇನ್ನಿತರಸುಳಿವುಗಳನ್ನೂ ಕೂಡ ಕೂಲಂಕಷವಾಗಿ ಪರೀಕ್ಷಿಸಿದರು. ಆದರೆ ಕೊಲೆಗಾರ ಯಾರೆಂದು ಕಂಡುಹಿಡಿಯಲು ಅವರಿಗೆ ಸಾಧ್ಯವಾಗಲಿಲ್ಲ. ಅಪರಿಚಿತರು ಯಾರೋ

ಮೂಲ : ೧೯೯೫ರ ಸೆಪ್ಟೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಸ್ಟೀಫನ್ ಮಿಕಾಡ್‌ರ "ಟು ಬೈಟ್ ಅ ಕಿಲ್ಲರ್" ಎಂಬ ಲೇಖನ.

ಆತನನ್ನು ಕೊಲೆಮಾಡಿರಬೇಕೆಂಬ ನಿರ್ಧಾರಕ್ಕೆ ಅವರು ಬಗಬೇಕಾಯಿತು.

ಕತ್ತಲಿನ ದಿನಗಳು

ಜೆಮಿಗಾಗಿ ಗೋಳಾಡಿದರೆ ಸಾಲದು ಎಂದು ಜೀನ್ ಪಾರ್ಕ್ಸನ್ ನಿರ್ಧರಿಸಿದಳು. ಅವನನ್ನು ಯಾರು ಯಾತಕ್ಕಾಗಿ ಕೊಂದಿದ್ದಾರೆ ಎಂಬುದನ್ನು ತಿಳಿಯಬೇಕು ಮತ್ತು ಅಡಗಿ ಕುಳಿತ ಕೊಲೆಗಾರನನ್ನು ತನ್ನ ಮಾತುಗಳ ಮೂಲಕ ಮತ್ತು ವೇದನೆಯ ಮೂಲಕ ಹೊರಗೆ ಬರುವಂತೆ ಮಾಡಬೇಕು ಎಂದು ಅವಳು ನಿಶ್ಚಯಿಸಿದಳು. ಇದಕ್ಕಾಗಿ ದಿನ ಪತ್ರಿಕೆಯಲ್ಲಿ ಓದುಗರ ಪತ್ರಗಳು ಎಂಬ ವಿಭಾಗಕ್ಕೆ ಪತ್ರಗಳನ್ನು ಬರೆದು ಕಳುಹಿಸುವುದೇ ಅವಳ ಆಯುಧವಾಯಿತು.

ಕೊಲೆಯಾದ ಕೆಲವೇ ದಿನಗಳ ಅನಂತರ ಅವಳು ದಿನಪತ್ರಿಕೆಗೆ ಈ ರೀತಿ ಬರೆದಳು: "ನನ್ನ ಮಗ ಜೆಮಿಯ ಕೊಲೆಗಾರನಿ(ರಿ)ಗೆ: ದ್ವೇಷದಿಂದ ಕೂಡಿದ ಶಬ್ದದಲ್ಲಿ ಬರೆದರೆ ನಿನಗೆ ಇದನ್ನು ಓದಲು ಸುಲಭವಾಗಬಹುದೇ? ಆದರೆ ನನಗೆ ಹಾಗೆ ಬರೆಯಲು ಸಾಧ್ಯವಾಗದು. ಯಾಕೆಂದರೆ ನನಗೆ ನಿನ್ನ ಮೇಲೆ ದ್ವೇಷವಿಲ್ಲ. ಮಗನನ್ನು ಕಳೆದುಕೊಂಡುದರಿಂದಾಗಿ ನನಗೆ ತಿಳಿಸಲು ಅಸಾಧ್ಯವಾದ ದುಃಖವಾಗಿದೆ. ನೀನು ನವೆಂಬರ್ ೧೦ನೇ ತಾರೀಖಿಗೆ ನನ್ನ ಜೀವನದ ಒಂದು ಬೆಳಕನ್ನು ತೆಗೆದು ನನ್ನನ್ನು ತುಂಬಾ ದಿವಸ ಕತ್ತಲಲ್ಲಿರುವಂತೆ ಮಾಡಿರುವೆ".

"ನಿನ್ನ ಮರಣವನ್ನು ನೀನು ಕಲ್ಪನೆ ಮಾಡಿರುವೆಯಾ ?" ಇನ್ನೊಂದು ಪತ್ರದಲ್ಲಿ ಆಕೆ ಕೇಳಿದಳು. "ಮಾಡಿದ ತಪ್ಪಿಗಾಗಿ ದೇವರಲ್ಲಿ ಕ್ಷಮಾಪಣೆ ಕೇಳದಿದ್ದಲ್ಲಿ ನೀನು ನರಕದ ಬೆಂಕಿ ಮತ್ತು ಸಿಟ್ಟನ್ನು ಎದುರಿಸಬೇಕಾಗಬಹುದು. ನೀನು ಸಿಕ್ಕಿ ಬಿದ್ದಾಗ ನಾನು ನಿನ್ನ ಕುಟುಂಬದವರಿಗಾಗಿ ಮರುಕಪಡುತ್ತೇನೆ. ನೀನು ಮಾಡಿದ ತಪ್ಪಿನ ಭಾರವನ್ನು ನಿನ್ನ ಕುಟುಂಬದವರು ಜೀವನವಿಡೀ ಹೊರಬೇಕಾದೀತು"

ಜೆಮಿಯನ್ನು ಕೊಂದವನು ಸ್ವಲ್ಪವೂ ಕನಿಕರವಿಲ್ಲದವನಾಗಿರಬಹುದು ಇಲ್ಲವೇ ಬುದ್ಧಿ ಸರಿಯಿಲ್ಲದವನಾಗಿರಬಹುದೆಂದು ಪೊಲಿಸರು ಜೀನ್‌ಗೆ ಹೇಳಿದ್ದರು. ಹಾಗಿದ್ದರು ಆಕೆ ತನಗಾದ ಅತೀವ ವೇದನೆಯನ್ನು ತನ್ನ ಮನಸ್ಸಿನಾಳದಿಂದ ಹೊರತೆಗೆದು ಅವನಿಗೆ ತಿಳಿಸಬೇಕೆಂದು ನಿರ್ಧರಿಸಿದ್ದಳು. ಹಾಗೆ ಮಾಡುವುದರ ಮೂಲಕ ಅವನು ಅಡಗಿರುವಲ್ಲಿಂದ ಹೊರಬರುವಂತೆ ಮಾಡಿ ಅನಂತರ ಅವನನ್ನು ನ್ಯಾಯಾಲಯದಲ್ಲಿ ಎದುರಿಸಬೇಕೆಂಬುದು ಆಕೆಯ ಉಪಾಯವಾಗಿತ್ತು.

ಅವಳ ಶೋಕಪೂರ್ಣ ಪತ್ರಗಳಿಗೆ ಯಾವ ಉತ್ತರವೂ ಬರಲಿಲ್ಲ. ಆದರೆ ಆಕೆ ತನ್ನ ಪ್ರಯತ್ನವನ್ನು ಬಿಡಲಿಲ್ಲ. ಅಕ್ಟೋಬರ ೧೯೯೧ರಲ್ಲಿ ಅವಳು ಹೀಗೆ ಬರೆದಳು: "ನನ್ನ ಮಗನನ್ನು ನೀನು ಕೊಂದು ಒಂದು ವರ್ಷ ಆಗುತ್ತಾ ಇದೆ. ಈ ೧೧ ತಿಂಗಳುಗಳಲ್ಲಿ ನಿನ್ನ ಜೀವನಕ್ರಮವೂ ಸ್ವಲ್ಪವೂ ಬದಲಾಗಲಿಲ್ಲವೆ? ನವೆಂಬರ್ ೧೦ರಿಂದ ನನ್ನ ಕುಟುಂಬದವರು ಬದುಕಿದ್ದರೂ ಬದುಕಿದಂತಿಲ್ಲ. ಹೇಗೋ ದಿನ ಕಳೆಯುತ್ತಿದ್ದೇವೆ. ಹಗಲು ಮತ್ತು ರಾತ್ರಿ ಒಂದೇ ವಿಷಯ

ನಮ್ಮನ್ನು ಕಾಡುತ್ತಿದೆ. ಜೆಮಿಯನ್ನು ಯಾಕೆ ಕೊಂದರು? ಅವನು ಏನು ತಪ್ಪು ಮಾಡಿದ್ದ?"

ಪತ್ರಕ್ಕೆ ಉತ್ತರ

ಕೊನೆಗೂ ಒಂದು ದಿವಸ ಕೊಲೆಗಾರನಿಂದ ಆಕೆಯ ಪತ್ರಗಳಿಗೆ ಉತ್ತರ ಬಂತು ೨ ಪುಟದ ಆ ಪತ್ರವನ್ನು ಆತ ಟೈಪ್ ಮಾಡಿ ಆಕೆಗೂ, ದಿನಪತ್ರಿಕೆಯ ಸಂಪಾದಕನಿಗೂ ಮತ್ತು ಪೋಲೀಸರಿಗೂ ಕಳಿಸಿದ್ದ. ಅದರಲ್ಲಿ ಈ ರೀತಿ ಬರೆದಿತ್ತು. "ನಾನು ಜೆಮಿಯ ಕೊಲೆಗಾರ. ನನಗೆ ಆತನ ಪರಿಚಯವಿರಲಿಲ್ಲ. ಅದಕ್ಕೆ ಮೊದಲು ನಾನು ಆತನನ್ನು ಒಮ್ಮೆಯೂ ನೋಡಿರಲಿಲ್ಲ. ಇದಲ್ಲದೆ ಆ ದಿನ ಶನಿವಾರ ಆತ ನನ್ನೊಡನೆ ಒಂದು ಮಾತನ್ನೂ ಆಡಿರಲಿಲ್ಲ. ತಡೆಯಲಾರದಂತಹ ಒಂದು ಮಾನಸಿಕ ಒತ್ತಡದಿಂದಾಗಿ ನಾನು ಅವನನ್ನು ಕೊಂದೆ. ಆ ದಿನ ನಾನು ಮನೆಯಿಂದ ಹೊರ ಹೊರಟಾಗಲೇ ಆವತ್ತು ನನ್ನ ಕೈಯಲ್ಲಿ ಯಾರಾದರೂ ಸಾಯಲಿರುವರೆಂದು ನನಗೆ ತಿಳಿದಿತ್ತು. ಆದರೆ ಅದು ಯಾರು ಅಥವಾ ಯಾವಾಗ ಎಂದು ನನಗೆ ಗೊತ್ತಿರಲಿಲ್ಲ.

"ಒಂದಾದ ಮೇಲೆ ಒಂದರಂತೆ ಮೂರು ನಾಲ್ಕು ಕೊಲೆಗಳನ್ನು ಮಾಡಿರುವೆನಾದರೂ ನಾನು ನಿಮ್ಮಂತೆ ಒಬ್ಬ ಸಾಧಾರಣ ವ್ಯಕ್ತಿ. ನಿಮ್ಮ ಹಾಗೆಯೇ ನನಗೆ ಹೆಂಡತಿ ಮಕ್ಕಳಿದ್ದಾರೆ, ಒಂದು ಸಾಧಾರಣವಾದ ನೌಕರಿಯೂ ಇದೆ. ಒಮ್ಮೊಮ್ಮೆ ಇದ್ದಕ್ಕಿದ್ದಂತೆ ನಾನು ಇಂತಹ ಕ್ರೂರ ಕೊಲೆಗಾರನಾಗಿ ಬಿಡುತ್ತೇನೆ. ಅಂತಹ ಸಂದರ್ಭದಲ್ಲಿ ಜೆಮಿಯಂತಹ ಒಬ್ಬ ವ್ಯಕ್ತಿಯ ಮೇಲೆ ಗುಂಡುಹಾರಿಸುವುದೂ ಒಂದು ಖಾಲಿ ಬಾಟಲಿಯ ಮೇಲೆ ಗುಂಡು ಹಾರಿಸುವುದೂ ಒಂದೇ ಎಂದು ನನಗನಿಸುತ್ತದೆ.

"ಆ ದಿನ ನಾನು ಸ್ವಲ್ಪ ಜಾಸ್ತಿ ಕುಡಿದಿದ್ದೆ ಮತ್ತು ನನ್ನ ತಲೆಯೊಳಗೆ ಒಂದು ಸ್ವರ "ಮಾಡು, ಮಾಡು" ಎನ್ನುತ್ತಿತ್ತು. ಜೆಮಿ ಕಾರನ್ನು ನಿಲ್ಲಿಸಿದಾಗ ನಾನು ನನ್ನ ಕಾರನ್ನು ಅದರ ಹಿಂದೆಯೇ ನಿಲ್ಲಿಸಿದೆ. ಅವನು ಕಾರಿನಿಂದ ಕೆಳಗಿಳಿದು ನನ್ನ ಎದುರಿನಲ್ಲೇ ಬಂದ. ಆತ ದೂರ ಯಾವುದನ್ನೊ ದಿಟ್ಟಿಸಿ ನೋಡುತ್ತಿದ್ದ. ನಾನು ಹೆಗಲ ಮೇಲಿದ್ದ ಬಂದೂಕನ್ನು ತೆಗೆದು ಅವನಿಗೆ ಗುರಿಯಿಟ್ಟು ಹೊಡೆದೆ. ಆ ಗುಂಡು ಅವನ ಎದೆಯ ಬಲಬದಿಗೆ ಹೊಡೆಯಿತು. ಕೂಡಲೇ ಅವನು ನರಳುತ್ತಾ ಕೆಳಗೆ ಬಿದ್ದ. ಅವನು ಸಾಯಲೇಬೇಕೆಂದು ಇನ್ನೊಂದು ಗುಂಡು ಹೊಡೆದೆ. ಅದು ಅವನ ಮೊಣಕಾಲಿಗೆ ತಗುಲಿತು. ಅವನು ತಲೆಯನ್ನು ಮೇಲಕ್ಕೆ ಎತ್ತಿ ಪುನಃ ನರಳಿದ. ನಾನು ಹೊಡೆದ ಮೂರನೆಯ ಗುಂಡು ಅವನ ಬೆನ್ನಿನೊಳಕ್ಕೆ ಹೋಯಿತು. ಅನಂತರ ಅವನು ಅಲುಗಾಡಲಿಲ್ಲ."

ಜೀನ್‌ಗೆ ಈ ಪತ್ರದಿಂದ ಕೊಲೆಗಾರ ತನ್ನ ಪರಿಚಯದವನಲ್ಲ ಎಂಬ ವಿಷಯ ಗೊತ್ತಾಯಿತು. ಆದರೆ ಆಕೆಗೆ ಇನ್ನೂ ಕೆಲಸ ಬೇಕಾದಷ್ಟಿತ್ತು. ತಾನು ಪ್ರಯತ್ನಿಸಿದರೆ ಆತ ಸೆರೆ ಸಿಕ್ಕುವಂತೆ ಮಾಡಲು ಸಾಧ್ಯ ಎಂಬ ನಂಬಿಕೆ ಅವಳಲ್ಲೀಗ ಮೂಡಿತ್ತು. ತನ್ನ ಕುಟುಂಬಕ್ಕೆ ಮಾತ್ರವಲ್ಲದೆ ಬೇರೆ ಕೆಲವು ಕುಟುಂಬಗಳಿಗೆ ಆತ ಎಂತಹ ನೋವನ್ನು ತಂದಿರುವನೆಂಬುದನ್ನು ಆತನಿಗೆ ತಿಳಿಸಿ ಹೇಳಬೇಕಾಗಿತ್ತು,

ಭೀಕರ ವಿಧಾನ

ಈ ಪತ್ರದಿಂದಾಗಿ ಮೊತ್ತಮೊದಲ ಬಾರಿಗೆ ತವರೂರಲ್ಲಿ ನಡೆಯುತ್ತಿದ್ದ ಸರಣಿ ಕೊಲೆಯ ವಿಷಯ ಪೋಲಿಸರ ಗಮನಕ್ಕೆ ಬಂತು. ೧೪ನೇ ಮಾರ್ಚ್ ೧೯೭೨ರಂದು ೪೯ ವರ್ಷದ ಕ್ಲಾಡ್ ಹಾಕಿನ್ಸ್ ಎಂಬಾತ ಅಣೆಕಟ್ಟಿನ ಪಕ್ಕ ಮೀನು ಹಿಡಿಯುತ್ತಿದ್ದಾಗ ಕೊಲೆಯಾದ. ಅವನ ಕೊಲೆ ಇದಕ್ಕೆ ಹಿಂದೆ ನಡೆದ ಜೆಮಿಯ ಕೊಲೆಯ ಹಾಗೆಯೇ ಇತ್ತು. ಅದಲ್ಲದೆ ಇದಕ್ಕೆ ಮೊದಲು ಒಹಾಯೋದಲ್ಲಿ ಬೇರೆ ನಾಲ್ಕು ಕೊಲೆಗಳೂ ನಡೆದಿದ್ದು ಇನ್ನೂ ಪತ್ತೆಯಾಗದೆ ಉಳಿದಿದ್ದುವು.

ಮೊದಲನೆಯದು ೧೯೭೪, ಏಪ್ರಿಲ್ ೧ರಂದು ಸಂಭವಿಸಿತ್ತು. ೩೫ ವರ್ಷ ಪ್ರಾಯದ ಟ್ರಕ್ ಡ್ರೈವರ್ ಡೊನಾಲ್ಡ್ ವೆಲ್ಲಿಂಗ್ ಎಂಬಾತ ರಸ್ತೆಯಲ್ಲಿ ಓಡುತ್ತಾ ಹೋಗುತ್ತಿದ್ದಾಗ ಎದೆಗೆ ಗುಂಡು ಬಿದ್ದು ಸತ್ತಿದ್ದ. ಜೆಮಿಯ ಕೊಲೆ ೧೯ ತಿಂಗಳ ಅನಂತರ ನಡೆದಿತ್ತು. ಬರೇ ೧೮ ದಿನಗಳ ನಂತರ ೩೦ ವರ್ಷದ ಕೆನೆಸ್‌ಲೋರಿಂಗ್ ಎಂಬಾತ ಜಿಂಕೆಗಳನ್ನು ಬೇಟೆಯಾಡಲು ಹೋದವನು ಮುಖಕ್ಕೆ ಗುಂಡು ತಗಲಿ ಸತ್ತಿದ್ದ. ಹಾಕಿನ್ಸ್‌ನ ಕೊಲೆ ನಾಲ್ಕನೆಯದಾಗಿತ್ತು.

ಪುನಃ ೧೯೭೨ ನೇ ಏಪ್ರಿಲ್ ೫ ರಂದು ಉಕ್ಕಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಗೇರಿ ಬ್ರೇಡ್ಲೀ ಎಂಬಾತ ಕೊಳದಲ್ಲಿ ಮೀನು ಹಿಡಿಯುತ್ತಿದ್ದಾಗ ಬೆನ್ನಿಗೆ ಗುಂಡು ತಗಲಿ ಸತ್ತ. ಪೋಲಿಸರು ಈ ಎಲ್ಲಾ ಕೊಲೆಗಳಿಗೆ ಸಂಬಂಧಿಸಿದ ವರದಿಗಳನ್ನು ಮತ್ತು ಜೆಮಿಯ ತಾಯಿಗೆ ಆತನ ಕೊಲೆಗಾರನು ಬರೆದ ಪತ್ರವನ್ನೂ ಒಟ್ಟು ಸೇರಿಸಿ ಪತ್ತೆಗೆ ತೊಡಗಿದರು.

ಈ ಎಲ್ಲಾ ಮೂಲಗಳ ಸಹಾಯದಿಂದ ಪೋಲೀಸರಿಗೆ ಕೊಲೆಗಾರನು ಎಂತಹವನಿರಬಹುದೆಂಬುದನ್ನು ನಿರ್ಧರಿಸಲು ಸಾಧ್ಯವಾಯಿತು. ಆತ ಬಿಳಿಯ, ೩೦ ವರ್ಷದಿಂದ ಮೇಲ್ಪಟ್ಟವನಿರಬೇಕು ಮತ್ತು ಕೋವಿಯಲ್ಲಿ ಆಸಕ್ತನಾಗಿರಬೇಕು. ಪ್ರಾಣಿಗಳಿಗೆ ಹಿಂಸೆ ಕೊಡುವವನಿರಬಹುದು. ಅವನ ಜೀವನದಲ್ಲಾದ ಯಾವುದೋ ಒಂದು ಅನುಭವ ಅವನನ್ನು ಈ ರೀತಿ ಇದ್ದಕ್ಕಿದ್ದಂತೆ ಹಿಂಸೆಯಲ್ಲಿ ತೊಡಗುವಂತೆ ಮಾಡುತ್ತಿರಬಹುದು ಎಂಬ ನಿರ್ಧಾರಕ್ಕೆ ಅವರು ಬಂದರು. ಆತನು ಜೇನ್‌ಗೆ ಬರೆದ ಪತ್ರದಿಂದ ಈ ವಿಷಯ ಇನ್ನಷ್ಟು ಸ್ಪಷ್ಟವಾಯಿತು.

೧೯೭೨ರ ಬೇಸಿಗೆಯಲ್ಲಿ ಪೋಲೀಸರು ಒಟ್ಟು ನೂರು ಮಂದಿಯನ್ನು ಸಂಶಯದ ಮೇಲೆ ಪರೀಕ್ಷೆಗೆ ಗುರಿಪಡಿಸಿದರು. ಆದರೆ ಅವರಲ್ಲಿ ಒಬ್ಬನೂ ಕೊಲೆಗಾರನಿರಬಹುದೆಂದು ಅವರಿಗೆ ಅನಿಸಲಿಲ್ಲ. ಇದೇ ಸಮಯದಲ್ಲಿ ಜೇನ್ ಪಾರ್ಕ್ಸನ್ ಕೂಡಾ ತನ್ನ ಕೆಲಸವನ್ನು ಮುಂದುವರಿಸಿದ್ದಳು. ಜುಲೈ ೩೦ ರಂದು ಜೆಮಿಯ ಹುಟ್ಟಿದ ದಿವಸವಾಗಿತ್ತು. ಆವತ್ತು ಆಕೆ ಕೊಲೆಗಾರನಿಗೆ ಇನ್ನೊಂದು ಪತ್ರವನ್ನು ಬರೆದು ಅದರಲ್ಲಿ ತಾನು ತನ್ನ ಮಗನ ಹುಟ್ಟುಹಬ್ಬಕ್ಕಾಗಿ ತಯಾರಿಸಿದ ಕೇಕ್ ಹಾಗೆಯೇ ಉಳಿದಿದೆಯೆಂಬುದನ್ನು ತಿಳಿಸಿದಳು. "ನಿನ್ನ ಮನೆಯಲ್ಲಿ ಯಾರದಾದರೂ ಹುಟ್ಟುಹಬ್ಬ ಆಚರಿಸುವಿಯಾದರೆ ಆಗ ನಿನಗೆ ನಿಸ್ಸಂದಾಗಿ ನನ್ನ ಮನೆಯ ಮೇಜಿನ ಮೇಲಿರಿಸಿದ ಕೇಕ್

ಹಾಗೆಯೇ ಉಳಿದಿದೆಯೆಂಬುದು ನೆನಪಾಗಲಿ" ಎಂದೂ ಕೂಡ ಆಕೆ ಅದರಲ್ಲಿ ಬರೆದಿದ್ದಳು.

ಆಗಸ್ಟ್ ತಿಂಗಳಲ್ಲಿ ಪೊಲೀಸರು ಈ ಸರಣಿ ಕೊಲೆಗಾರನ ವಿಷಯವಾಗಿ ಪತ್ರಿಕೆಗಳಲ್ಲಿ ಒಂದು ಹೇಳಿಕೆ ಕೊಟ್ಟರು. ಆತನ ವಿಷಯವಾಗಿ ತಮಗೆ ಗೊತ್ತಿರುವ ವಿಷಯಗಳನ್ನೆಲ್ಲ ತಿಳಿಸಿ, ಜಾಸ್ತಿ ಮಾಹಿತಿ ಯಾರಿಗಾದರೂ ಗೊತ್ತಿದ್ದರೆ ತಿಳಿಸಬೇಕೆಂದು ಕರೆ ಕೊಟ್ಟರು.

ಹಳೇ ಸಹಪಾಠಿಯಿಂದ ಸಹಾಯ

ಪತ್ರಿಕೆಯಲ್ಲಿ ಬಂದ ಈ ಲೇಖನವನ್ನು ಓದಿ ೪೩ ವರ್ಷದ ರಿಚಾರ್ಡ್ ಫ್ರೈ ಎಂಬಾತನಿಗೆ ತನ್ನ ಹಳೇ ಸಹಪಾಠಿ ಟ್ರೋವರ್ ಡಿಲ್ಲನ್ ಎಂಬಾತನ ನೆನಪಾಯಿತು. ಆತ ಜೆಮಿ ಕೊಲೆಯಾದ ಜಾಗದಿಂದ ೧೨೦ ಕಿಲೋಮೀಟರ್ ದೂರ ತನ್ನ ಮಡದಿ ಮತ್ತು ಮಕ್ಕಳೊಂದಿಗೆ ವಾಸಿಸುತ್ತಿದ್ದ. ಇಪ್ಪತ್ತು ವರ್ಷಗಳ ಹಿಂದೆ ಆತ ಬಿಯರ್ ಕುಡಿಯುತ್ತ ಮಾರ್ಗದಲ್ಲಿ ಹೋಗುವಾಗ ಮಾರ್ಗಸೂಚಕ ಫಲಕಗಳ ಮೇಲೆ ಗುಂಡು ಹಾರಿಸುತ್ತಿದ್ದ. ಸಾಕು ಪ್ರಾಣಿಗಳು ಯಾವುದಾದರೂ ಕಾಣಸಿಕ್ಕಿದರೆ ಅವುಗಳ ಮೇಲೂ ಗುಂಡು ಹಾರಿಸುತ್ತಿದ್ದ ಮತ್ತು ಇನ್ನೂ ಏನೇನೋ ಕೆಟ್ಟ ಕೆಲಸಗಳನ್ನು ಮಾಡುತ್ತಿದ್ದ.

ಇದಲ್ಲದೆ ಸರಣಿ ಕೊಲೆಗಳ ವಿಷಯವನ್ನೂ ಕೂಡ ಆತ ಫ್ರೈಯೊಂದಿಗೆ ಚರ್ಚಿಸುತ್ತಿದ್ದ. ಒಮ್ಮೆ ಇದ್ದಕ್ಕಿದ್ದಂತೆ "ನಾನು ಯಾರನ್ನಾದರೂ ಕೊಂದಿರಬಹುದೆಂದು ನಿನಗೆ ಅನಿಸುತ್ತದೆಯೇ ?" ಎಂದು ಕೇಳಿದ್ದ. ಗಾಬರಿಯಿಂದ ಫ್ರೈ "ಇರಲಾರದು" ಎಂದಿದ್ದ. ಅದಕ್ಕೆ ಡಿಲ್ಲನ್ "ನಿನಗೆ ನನ್ನ ವಿಷಯ ಏನೂ ತಿಳಿಯದು" ಎಂದಿದ್ದ.

ಫ್ರೈ ಈ ವಿಷಯಗಳನ್ನೆಲ್ಲ ಪೊಲೀಸರಿಗೆ ತಿಳಿಸಿದ. ಆ ಸಮಯದಲ್ಲಿ ಡಿಲ್ಲನ್ ನೀರು ಸರಬರಾಜು ಮಾಡುವ ಒಂದು ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದ. ಒಡನೆಯೇ ಪೊಲೀಸರು ಆತನನ್ನು ಕಾನೂನು ಬಾಹಿರವಾಗಿ ಬಂದೂಕನ್ನು ಇರಿಸಿಕೊಂಡಿರುವನೆಂಬ ಅಪವಾದದ ಮೇಲೆ ಬಂಧಿಸಿದರು.

ಈ ಸಮಯದಲ್ಲಿ ಡಿಲ್ಲನ್‌ನ ಮನೆ, ವಾಹನ ಮತ್ತು ಆಫೀಸುಗಳನ್ನು ಜಪ್ತಿ ಮಾಡಿದರು. ಆದರೆ ಅಲ್ಲಿ ಅವರಿಗೆ ಪ್ರಯೋಜನವಾಗುವಂತಹದು ಏನೂ ಸಿಗಲಿಲ್ಲ. ಐದು ದಿವಸಗಳ ಅನಂತರ ಆತನ ಜಾಮೀನು ವಿಚಾರಣೆಗೆ ಬಂದಾಗ ಐದು ಕೊಲೆಗಳಲ್ಲಿ ಆತನ ಪಾತ್ರವಿರಬಹುದೆಂಬ ತಮ್ಮ ಶಂಕೆಯನ್ನು ಪೊಲೀಸರು ಹೊರಗೆಡವಿದರು. ಈ ವಿಷಯ ಪತ್ರಿಕೆಗಳಲ್ಲೆಲ್ಲ ಪ್ರಕಟವಾದುದರಿಂದಾಗಿ ಪೊಲೀಸರಿಗೆ ತುಂಬಾ ಪ್ರಯೋಜನವಾಯಿತು.

೧೯೯೨ ಡಿಸೆಂಬರ್ ೪ರಂದು ಒಬ್ಬಾತ ಒಂದು ಸ್ವೀಡಿಶ್ ಮೌಸರ್ ಬಂದೂಕನ್ನು ಪೊಲೀಸ್‌ರಿಗೆ ತಂದು ಕೊಟ್ಟ. ಅದನ್ನು ಏಪ್ರಿಲ್ ೬ರಂದು, ಎಂದರೆ ಗೇರಿ ಬ್ರಾಡ್ಲಿಯ ಕೊಲೆಯಾದ ಮಾರನೆಯ ದಿವಸ ಡಿಲ್ಲನ್ ಅವನಿಗೆ ಮಾರಿದ್ದ. ಅದನ್ನು ಪರೀಕ್ಷಿಸಿದ ತಜ್ಞರು ಬ್ರಾಡ್ಲಿ ಮತ್ತು ಹಾಕಿನ್ಸ್ ಇವರಿಬ್ಬರ ಕೊಲೆಯನ್ನೂ ಅದೇ ಬಂದೂಕಿನಿಂದ ಮಾಡಲಾಗಿತ್ತೆಂಬ ನಿರ್ಧಾರಕ್ಕೆ ಬಂದರು. ಜನವರಿ ೨೨ರಂದು

ಮುಖ್ಯವಾಗಿ ಈ ಎರಡು ಕೊಲೆಗಳನ್ನು ಡಿಲ್ಲನ್‌ನ ಮೇಲೆ ಹೊರಿಸಲಾಯಿತು.

ಕೊಲೆಯನ್ನು ಒಪ್ಪಿದುದು

ಥೋಮಸ್ ಲೀ ಡಿಲ್ಲನ್ ೧೯೫೦ ಜುಲೈ ೯ ರಂದು ಜನಿಸಿದ್ದ. ಅವನಿಗೆ ೧೫ ತಿಂಗಳು ಗಳಾಗಿದ್ದಾಗ ಆತನ ತಂದೆ ಕಾಯಿಲೆಯಿಂದ ಸತ್ತಿದ್ದ. ಡಿಲ್ಲನ್‌ನ ಹೇಳಿಕೆಯಂತೆ ಅವನ ತಾಯಿ ಯಾವತ್ತೂ ಅವನನ್ನು ಹೊಗಳದ ನಿರುತ್ಸಾಹಿ ಹೆಂಗಸಾಗಿದ್ದಳು. ಅವನಿಗೆ ಯಾವಾಗಲೂ ಶಿಕ್ಷೆ ಕೊಟ್ಟು ಅವನನ್ನು ಅಂಕೆಯಲ್ಲಿಟ್ಟುಕೊಳ್ಳುತ್ತಿದ್ದಳು. ಚಿಕ್ಕಂದಿನಲ್ಲಿ ಒಮ್ಮೆಯೂ ಆಕೆ ಅವನನ್ನು ಮುದ್ದುಮಾಡಿರಲಿಲ್ಲ ಮತ್ತು ಪ್ರೀತಿಸುತ್ತೇನೆಂದೂ ಹೇಳಿರಲಿಲ್ಲ. ಜೇನ್ ಪಾಕ್ಸನ್ ಬರೆದ ಪತ್ರವನ್ನು ಓದಿ, ಆಕೆಗೆ ತನ್ನ ಮಗನ ಮೇಲೆ ಎಷ್ಟೊಂದು ಪ್ರೀತಿಯಿದೆ ಎಂಬುದನ್ನು ತಿಳಿದು ಮತ್ಸರದಿಂದ ಆತ ಆ ರೀತಿ ಪತ್ರ ಬರೆಯಲು ಹೊರಟಿರಬಹುದೆಂದು ಮನಶಾಸ್ತ್ರಜ್ಞ ಸ್ಮಾಲಡನ್ ಎಂಬಾತನ ಅಭಿಪ್ರಾಯವಾಗಿತ್ತು.

ಪಾಕ್ಸನ್ ಕುಟುಂಬದ ಶಕ್ತಿ ಮತ್ತು ಒಗ್ಗಟ್ಟುಗಳ ವಿಷಯವನ್ನು ಪತ್ರಿಕೆಗಳಲ್ಲಿ ಓದಿದ ಡಿಲ್ಲನ್ ಇನ್ನೊಮ್ಮೆ ಅವರಿಗೆ ತೊಂದರೆ ಕೊಡಲು ಹೋಗಿದ್ದ. ಸೆರೆ ಸಿಕ್ಕುವ ಮೊದಲು ಅವನೊಮ್ಮೆ ಜೆಮಿಯ ಸಮಾಧಿಯ ಮೇಲಿದ್ದ ಮರದ ಕ್ರಾಸನ್ನು ತುಳಿದು ಹಾಕಿದ್ದ ಮತ್ತು ಜೆಮಿಯ ನೆನಪಿಗಾಗಿ ಸಮಾಧಿಯ ಮೇಲೆ ನೆಟ್ಟ ಗಿಡವನ್ನು ಬೇರು ಸಹಿತ ಕಿತ್ತು ಹಾಕಿದ್ದ.

ಡಿಲ್ಲನ್‌ಗೆ ಪತ್ರಿಕೆಗಳಲ್ಲಿ ಮತ್ತು ಟಿ.ವಿ. ಯಲ್ಲಿ ಕಾಣಿಸಿಕೊಳ್ಳುವುದೆಂದರೆ ಬಹಳ ಇಷ್ಟ. ಇದಕ್ಕಾಗಿ ಆತ ವರದಿಗಾರರೊಂದಿಗೆ ನಗುನಗುತ್ತ ಏನಾದರೂ ಸುಳ್ಳು ಸುಳ್ಳೇ ಕತೆ ಕಟ್ಟಿ ಹೇಳುತ್ತಿದ್ದ. ರಾತ್ರಿಯ ಟೆಲಿವಿಷನ್ ವಾರ್ತೆಯಲ್ಲಿ ಜೇನ್ ಪಾಕ್ಸನ್‌ನ ಮನೆಯವರಿಗೆ ದಿನಾಲೂ ಆತನ ನಗುಮುಖವನ್ನು ಸಹನೆಯಿಂದ ನೋಡಬೇಕಾಗುತ್ತಿತ್ತು. ಕೋರ್ಟಿನಲ್ಲಿ ವಿಚಾರಣೆ ನಡೆಯುವ ಸಮಯದಲ್ಲಿ ತಾನವನಿಗೆ ಎರಡು ಮಾತು ಹೇಳದಿರೆನೆಂದ ಜೇನ್ ಹೇಳುತ್ತಿದ್ದಳು.

ಆದರೆ ೧೯೯೩ ಜುಲೈ ೧೨ ರಂದು ಡಿಲ್ಲನ್‌ನ ವಕೀಲರು ಸರಕಾರೀ ವಕೀಲರೊಂದಿಗೆ ಒಪ್ಪಂದ ಮಾಡಿಕೊಂಡರು. ಅದರಂತೆ ಡಿಲ್ಲನ್ ಪತ್ರಿಕೆಯ ವರದಿಗಾರರೆದುರು, ಟಿ.ವಿ. ಕೆಮರಾಗಳೆದುರು ಮತ್ತು ಬೇರೆ ಹಲವಾರು ಪ್ರೇಕ್ಷಕರೆದುರು ತಾನು ಐದು ಮಂದಿಯನ್ನು ಕೊಲೆಮಾಡಿರುವುದಾಗಿ ಒಪ್ಪಿಕೊಂಡ. ಇದಕ್ಕಾಗಿ ಆತನಿಗೆ ೧೬೫ ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು.

ಕೋರ್ಟಿನಲ್ಲಿ ತಾನು ಮಾಡಿದುದು ತಪ್ಪು ಎಂದು ಆತ ಹೇಳುವಂತೆ ಮಾಡಬೇಕೆಂದಿದ್ದ ಜೇನ್‌ಗೆ ಇದರಿಂದ ತುಂಬಾ ನಿರುತ್ಸಾಹವಾಯಿತು. ಪತ್ರಿಕೆಯ ವರದಿಗಾರರೊಂದಿಗೆ ಆಕೆ “ಡಿಲ್ಲನ್ ಬರೀ ಹೇಡಿ!” ಎಂದು ಉದ್ಗಾರವೆತ್ತಿದಳು.

ಮಾರನೆಯ ದಿವಸ ರಾತ್ರಿ ೭ ಗಂಟೆಗೆ ಡಿಲ್ಲನ್ ಆವಳಿಗೆ ಫೋನ್ ಮಾಡಿದ. ತನ್ನನ್ನು ಬರೀ ಹೇಡಿಯೆಂದು ಹೇಳಿದುದರಿಂದ ತನಗೆ ನೋವಾಗಿದೆಯೆಂದು ಆತ ಅವಳಿಗೆ ಹೇಳಿದ. ಅದಕ್ಕೆ ಆಕೆ ಹೇಳಿದಳು:

“ನಿಜಕ್ಕೂ ನೀನೊಬ್ಬ ಹೇಡಿಯೇ. ನಿನ್ನ ಸುಳ್ಳು ಮಾತುಗಳನ್ನು ಕೇಳಿ ಕೇಳಿ ನನಗೆ

ಸಾಕಾಗಿ ಹೋಗಿದೆ. ನೀನು ಹೇಳುವ ಮಾತುಗಳಲ್ಲಿ ನನಗೆ ಸ್ವಲ್ಪವೂ ಆಸಕ್ತಿಯಿಲ್ಲ. ಆದರೆ ನಾನು ನಿನಗೆ ತಿಳಿಸಬೇಕಾದ ವಿಷಯಗಳು ಕೆಲವಿವೆ. ಅವನ್ನು ಸ್ವಲ್ಪ ಜಾಗ್ರತೆಯಿಂದ ಕೇಳು."

ಅನಂತರ ಆಕೆ ಆತನಿಗೆ ದೇವರು ಪ್ರೀತಿ, ಕುಟುಂಬ—ಇವುಗಳ ವಿಷಯ ವಿವರಿಸಿ ಹೇಳಿದಳು. ಕೊನೆಗೆ "ನಾನು ನಿನ್ನನ್ನು ದ್ವೇಷಿಸುವುದಿಲ್ಲ. ಆದರೆ ನೀನು ನಮ್ಮ ಬದುಕಿಗೆ ತೊಂದರೆ ಮಾಡಿದುದರಿಂದ ನಾನು ನಿನ್ನನ್ನು ಕ್ಷಮಿಸುವುದಿಲ್ಲ" ಎಂದು ಹೇಳಿ ಫೋನನ್ನು ಕೆಳಗಿರಿಸಿದಳು. ಅನಂತರ "ಜಿಮಿ, ನಿನಗಾಗಿ ನಾನು ಹೀಗೆ ಮಾತನಾಡಿದೆ" ಎಂದು ತನ್ನಲ್ಲೇ ಹೇಳಿಕೊಂಡಳು.

———



ಕನ್ನಡ ನಾಡಿಗೆ ಕನ್ನಡವೇ ಗತಿ,
ಅನ್ಯಥಾ ಶರಣಂ ನಾಸ್ತಿ.
ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡ

—ಬಿ. ಎಂ. ಶ್ರೀ

ಬಹು ಉಪಯೋಗಿ ಸಸ್ಯ—ಬಿದಿರು

ಸಾತನೂರು ದೇವರಾಜ್

ಜೀವಶಾಸ್ತ್ರ ಉಪನ್ಯಾಸಕರು
ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು
ಜೆ.ಎಲ್.ಬಿ. ರಸ್ತೆ, ಮೈಸೂರು—೫೭೦೦೦೫

ನೆಲದ ಮೇಲೆ ಹಸಿರು ಜಮಖಾನದಂತೆ ಆವರಿಸಿರುವ ಗರಿಕೆ ಗಿಡಗಳನ್ನು ನಾವೆಲ್ಲಾ ನೋಡಿದ್ದೇವೆ. ಈ ಗರಿಕೆ ಒಂದು ಬಗೆಯ ಹುಲ್ಲಿನ ಗಿಡ. ಹುಲ್ಲಿನ ಜಾತಿಗೆ ಸೇರಿದ ಗಿಡವೊಂದು ನೂರು ಅಡಿಗಿಂತ ಎತ್ತರವಾಗಿ ಬೆಳೆಯಬಲ್ಲದು ಎಂದರೆ ಆಶ್ಚರ್ಯವಾಗುತ್ತದೆ. ನೂರು ಅಡಿಗಿಂತಲೂ ದೊಡ್ಡದಾಗಿ ಬೆಳೆಯುವುದರ ಜೊತೆಗೆ ಈ ಸಸ್ಯದ ಕಾಂಡ ಒಂದು ಮರದ ಕಾಂಡದ ಸುತ್ತಳತೆಯಷ್ಟಿರುತ್ತದೆ. ಇವೆರಡು ವಿಶೇಷ ಗುಣಲಕ್ಷಣಗಳ ಜೊತೆಗೆ ಈ ಸಸ್ಯದ ಕಾಂಡ ಇಟ್ಟಿಗೆಗಿಂತಲೂ ಗಟ್ಟಿಯಾಗಿರುತ್ತದೆ. ಇದು ಬಿದಿರು :

"ಹುಟ್ಟು ಬೆಳೆದು ಕಳಲೆಯಾದೆ,
ಇಷ್ಟಸೆಂಟರಿಗುಪ್ಪಿನಕಾಯಾದೆ,
ದಟ್ಟ ಬೆಳೆದು ಗಟ್ಟಿ ಬಿದಿರು ಆದೆ!"

ಬಿದಿರು ಸಸ್ಯಸಾಮ್ರಾಜ್ಯದ ಹುಲ್ಲಿನ ಜಾತಿಗೆ ಸೇರಿದ ಸಸ್ಯ. ಬಿದಿರುಗಳಲ್ಲಿ ಅನೇಕ ಬಗೆಯ ಪ್ರಭೇದಗಳಿವೆ. ಇವುಗಳಲ್ಲಿ ಸುಮಾರು ೨೦ ಅಡಿಗಳಿಂದ ೧೨೦ ಅಡಿಗಳಷ್ಟು ಎತ್ತರವಾಗಿ ಬೆಳೆಯಬಲ್ಲವು.

ಸಾಮಾನ್ಯವಾಗಿ ಬಿದಿರಿನ ಮರಗಳು ೬೦ ರಿಂದ ೮೦ ಅಡಿಗಳಷ್ಟು ಎತ್ತರ ಬೆಳೆಯುತ್ತವೆ. ಪ್ರಪಂಚದಾದ್ಯಂತ ಉಷ್ಣವಲಯದ ಅರಣ್ಯಗಳಲ್ಲಿ ಬಿದಿರು ಮರಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಆದರೆ ವಿಶೇಷವಾಗಿ ಚೈನಾ, ಜಪಾನ್, ಮಲಯ, ಭಾರತ, ಶ್ರೀಲಂಕಾ ದೇಶಗಳಲ್ಲಿಯಂತೂ ಬಿದಿರು ಮರಗಳು ಸರ್ವಸಾಮಾನ್ಯ.

ಇತರೆ ಹುಲ್ಲಿನ ಜಾತಿಯ ಸಸ್ಯಗಳಂತೆ ಬಿದಿರು ಭೂಭಾಗದ ಬೇರಿನ ಸಮೂಹದಿಂದ ಹತ್ತಾರು ಕಾಂಡಗಳು ಮೇಲೇಳುತ್ತವೆ. ಹುಲ್ಲಿನ ಗಿಡಗಳಲ್ಲಿ ಎಲೆಗಳು ಒತ್ತೊತ್ತಾಗಿರುವಂತೆ ಕಾಂಡಗಳೂ ಒತ್ತೊತ್ತಾಗಿರುತ್ತವೆ. ಬಿದಿರು ಮರದ ಕಾಂಡದ ಕೆಳಭಾಗದಲ್ಲಿ ಯಾವುದೇ ರೀತಿಯ ರೆಂಬೆಗಳು ಮೂಡದಿದ್ದರೂ, ಕಾಂಡದ ತುದಿಯ ಭಾಗದಲ್ಲಿ ರೆಂಬೆಗಳನ್ನು ರಚಿಸುತ್ತವೆ. ಇದರಿಂದ ಬಿದಿರು ಮರದ ಮೇಲ್ಭಾಗದಲ್ಲಿ ದಟ್ಟನೆಯ ರೆಂಬೆಗಳು ಒಂದರ ಜೊತೆಯಲ್ಲಿ ಮತ್ತೊಂದು ಹೆಣೆದುಕೊಳ್ಳುವುದರ ಮೂಲಕ ಬಿದಿರು ಮೆಳೆಗಳು ಉಂಟಾಗುತ್ತವೆ. ದೈತ್ಯ ಮರಗಳಂತೆ ಕಾಣುವ ಬಿದಿರು

ಮೆಳೆಯನ್ನು ಹುಲ್ಲಿನ ಜಾತಿಗೆ ಸೇರಿದ ಸಸ್ಯ ಎಂದು ಪರಿಗಣಿಸುವುದು ಕಷ್ಟವೇ ಸರಿ.

ಕಾಂಡ ಗಿಣ್ಣು ಮತ್ತು ಅಂತರಗಿಣ್ಣು ಗಳಿಂದ ಬಹುತೇಕ ಪ್ರಭೇದದ ಬಿದಿರು ಮರ ಗಳ ಕಾಂಡಗಳ ಹೊರಮೈ ಭಾಗದಲ್ಲಿ ಸೆಲಿ ಕಾನ್ ರಾಸಾಯನಿಕ ವಸ್ತುಗಳಿಂದ ಆವೃತ ವಾಗಿ, ಆದರಿಂದ ಬಿದಿರು ಮರದ ಕಾಂಡವು ಹೊರಮೈ ನುಣುಪಾಗಿರುವುದರ ಜೊತೆಗೆ ಗಟ್ಟಿಯಾಗಿರುತ್ತದೆ. ಇದರಿಂದಾಗಿ ಬಿದಿರು ಮರದ ಕಾಂಡವನ್ನು ಅಷ್ಟು ಸುಲಭವಾಗಿ ಕತ್ತರಿಸುವುದಕ್ಕೆ ಆಗುವುದಿಲ್ಲ. ಬಿದಿರನ್ನು ಚೈನಾ ದೇಶದವರು ವೆಟ ಸ್ಟೋನ್ ಎಂದು ಕರೆಯುತ್ತಾರೆ.

ನಮ್ಮ ದೈನಂದಿನ ಚಟುವಟಿಕೆಗಳೇ ಅಲ್ಲದೆ ವಾಣಿಜ್ಯ ಕ್ಷೇತ್ರದಲ್ಲಿ ಬಿದಿರು ಮಹತ್ತರ ಪಾತ್ರವನ್ನು ಹೊಂದಿದೆ. ತಾಯಿಯ ಮಡಿಲಿನಿಂದ ಹೊರಬಂದ ತಕ್ಷಣವೇ ಆಶ್ರಯ ನೀಡುವ ತೊಟ್ಟಿಲಿ ನಿಂದ ಹಿಡಿದು ಸತ್ತ ನಂತರ ಸಾಗಿಸಲು ಉಪಯೋಗಿಸುವ ಚಟ್ಟಕ್ಕೂ ಬಿದಿರು ಬೇಕು.

ಬಿದಿರು ಮರದಿಂದ ನಮಗಾಗುವ ಅನುಕೂಲ ಹಲವಾರು. ಬಿದಿರು ಮರದ ಎಳೆಯ ಕಾಂಡ ಮತ್ತು ಬೀಜಗಳನ್ನು ಆಹಾರವನ್ನಾಗಿ ಉಪಯೋಗಿಸುತ್ತಾರೆ. ಬಲಿತ ಮರದ ಕಾಂಡವನ್ನು ಮನೆ ಕಟ್ಟುವು ದಕ್ಕಾಗಿ, ವ್ಯವಸಾಯ ಉಪಕರಣ ಮತ್ತು ಗಾಡಿ ತಯಾರಿಕೆಯಲ್ಲಿ ಉಪಯೋಗಿಸು ತ್ತಾರೆ. ಅಲ್ಲದೆ ಹೂವಿನ ಬುಟ್ಟಿ, ಮಂಕರಿ, ಹಗ್ಗಗಳ ತಯಾರಿಕೆಯಲ್ಲಿ ಬಿದಿರು ಉಪ ಯೋಗಿ.

ಬಿದಿರಿನ ಕಾಂಡ ಟೊಳ್ಳಾಗಿರುವುದರಿಂದ ಕೆಲವು ದೇಶಗಳಲ್ಲಿ ಬಿದಿರಿನ ಕಾಂಡವನ್ನು ನೀರಿನ ಪೈಪಿನಂತೆ ಉಪಯೋಗಿಸುತ್ತಾರೆ. ಮೇಲ್ಕಂಡ ಸಂದರ್ಭಗಳೇ ಅಲ್ಲದೆ ಸೇತುವೆ ನಿರ್ಮಾಣ, ಏಣಿ ಅಷ್ಟೇ ಏಕೆ ಚಪ್ಪಲಿಯ ಅಟ್ಟೆಗಳನ್ನು ಕಟ್ಟಿಸುವುದಕ್ಕಾಗಿ ಬಿದಿರನ್ನೇ ಆಶ್ರಯಿಸುತ್ತಾರೆ. ಚೈನಾ ದೇಶದ ಕೂಲಿ ಕಾರ್ಮಿಕರಂತೆ ತಮ್ಮ ದೈನಂದಿನ ಸಾಮಗ್ರಿ ಗಳನ್ನು ಒಂದು ಕಡೆಯಿಂದ ಮತ್ತೊಂದು ಪ್ರದೇಶಡೆಗೆ ಸಾಗಿಸುವುದಕ್ಕೆ ಬಿದಿರು ಮರದ ಕಾಂಡವನ್ನು ತಟ್ಟೆಯಾಗಿ ಉಪ ಯೋಗಿಸುತ್ತಾರೆ.

ಕಾಗದ ತಯಾರಿಕೆಯಲ್ಲೂ, ಬಿದಿರು ಮರದ ಕಾಂಡದ ಒಳ ಭಾಗದ ತಿರುಳನ್ನು ಹೊರ ತೆಗೆದು ತೆಳುವಾದ ಹಾಳೆಯನ್ನು ತಯಾರಿಸುವುದಕ್ಕೆ ಉಪಯೋಗಿಸುತ್ತಾರೆ. ಇಂದು ಕಾಗದ ತಯಾರಿಕೆಯಲ್ಲಿ ಬಿದಿರು ಮುಖ್ಯ ಕಚ್ಚಾ ಸಾಮಗ್ರಿ. ಜಾಗತಿಕ ಮೊದಲನೆಯ ಮಹಾಯುದ್ಧ ಪ್ರಾರಂಭ ವಾಗುವುದಕ್ಕೆ ಮುಂಚಿತವಾಗಿ ಬಿದಿರು ಮರದ ಮತ್ತು ವಿವಿಧ ಬಗೆಯ ಸಸ್ಯಗಳ ನಾರುಗಳನ್ನು ಉಪಯೋಗಿಸಿಕೊಂಡು ಕಾಗದ ಉತ್ಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಲಾಯಿತು.

ಬಿದಿರು ಮರದ ಬೀಜ ಮತ್ತು ಎಳೆಯ ಕಾಂಡ ಆಹಾರವಾಗಿದೆ. ಚೈನಾ ದೇಶದಲ್ಲಿ ಯಂತೂ ಬತ್ತದ ಫಸಲು ಕೈಕೊಟ್ಟ ಕಾಲ ದಲ್ಲಿ ಬಿದಿರು ಮರದ ಬೀಜಗಳನ್ನು ಸಾಮಾನ್ಯ ಆಹಾರದಂತೆ ಉಪಯೋಗಿಸು ತ್ತಾರೆ. ಕೆಲ ಪ್ರಭೇದದ ಬಿದಿರು ಮರಗಳು ಬಿಡುವ ಹಣ್ಣುಗಳು ಸೇಬಿನ ಹಣ್ಣಿನಂತೆ

ದಪ್ಪನಾಗಿರುವುದರ ಜೊತೆಗೆ ಮೃದುವಾಗಿರುತ್ತದೆ. ಈ ಬಗೆಯ ಬಿದಿರು ಹಣ್ಣುಗಳನ್ನು ಚೆನ್ನಾಗಿ ಬೇಯಿಸಿದ ನಂತರ ತಿನ್ನುತ್ತಾರೆ. ಇನ್ನು ಕೆಲವು ಪ್ರಭೇದದ ಬಿದಿರು ಮರಗಳು ಗಾತ್ರದಲ್ಲಿ ಚಿಕ್ಕದಾಗಿದ್ದು ಹಣ್ಣುಗಳನ್ನು ಬಿಡುತ್ತವೆ. ಈ ಹಣ್ಣುಗಳನ್ನು ನಮ್ಮ ದೇಶದ ಕೆಲಸ್ಥಳಗಳಲ್ಲಿ ಜೇನಿನೊಂದಿಗೆ ಬೆರೆಸಿ, ಬೆಂಕಿಯ ಶಾಖದಲ್ಲಿ ಉರಿದು ನಂತರ ತಿನ್ನುತ್ತಾರೆ. ಬಿದಿರು ಮರದ ಎಳೆಯ ಸಸ್ಯಗಳ ಈ ಭಾಗವನ್ನು "ಕಳಲೆ" ಎಂದೂ ಕರೆಯುವುದುಂಟು. ಈ ಕಳಲೆಯನ್ನು ಬೇಯಿಸಿ ತಿನ್ನುತ್ತಾರೆ. ಇದೇ ಅಲ್ಲದೆ ಕಳಲೆಯನ್ನು ಸಕ್ಕರೆಯ ಸಿಹಿ ದ್ರಾವಣದಲ್ಲಿ ಸಂಗ್ರಹಿಸಿಟ್ಟು ಹಲವು ದಿನಗಳ ನಂತರ ತಿನ್ನುತ್ತಾರೆ, ಕಳಲೆಯನ್ನು ಉಪ್ಪು, ಖಾರ ಮತ್ತು ವಿನೆಗರ್‌ನೊಂದಿಗೆ ಸಂಗ್ರಹಿಸುವುದರ ಮೂಲಕ ಉಪ್ಪಿನಕಾಯಿ ರೂಪದಲ್ಲಿಯೂ ಕಳಲೆಯನ್ನು ಉಪಯೋಗಿಸುತ್ತಾರೆ.

ಈಗ ಬಿದಿರು ನಮ್ಮ ದೈನಂದಿನ ಜೀವನದಲ್ಲಿ ಮಹತ್ತರ ಪಾತ್ರವನ್ನು ವಹಿಸಿರುವ ಬಹುಉಪಯೋಗಿ.

ಕನ್ನಡದ ನೆಲದ ಪುಲ್ಲೆನಗೆ ಪಾವನ ತುಲಸಿ !
ಕನ್ನಡದ ನೆಲದ ನೀರ್ನೊನಲೆನಗೆ ದೇವನದಿ !
ಕನ್ನಡದ ನೆಲದ ಕಲ್ಲೆನಗೆ ಶಾಲಿಗ್ರಾಮ ಶಿಲೆ !

ಕನ್ನಡ ದೈವಮ್ಮೆ

ಕನ್ನಡ ಶಬ್ದಮೆನಗೋಂಕಾರ ಮೀಯೆನ್ನ
ಕನ್ನಡದ ನುಡಿಯೆ ಗಾಯತ್ರಿಯದ್ಭುತ ಮಂತ್ರ-
ಮಿನ್ನಾವುದೈ ಪರಂತು ಕನ್ನಡದ ಸೇವೆಯಿಂದಧಿಕಮೀ

—ಸಾಲಿ ರಾಮಚಂದ್ರರಾಯರು

ನೆಗಡಿ ನಿರೋಧಕ್ಕೆ ನವಸೂತ್ರಗಳು

ಗೀತಾ ನಾಸತ್ಯ
೨೯, ೫ನೇ ರಸ್ತೆ ಕೊನೆ, ಸಂಜಯನಗರ
ಬೆಂಗಳೂರು ೫೬೦೦೯೪

ಕಣ್ಣು, ಮೂಗಿನ ಉರಿ, ಉಜ್ಜುವಿಕೆ, ಗಂಟಲ ಕೆರೆತ, ಕೆಮ್ಮು, ಮೂಗು ಒಮ್ಮೊಮ್ಮೆ ಸೋರುವ, ಒಮ್ಮೊಮ್ಮೆ ಕಟ್ಟುವ ಪರಿ, ಎಡೆಬಿಡದೆ ಬರುವ ಸೀನಿನ ಸರಮಾಲೆ— ಒಂದೇ ಎರಡೇ, ನೆಗಡಿ ತರುವ ಬವಣೆಯು ವರ್ಣಿಸಲಸದಳ. ನೆಗಡಿಗೆ ಮದ್ದಿಲ್ಲ ನಿಜ. ಶೀತ ಹೊಡೆದೋಡಿಸಬಲ್ಲ ಶೀತ ಸಮರದ ಒಂಬತ್ತು ಸೂತ್ರಗಳಿಲ್ಲಿವೆ.

೧. ವಾತಾಯನ ವ್ಯವಸ್ಥೆ ಸರಿಯಾಗಿರುವೆಡೆ ಇರಿ

ಕಛೇರಿ, ಮನೆಯಲ್ಲಿ ಹೆಚ್ಚಿನ ವೇಳೆ ಕಳೆಯುವೆವು. ಅಲ್ಲಿ ವಾತಾಯನ ವ್ಯವಸ್ಥೆ ಸರಿಯಾಗಿದ್ದರೆ ನೆಗಡಿ ವೈರಾಣು ತಂಗಲು ಅವಕಾಶವಿರದು. ವಾತಾವರಣದಲ್ಲಿ ತೇವಾಂಶ ಕನಿಷ್ಠವಿದ್ದರೆ, ಪದೇ ಪದೇ ನೀರು ಧಾರಾಳ ಕುಡಿಯಿರಿ. ಪ್ರತಿ ೨ ತಾಸಿಗೊಮ್ಮೆ ಒಂದು ಲೋಟ ನೀರು ಕುಡಿದರೆ ನೆಗಡಿಯ ಭೀತಿ ದೂರಾಗಿಸಬಹುದೆನ್ನುತ್ತಾರೆ ಕೆರೊಲಿನಾದ ಡ್ಯೂಕ್ ವಿಶ್ವವಿದ್ಯಾಲಯದ ವೈದ್ಯೆ ಮಾರ್ಗರೆಟ್ ಗ್ರಾಡಿಸನ್. ತೇವಾಂಶ ಕಡಿಮೆ ಇದ್ದಾಗ ಮೂಗಿನ ಒಳಪದರ ಒಣಗುತ್ತದೆ. ವೈರಾಣು ಪ್ರವೇಶಕ್ಕೆ ಸರಾಗವಾಗುತ್ತದೆ. ತೇವಾಂಶ ಕಾಪಾಡಲು ನೀರು ಕುಡಿದರೆ ಸಲೀಸು.

೨. ಕೆಮ್ಮು ಮತ್ತು ಸೀನುವವರಿಂದ ದೂರವಿರಿ

ಸಂಪರ್ಕದಲ್ಲಿ ಬರುವವರು ಕೆಮ್ಮು ಅಥವಾ ಸೀನುತ್ತಿದ್ದರೆ ವೈರಾಣು ಪಸರಿಸಬಹುದು. ಒಂದು ಮೀಟರ್ ಅಂತರದಲ್ಲಿರಿ. ಕೆಮ್ಮು, ಸೀನಿನ ಜತೆಗೆ ರೋಗಿ ಹೊರಹಾಕುವ ಗಾಳಿಜತೆಗಿರುವ ವೈರಾಣು ಸಂಸರ್ಗದಿಂದ ಕೆಲದಿನಗಳಲ್ಲಿ ಆರೋಗ್ಯವಂತ ನೆಗಡಿ ಪೀಡಿತನಾಗುವ ಎನ್ನುತ್ತಾರೆ ಮಿಚಿಗನ್ ವಿಶ್ವವಿದ್ಯಾಲಯದ ವೈದ್ಯ ಡೆನ್ನಿಸ್ ಮುರ್ರೇ.

ಮೂಲ: ೧೯೯೮ರ ಜುಲೈ ತಿಂಗಳ 'ರೀಡರ್ಸ್ ಡೈಜೆಸ್ಟ್'

೩. ಚೆನ್ನಾಗಿ ತಿನ್ನಿರಿ

ದೇಹಕ್ಕೆ ಸಮೃದ್ಧ ಪೋಷಣೆ ಅತ್ಯಗತ್ಯ. ನಿರೋಧ ಶಕ್ತಿ ಹೆಚ್ಚಳಕ್ಕೆ ಅನಿವಾರ್ಯ. ಅಮೆರಿಕದ ಆರೋಗ್ಯ ಪ್ರತಿಷ್ಠಾನದ ಹಿರಿಯ ಸಲಹೆಗಾರ ಡಾ|| ಜಾನ್ ಹೆಚ್.ಡಬ್ಲ್ಯು. ಪ್ರಕಾರ ಪ್ರತಿನಿತ್ಯ ೩–೪ ಬಾರಿ ಹಣ್ಣು ಹಾಗೂ ೨–೩ ಬಾರಿ ತರಕಾರಿ ಸೇವನೆ, ಸಮೃದ್ಧ ಆಹಾರ ಸೇವನೆಯಿಂದ ನೆಗಡಿಯ ಭೂತವನ್ನು ದೂರ ತಳ್ಳಬಹುದು.

೪. ಲಘುವ್ಯಾಯಾಮ ಮಾಡಿರಿ

೪೫ ನಿಮಿಷ ಕಾಲ ನಿತ್ಯ ಲಘು ವ್ಯಾಯಾಮ ಹಿತಕರ. ನಡಿಗೆ, ಸೈಕಲ್ ತುಳಿತ, ನೃತ್ಯಾಭ್ಯಾಸದಂತಹವು ಸೂಕ್ತ. ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯದ ನಿರ್ದೇಶಕ ನಿಯಾಲ್ ಮೊಯ್ನಾರ ಹೇಳಿಕೆಯಂತೆ ತೀವ್ರವ್ಯಾಯಾಮದಿಂದ ಶ್ವಾಸಕೋಶದ ತೊಂದರೆಗೆ ಆಹ್ವಾನ. ಲಘು ವ್ಯಾಯಾಮದಿಂದ ಶ್ವಾಸಕೋಶಗಳಿಗೆ ಉತ್ತೇಜನ.

೫. ಮೂಗು, ಕಣ್ಣು ಉಜ್ಜದಿರಿ

ನೆಗಡಿ ಹಿಡಿದವರು ಮೂಗು, ಕಣ್ಣು ಉಜ್ಜಿ ನಂತರ ಮನೆಯ ವಸ್ತುಗಳನ್ನು ಮುಟ್ಟಿದರೆ ಅದೇ ವಸ್ತುಗಳನ್ನು ಮನೆಯ ಇತರ ಸದಸ್ಯರು ಮುಟ್ಟಿದ್ದರೆ ಸಾಕು, ನೆಗಡಿ ಸಾಂಕ್ರಾಮಿಸಬಹುದು. ನೆಗಡಿಯ ವೈರಾಣು ಮೂರುತಾಸು ಕಾಲ ನಿರ್ಜೀವ ಪರಿಸರದಲ್ಲಿದ್ದರೂ ಸಾಯುವುದಿಲ್ಲ ಎನ್ನುತ್ತಾರೆ ಓಹಿಯೊ ವಿಶ್ವವಿದ್ಯಾಲಯದ ವೈದ್ಯ ಎಫ್. ಪಿ. ಜೋಸೆಫ್.

೬. ಗಂಟಲ ಉರಿಯೂತ ಪರಿಹರಿಸಿ

ಬಿಸಿನೀರಿನಲ್ಲಿ ಬಾಯಿ ಮುಕ್ಕಳಿಸುವ ಮೂಲಕ, ಉಪ್ಪುನೀರಿನ ಬಳಕೆಮಾಡಿ, ಮನೆ ಮದ್ದಿನ ಮೂಲಕ ಗಂಟಲ ಉರಿ, ನೋವು ಪರಿಹರಿಸಿರಿ. ಜೇನು ಮತ್ತು ಚಹ ಕೂಡಿಸಿ ಕುಡಿದರೆ ಕ್ಷೇಮ. ಚೀಪುವ ಗುಳಿಗೆ ನಿರರ್ಥಕ.

೭. ಚೆನ್ನಾಗಿ ಉಸಿರಾಡಿರಿ

ಮೂಗು ಕಟ್ಟಿದ್ದರೆ ಉಸಿರಾಟ ಸಲೀಸುಗೊಳಿಸುವ ತೈಲ ಬಳಸಿ. ಸತತವಾಗಿ ೩ ದಿನಕ್ಕಿಂತ ಹೆಚ್ಚು ಅವುಗಳ ಬಳಕೆ ತರವಲ್ಲ. ನಿರಪಾಯಕಾರಿ ತೈಲ ಹಚ್ಚುವ ಹಾಗೂ ಆಪ್ಪಸೇವಿಸುವ ವಿಧಾನ ಸಮಂಜಸ.

೮. ಅಪರೂಪದ ಮದ್ಯಪಾನದಿಂದ ಲೇಸು

ಎಂದಾದರೊಮ್ಮೆ ಮದ್ಯಸೇವಿಸುವವರಾಗಿದ್ದರೆ ರಾತ್ರಿ ಮಲಗುವ ಮುನ್ನ ಅತ್ಯಲ್ಪ ಪ್ರಮಾಣದ ಮದ್ಯಸೇವನೆಯಿಂದ ನೆಗಡಿ ನಿರೋಧಿಸಬಹುದೆಂದು ಇಂಗ್ಲೆಂಡಿನ ಸಂಶೋಧನಕಾರರು ಅಭಿಪ್ರಾಯ ಪಡುತ್ತಾರೆ.

೯. ಸಕಾಲದ ನಿದ್ದೆ–ನೆಗಡಿ ನಿರೋಧಕ

ಸ್ಯಾನ್‌ಡಿಯಾಗೋ ವೈದ್ಯಕೀಯ ಕೇಂದ್ರದಲ್ಲಿ ನಡೆಸಿದ ಸಂಶೋಧನೆಯಿಂದ ಸಕಾಲದ ನಿದ್ದೆಯು ನೆಗಡಿ ನಿರೋಧಕವೆಂಬುದು ರುಜುವಾತಾಗಿದೆ. ನೆಗಡಿಕಾರಕ ವೈರಾಣುಗೆಲ್ಲುವ ತಾಕತ್ತು ರಕ್ತಕಣಗಳಿ

ಗಿರಬೇಕಾದರೆ ಕಾಲ ಕಾಲಕ್ಕೆ ವಿಶ್ರಾಂತಿ, ನಿದ್ದೆ ಅತ್ಯಗತ್ಯ.

ಒಂದಿನಿತು ಕಾಳಜಿಯಿಂದ ನಡೆದು ಕೊಂಡರೆ ಸಾಮಾನ್ಯ ನೆಗಡಿಯು ಸಾಮಾನ್ಯವಾಗದೆಂದು ಡಾ|| ಗ್ರಾಡಿಸನ್ ಹೇಳುತ್ತಾರೆ. ಬಾಲಕ, ಬಾಲಿಕೆಯರಿಗೆ ಸಹ ಇಂಥ ಪಾಠ ಎಳವೆಯಲ್ಲಿ ಕಲಿಸಲು ಸಾಧ್ಯ.



ಕನ್ನಡಿಗರು ಒಟ್ಟಾಗಲು ಇರುವ ಏಕಮಾತ್ರ ಸಾಧನ ಅವರ ನುಡಿ. ಸಾವಿರಾರು ವರ್ಷಗಳಿಂದ ದಷ್ಟಪುಷ್ಟವಾಗಿ ಕಲ್ಪವೃಕ್ಷದಂತೆ ಬೆಳೆದು ಸಕಲ ಇಷ್ಟಾರ್ಥಗಳನ್ನು ಕೊಡಬಲ್ಲ ಅವರ ನುಡಿ. ಆದ್ದರಿಂದ ನಾವು ಮೊದಲು ಕನ್ನಡಿಗರು, ಅನಂತರ ಭಾರತೀಯರು ಎಂದರೆ ಅದು ಸ್ವಾಭಾವಿಕ, ಕಾರ್ಯಸಾಧ್ಯ.

—ಎ. ಆರ್. ಕೃಷ್ಣಶಾಸ್ತ್ರಿ

ಗ್ಲಾಸ್ಗೊ ನಗರದ ಪುಟಾಣಿ ತತ್ವಜ್ಞಾನಿಗಳು

ಜಿ. ರಾಮನಾಥ ಭಟ್

ಬಿ-೧೭, ಸರ್ವಜ್ಞ ರಸ್ತೆ, ಕುವೆಂಪುನಗರ

ಜಿ. ಬ್ಲಾಕ್, ಮೈಸೂರು-೫೭೦೦೨೩

ಸ್ಕಾಟ್‌ಲೇಂಡಿನ ಗ್ಲಾಸ್ಗೋ ನಗರದ ಬಳಿಯಲ್ಲಿರುವ ಲ್ಯಾಂಗ್ ಬ್ಯಾಂಕ್ ಎಂಬ ಉಪನಗರದಲ್ಲಿ ಬೇಸಿಗೆಯ ಕೊನೆಯಲ್ಲಿಯ ಒಂದು ಸಂಜೆ. ಅಲ್ಲಿಯ ಪ್ರಾಥಮಿಕ ಶಾಲೆಯ ಕೊಠಡಿಯಲ್ಲಿ ಕುಳಿತು ಕಿಟಕಿಯಾಚೆ ದೃಷ್ಟಿ ಹಾಯಿಸಿದರೆ ಕ್ಲೈಡ್ ಕೊಲ್ಲಿಯಲ್ಲಿ ತೇಲುತ್ತ ಸೂರ್ಯನ ಮೇಲವ ಬೆಳಕಿನಲ್ಲಿ ಹೊಳೆದು ಮನಸೆಳವ ಚಿಕ್ಕ ದೊಡ್ಡ ಹಡಗುಗಳು, ಹಾಗೂ ದೋಣಿಗಳು ಕಾಣುತ್ತವೆ. ಆದರೆ ಕೇವಲ ಐದು ಆರು ವಯಸ್ಸಿನ ವಿದ್ಯಾರ್ಥಿಗಳಿರುವ ಈ ಶಾಲಾ ಕೊಟಡಿಯಲ್ಲಿ ಯಾರ ಗಮನವೂ ಕಿಟಕಿಯಾಚೆಗಿನ ಸುಂದರ ದೃಶ್ಯದೆಡೆ ಹರಿಯಲಿಲ್ಲ. ಎಲ್ಲ ಮಕ್ಕಳೂ ತಮ್ಮ ಅಧ್ಯಾಪಕಿ ಕ್ಯಾಥರೀನಳು ಹೇಳುತ್ತಿದ್ದ ಕತೆಯಲ್ಲಿ ತಲ್ಲೀನರಾಗಿದ್ದರು.

ಕೆಂಚು ಕೂದಲಿನ ಆಕರ್ಷಕ ಮಹಿಳೆ ಕ್ಯಾಥರೀನಳು ಮಾರಕ್ಕೊಮ್ಮೆ ಈ ಶಾಲೆಯ ಮಕ್ಕಳಿಗೆ ತಾನು ಬರೆದ ಕತೆಯನ್ನು ಹೇಳಲು ಬರುತ್ತಿದ್ದಳು. ಈ ಕತೆಯಲ್ಲಿ ಪೌಲ್ ಮತ್ತು ಲೌರಾ ಎಂಬ ಅಣ್ಣ ತಂಗಿಯರು ಈ ಜಗತ್ತು ಎಷ್ಟೊಂದು ವಿಲಕ್ಷಣವೂ ವಿಸ್ಮಯಕರವೂ ಆಗಿದೆ ಎಂದು ತಿಳಿದು ಕೊಳ್ಳುತ್ತಾರೆ. ಕ್ಯಾಥರೀನಳು ಹೇಳುತ್ತಿದ್ದ ಇಂದಿನ ಅಧ್ಯಾಯದಲ್ಲಿ ಈ ಅಣ್ಣ ತಂಗಿಯರು ಆಕಾಶದಲ್ಲಿ ಜೆಟ್ ವಿಮಾನವು ಕಾಮನ ಬಿಲ್ಲನ್ನು ಸೀಳಿ ಮುಂದೆ ಬರುವುದನ್ನು ಕಾಣುತ್ತಾರೆ. ಆ ಸಮಯದಲ್ಲಿ ಕಾಮನ ಬಿಲ್ಲಿನ ಬಣ್ಣಗಳೆಲ್ಲ ವಿಮಾನದ ರೆಕ್ಕೆಗಳಿಗೆ ಅಂಟಿಕೊಂಡು ವರ್ಣಮಯ ರೇಖೆಗಳಿಂದ ಕಲಾವಿದನೊಬ್ಬ ಈ ವಿಮಾನವನ್ನು ಸಿಂಗರಿಸಿದಂತೆ ಕಾಣುತ್ತಾರೆ. ಒಂದು ಕ್ಷಣ ವಿಮಾನವು ಕಾಮನ ಬಿಲ್ಲನ್ನು ಸೀಳಿದಂತೆ ಕಂಡರೂ ಮರುಕ್ಷಣದಲ್ಲಿ ಅದೇ ಕಾಮನ ಬಿಲ್ಲು ಮತ್ತೆ ಇಡಿಯಾಗಿ ಕಾಣಿಸಿಕೊಳ್ಳುತ್ತದೆ.

ವಾತಾವರಣದಲ್ಲಿ ತೇವಾಂಶ ತುಂಬಿಕೊಂಡು ನೀರಿನ ಸೂಕ್ಷ್ಮ ಕಣಗಳ ಮೂಲಕ ಹಾಯುವ ಸೂರ್ಯನ ಕಿರಣಗಳು ಈ

ಮೂಲ : ರೀಡರ್ಸ್ ಡೈಜೆಸ್ಟ್‌ನ ೧೯೯೧ ರ ಮೇ ತಿಂಗಳ ಸಂಚಿಕೆಯಲ್ಲಿ ಪ್ರಕಟಗೊಂಡ ಮೈಕೆಲ್ ಡೀನ್‌ರವರ ಲೇಖನ.

ಅವಳಿಗಳಿದ್ದು ಇಬ್ಬರಿಗೂ ಒಂದೇ ಬಾರಿಗೆ ಒಂದೇ ರೀತಿಯ ವಿಚಾರಗಳು ಹೊಳೆಯುವ ಸಾಧ್ಯತೆ ಇರಬಹುದು." ಆಗ ಇನ್ನೊಬ್ಬ ವಿದ್ಯಾರ್ಥಿ ಪ್ರಶ್ನಿಸುತ್ತಾನೆ, "ಹಾಗಿದ್ದರೆ ಈ ಅವಳಿಗಳಲ್ಲಿ ಒಬ್ಬನಿಗೆ ಯಾರಾದರೂ ಚೂರಿಯಿಂದ ತಿವಿದರೆ ಇನ್ನೊಬ್ಬನೂ ಅದರ ನೋವು ಅನುಭವಿಸಬೇಕಲ್ಲ?"

ಗಂಟೆಯ ಶಬ್ದ ಶಾಲೆಯ ಅವಧಿ ಮುಗಿಯಿತೆಂದು ಎಚ್ಚರಿಸುತ್ತದೆ. ಆದರೆ ತರಗತಿಯ ಮಕ್ಕಳೆಲ್ಲ ಡೇನಿಯಲ್ ಸೂಚಿಸಿದ ಮಾನಸಿಕ ಅವಳಿಗಳು ಒಂದೇ ಬಾರಿಗೆ ಇಬ್ಬರೂ ಅನುಭವಿಸುವ ನೋವು ನಲಿವುಗಳ ಬಗ್ಗೆ ತಮ್ಮದೇ ಕಲ್ಪನಾ ಲೋಕದಲ್ಲಿ ವಿಹರಿಸುತ್ತಿದ್ದಾರೆ.

"ಬೇರೆ ವಿಷಯಗಳ ಬೋಧನಾ ತರಗತಿಗಳಿಗಿಂತ ಈ ತಾತ್ವಿಕ ಜಿಜ್ಞಾಸೆಯ ತರಗತಿ ಏಕೆ ಭಿನ್ನವಾಗಿದೆ ಹಾಗೂ ನೀವು ಇದರಲ್ಲಿ ಏಕೆ ಇಷ್ಟೊಂದು ಆಸಕ್ತಿ ತೋರುತ್ತೀರಿ" ಎಂದು ನಾನು ಈ ವಿದ್ಯಾರ್ಥಿಗಳನ್ನು ಪ್ರಶ್ನಿಸಿದೆ. ಮಕ್ಕಳೆಲ್ಲ ಈ ಪ್ರಶ್ನೆಗೆ ತುಂಬ ಉತ್ಸಾಹದಿಂದ ಉತ್ತರ ನೀಡಿದರು. "ಒಂದು ಪ್ರಶ್ನೆಗೆ ಕೇವಲ ಒಂದೇ ಉತ್ತರವಿರುವುದಿಲ್ಲ ಎಂಬ ಕಲ್ಪನೆಯೇ ನಮ್ಮಲ್ಲಿ ಕುತೂಹಲವನ್ನು ಕೆರಳಿಸುತ್ತದೆ. ಒಂದು ಪ್ರಶ್ನೆ ಕೇಳಿದಾಗ ಪ್ರತಿಯೊಬ್ಬರ ಮನಸ್ಸಿನಲ್ಲೂ ಹೊಳೆಯುವ ಉತ್ತರ ಅದು ಸರಿಯೋ ತಪ್ಪೋ ಎಂದು ಚಿಂತಿಸದೆ ನಮ್ಮ ವಿಚಾರಲಹರಿಯನ್ನು ಇನ್ನೊಬ್ಬರ ವಿಚಾರಲಹರಿಯೊಡನೆ ಹೊಂದಿಸಿಕೊಂಡು ಒಂದು ಸಾಮೂಹಿಕ ಸಂವಾದಕ್ಕೆ ಎಡೆಮಾಡಿಕೊಡುವ ಈ ವಿಧಾನ ನಮಗೆ ಬಲು ಮೆಚ್ಚುಗೆಯಾಗಿದೆ. ಇದರೊಡನೆ ಶಿಕ್ಷಕರ ಸಹಕಾರದಿಂದ ನಾವೆ[...] ಸರಿಯಾದ ಉತ್ತರ ಕಂಡುಕೊಳ್ಳುತ್ತೇವೆ[...] ಶಿಕ್ಷಕರ ಯುಕ್ತ ಮಾರ್ಗದರ್ಶನದಲ್ಲಿ ನಾ[...] ಮುಕ್ತವಾಗಿ ವಿಚಾರ ಮಾಡುವ ಹಾಗೂ [...] ಅಳುಕಿಲ್ಲದೆ ನಮ್ಮ ವಿಚಾರಗಳನ್ನು ವ್ಯಕ್ತ[...] ಪಡಿಸುವ ಈ ಅವಕಾಶ ಬಲು ಅದ್ಭುತ!" [...] ಡೇನಿಯಲ್‌ನ ಮಾತಿನಲ್ಲಿ ಹೇಳುವುದಾದ[...] ಮಕ್ಕಳು ನಾಗಾಲೋಟದಿಂದ ಓಡು[...] ಕುದುರೆಗಳು ಹಾಗೂ ಶಿಕ್ಷಕ ಶಿಕ್ಷಕಿಯರ[...] ಕೈಯಲ್ಲಿ ಲಗಾಮು ಹಿಡಿದು ಈ ಕುದು[...]ಗಳನ್ನು ಸರಿಯಾದ ದಾರಿಯಲ್ಲಿ ಓಡಿಸು[...] ಸವಾರರು.

ಕ್ಯಾಥರೀನಳು ಚಿಕ್ಕವಳಾಗಿದ್ದಾ[...] ಬೇಸಗೆಯ ದಿನಗಳಲ್ಲಿ ಲ್ಯಾಂಗ್ ಐ್ಯಾಂಕ[...] ಉಪನಗರದ ತನ್ನ ಮನೆಯ ಮುಂದಿ[...] ಹುಲ್ಲುಹಾಸಿನಲ್ಲಿ ಒರಗಿ ಆಕಾಶದಲ್ಲಿ ಗಳಿ[...]ಗಳಿಗೆಗೂ ಹೊಸ ಹೊಸ ಆಕೃತಿ ಪಡೆ[...] ತೇಲುತ್ತ ಸಾಗುವ ಬಿಳಿಯ ಮೋಡಗಳನ್ನು[...] ಕಂಡು ವಿಸ್ಮಯ ಪಡುತ್ತಿದ್ದಳು. "ನಾನ[...] ಕಾಣುತ್ತಿರುವುದು ನಿಜವೆ? ಹಾಗಿದ್ದ[...] ನಾನು ಕಣ್ಣು ಮುಚ್ಚಿದೊಡನೆ ಇವೇ[...] ಮಾಯವಾಗುತ್ತವೆ? ಆದರೆ ನಾನು ಇಚ್ಛಿ[...]ಸಿದರೆ ಕಣ್ಣು ಮುಚ್ಚಿಕೊಂಡಿದ್ದರೂ ನನ[...] ಮನಸ್ಸು ಈ ದೃಶ್ಯವನ್ನು ಮತ್ತೆ ತೋರಿಸು[...]ವುದಲ್ಲ?—ಹೀಗೇಕೆ?" ಎಂದು ಕ್ಯಾಥ[...]ರೀನಳು ತನ್ನ ವೈಯಕ್ತಿಕ ಮನೋಲೋ[...]ದಲ್ಲಿ ವಿಹರಿಸುತ್ತಿದ್ದಳು. ಆದರೆ ಶಾಲೆಯ[...] ಇಂಥ ಕಲ್ಪನೆಗಳಿಗೆ ಅವಕಾಶವಿರಲಿ[...] ಹೀಗಾಗಿ ಅವಳು ತನ್ನ ಕನಸಿ[...] ಸಾಮ್ರಾಜ್ಯದ ಕೋಟೆಯ ಬಾಗಿಲುಗಳನ್ನು[...] ಮುಚ್ಚಿ ಪಠ್ಯಕ್ರಮದಲ್ಲಿ ನಿಗದಿಪಡಿಸಿದ ಪಾ[...]ಗಳಿಗಷ್ಟೆ ತನ್ನ ಗಮನ ಹರಿಸಿದಳು.

ಕೆಲವು ವರ್ಷಗಳನಂತರ ೧೯೭೦ರ ತೂರಿಗೆ ಕ್ಯಾಥರೀನಳು ಡಬ್ಲಿನ್ ನಗರದ ನಿಟಿ ಕಾಲೇಜನ್ನು ಸೇರಿದಳು. ಅಲ್ಲಿ ದು ವರ್ಷ ಇತಿಹಾಸವನ್ನೋದಿ ಮರು ರ್ಷ ತತ್ವಶಾಸ್ತ್ರವನ್ನು ಅಧ್ಯಯನದ ಷಯವನ್ನಾಗಿ ಆರಿಸಿಕೊಂಡಳು. ಪ್ರಥಮ ದ ಉಪನ್ಯಾಸದ ತರಗತಿಯಲ್ಲಿ ಐದು ುಷಗಳನ್ನು ಕಳೆದಾಗಲೇ ಅವಳ ಕಲ್ಪನಾ ೀಕದ ಬಾಗಿಲುಗಳು ಮತ್ತೆ ತೆರೆದು ಂಡವು. ತತ್ವಶಾಸ್ತ್ರವು ಕೇವಲ ಯಸ್ಕರು ಮಾತ್ರ ಕಲಿಯುವ ವಿಷಯ ಲ್ಲ; ಅದು ಚಿಕ್ಕ ಮಕ್ಕಳನ್ನು ತಲುಪ ೀಕು ಎಂದು ಅವಳಿಗೆ ಕ್ರಮೇಣ ಅನಿಸ ಡಗಿತು. ಸಾಕ್ರೆಟೀಸನು ತನ್ನ ಹೆಚ್ಚಿನ ಮಯವನ್ನು ಮಕ್ಕಳೊಡನೆಯೇ ಕಳೆಯು ದ್ದು ಅವರಿಗೆ ತತ್ವಜ್ಞಾನದ ಪಾಠ ಹೇಳು ದ್ದನೆಂದು ಇತಿಹಾಸ ಹೇಳುತ್ತದೆ. ತಾನೂ ಂದು ದಿನ ಸಾಕ್ರೆಟೀಸನಂತೆ ತತ್ವಜ್ಞಾನದ ೀವಟಿಗೆ ಹಿಡಿದು ಸ್ಕಾಟಿಶ್ ಮಕ್ಕಳ ನಸ್ಸುಗಳನ್ನು ಬೆಳಗಬೇಕೆಂದು ಅವಳು ಂಕಲ್ಪಿಸಿದಳು.

೧೯೮೮ರಲ್ಲಿ ಕ್ಯಾಥರೀನ್‌ಗೆ ತತ್ವಶಾಸ್ತ್ರ ಲ್ಲಿ ಪಿಎಚ್. ಡಿ ಪದವಿ ದೊರಕಿತು. ನಂತರ ಅವಳು ಅಮೆರಿಕೆಗೆ ತೆರಳಿ ಅಲ್ಲಿ ಪ್ರೊಫೆಸರ್ ಮ್ಯಾಥ್ಯೂ ಲಿಪ್‌ಮ್ಯಾನ್ ಂಬ ಒಬ್ಬ ವಿಕ್ಷಿಪ್ತ ವಿದ್ವಾಂಸನೊಂದಿಗೆ ೆಲಸ ಮಾಡುವ ಅವಕಾಶ ಪಡೆದಳು. ವನು ಚಿಕ್ಕ ಮಕ್ಕಳಿಗಾಗಿ ತತ್ವಶಾಸ್ತ್ರ ನ್ನು ಕಲಿಯಲು ಒಂದು ಕಾರ್ಯಕ್ರಮ ನ್ನು ತಯಾರಿಸಿ ಅದನ್ನು ಶಾಲಾ ಪಠ್ಯ ಕ್ರಮದಲ್ಲಿ ಸೇರಿಸಬೇಕೆಂದು ಹೋರಾಡು ತ್ತಿದ್ದನು. ಕ್ಯಾಥರೀನಳು ಅಮೆರಿಕೆಗೆ ಹೋದಾಗ ಪ್ರೊ|| ಲಿಪ್ ಮ್ಯಾನ್‌ನ ಯೋಜನೆಯನ್ನು ಪ್ರಾಯೋಗಿಕವಾಗಿ ತೆಗೆದುಕೊಳ್ಳಲು ಒಪ್ಪಿಗೆ ದೊರಕಿತ್ತು.

ಈ ಯೋಜನೆಯ ಮೊದಲ ತರಗತಿ ಯನ್ನು ಪ್ರಾರಂಭಿಸುವ ದಿನ ಪ್ರೊ|| ಲಿಪ್ ಮ್ಯಾನ್ ಬೇರಾವುದೋ ಕೆಲಸದ ನಿಮಿತ್ತ ಬೇರೆಡೆಗೆ ಹೋಗಬೇಕಾಗಿ ಬಂತು. ಆದುದ ರಿಂದ ಕ್ಯಾಥರೀನಳೇ ಐದು-ಆರು ವಯಸ್ಸಿನ ಮಕ್ಕಳಿರುವ ತರಗತಿಗೆ ಹೋಗಿ ಪಾಠವನ್ನು ಪ್ರಾರಂಭಿಸಿದಳು. ಪ್ರೊ|| ಲಿಪ್‌ಮ್ಯಾನ್ ಹಿಂದಿರುಗಿದಾಗ ಕ್ಯಾಥರೀನ್‌ಗೆ ತನಗೆ ನಿಗದಿ ಯಾದ ತರಗತಿಯ ಬದಲು ಬೇರೆ ತರಗತಿಗೆ ಬಂದ ಅರಿವಾಯಿತು. ಲಿಪ್‌ಮ್ಯಾನ್‌ನ ಯೋಜನೆಯಂತ ಮಕ್ಕಳಿಗೆ ಹತ್ತನೆಯ ವಯಸ್ಸಿನಿಂದ ತತ್ವಶಾಸ್ತ್ರದ ಬೋಧನೆ ಪ್ರಾರಂಭಿಸಬೇಕೆಂದು ನಿಗದಿಯಾಗಿತ್ತು. ಆದರೆ ಆ ದಿನ ಅವನು ಕ್ಯಾಥರೀನಳ ತರಗತಿಗೆ ಬಂದಾಗ ಅವನಿಗೆ ಆಶ್ಚರ್ಯ ಕಾದಿತ್ತು. ಮಕ್ಕಳೆಲ್ಲ ತಮ್ಮ ವಿಚಾರ ಗಳನ್ನು ಅಳುಕಿಲ್ಲದೆ ಮಂಡಿಸುತ್ತಿದ್ದರು, ತರ್ಕಯುಕ್ತವಾಗಿ ಸವಾಲೆಸೆಯುತ್ತಿದ್ದರು. ಇದನ್ನು ನೋಡಿದ ಮೇಲೆ ಹತ್ತು ವರ್ಷದ ಬದಲು ಐದು ವರ್ಷ ವಯಸ್ಸಿನಿಂದಲೇ ತತ್ವಶಾಸ್ತ್ರದ ತರಗತಿ ಪ್ರಾರಂಭಿಸಬೇಕೆಂದು ನಿರ್ಧರಿಸಲಾಯಿತು.

ಐದು ವರ್ಷಗಳ ಕಾಲ ಪ್ರೊ|| ಲಿಪ್ ಮ್ಯಾನ್‌ನ ಜೊತೆಯಲ್ಲಿ ಹಲವಾರು ಪ್ರಯೋಗಗಳಲ್ಲಿ ಪಾಲ್ಗೊಂಡ ನಂತರ ೧೯೯೦ರಲ್ಲಿ ಕ್ಯಾಥರೀನಳು ಸ್ಕಾಟ್‌ಲೆಂಡಿಗೆ ಹಿಂದಿರುಗಿದಳು. ಅವಳ ಸಾಧನೆಯನ್ನು ಗಮನಿಸಿದ ಗ್ಲಾಸ್ಗೋ ವಿಶ್ವವಿದ್ಯಾಲಯ

ಅವಳು ತಯಾರಿಸಿದ ಪಠ್ಯಕ್ರಮವನ್ನಾಧರಿಸಿ ಸ್ನಾತಕೋತ್ತರ ಪದವಿಯ ಕಾರ್ಯಕ್ರಮವನ್ನು ಪ್ರಾರಂಭಿಸಿತು. ತಾತ್ವಿಕ ಜಿಜ್ಞಾಸೆಯನ್ನು ಮಕ್ಕಳಿಗೆ ತಲುಪಿಸಲು ಅವಳು ಮಾಡಿದ ಸಾಧನೆಯ ಬಗ್ಗೆ ಬಿ.ಬಿ.ಸಿ.ಯು ಕಾರ್ಯಕ್ರಮವೊಂದನ್ನು ತಯಾರಿಸಿ ಪ್ರಸಾರ ಮಾಡಿತು. ಅದರ ಫಲವಾಗಿ ಈ ಸ್ನಾತಕೋತ್ತರ ಪದವಿಗೆ ಅಮೆರಿಕಾ, ಆಸ್ಟ್ರೇಲಿಯಾ, ಇಟಲಿ, ಬಲ್ಗೇರಿಯಾ ಮತ್ತು ಪೋರ್ಚುಗಲ್ ದೇಶಗಳಿಂದ ವಿದ್ಯಾರ್ಥಿಗಳು ಬಂದು ವ್ಯಾಸಂಗ ಮಾಡುತ್ತಿದ್ದಾರೆ.

ತೀರ ಸಂಕೋಚ ಸ್ವಭಾವದ, ಎಲ್ಲರೊಡನೆ ಮಾತನಾಡಲು ಅಳುಕುವ ಅಂತರ್ಮುಖಿಯಾದ ಮಕ್ಕಳೂ ಕೂಡ ತಾತ್ವಿಕ ಜಿಜ್ಞಾಸೆಯ ಪಾಠದಿಂದ ಆತ್ಮವಿಶ್ವಾಸ ಬೆಳೆಸಿಕೊಂಡು ಅರಳುವುದನ್ನು ಕ್ಯಾಥರೀನಳು ಗಮನಿಸಿದ್ದಾಳೆ. ಈ ತಾತ್ವಿಕ ಜಿಜ್ಞಾಸೆಯ ಪಾಠಗಳಿಂದಾಗಿ ಮಕ್ಕಳು ಶಾಲೆಯ ಬೇರೆಲ್ಲಾ ವಿಷಯಗಳ ಕಲಿಕೆಯಲ್ಲೂ ಗಣನೀಯ ಪ್ರಗತಿಯನ್ನು ಸಾಧಿಸಿದ್ದಾರೆ. ಅಮೆರಿಕಾದಲ್ಲಿ ಪ್ರೊ॥ ಲಿಪ್ಮ್ಯಾನ್ ಮತ್ತು ಆತನ ತಂಡದವರು ಸುಮಾರು ನಾಲ್ಕುನೂರು ವಿದ್ಯಾರ್ಥಿಗಳನ್ನು ಅಧ್ಯಯನಕ್ಕೆ ಒಳಪಡಿಸಿ ಅವರಲ್ಲಿ ತಾತ್ವಿಕ ಜಿಜ್ಞಾಸೆಯ ಪಾಠಗಳನ್ನು ಕಲಿತ ವಿದ್ಯಾರ್ಥಿಗಳು ಒಟ್ಟಾರೆ ಓದಿನಲ್ಲಿ ಶೇ. ೬೬ ರಷ್ಟು ಹಾಗೂ ಗಣಿತದಲ್ಲಿ ಶೇ ೩೬ ರಷ್ಟು ಪ್ರಗತಿ ಸಾಧಿಸಿರುವುದಾಗಿ ಪ್ರಕಟಿಸಿದ್ದಾರೆ.

ಕ್ಯಾಥರೀನಳು ಅಮೆರಿಕಾದಲ್ಲಿದ್ದಾಗ ಮಾನಸಿಕ ಕ್ಷೋಭೆಗೊಳಗಾದ ಆಕ್ರಮಣಕಾರೀ ಮನೋವೃತ್ತಿಯ ಹಾಗೂ ಹಾಗೂ ಕ್ರಿಮಿನಲ್ ದಾಖಲೆ ಇರುವ ಹದಿಹರೆಯದ ಒಂದು ತಂಡಕ್ಕೆ ತಾತ್ವಿಕ ಜಿಜ್ಞಾಸೆಯ ಪಾಠ ಮಾಡುವ ಸವಾಲು ಒದಗಿ ಬಂದಿತ್ತು. ಅಂಥವರೂ ಐದಾರು ತಿಂಗಳ ಶಿಕ್ಷಣದನಂತರ ತಮ್ಮ ಅಭಿಪ್ರಾಯಗಳನ್ನು ಇನ್ನೊಬ್ಬರು ವಿರೋಧಿಸಿದರೆ ಅದನ್ನು ಸಹಿಸಿಕೊಳ್ಳುವ ಸ್ಥಿತಿಗೆ ಬಂದಿದ್ದರು.

ಒಮ್ಮೆ ಕ್ಯಾಥರೀನ್ ಮತ್ತು ಆಕೆಯ ವಿದ್ಯಾರ್ಥಿ ಬೆನ್ ಇಸ್ರೇಲ್ ಹತ್ತು ವರ್ಷ ವಯಸ್ಸಿನ ಮಕ್ಕಳ ಒಂದು ತರಗತಿಯಲ್ಲಿ ಪಾಲ್ಗೊಂಡಿದ್ದರು. ಬಾಹ್ಯಾಕಾಶದಲ್ಲಿ ಗುರುತ್ವಾಕರ್ಷಣ ಬಲ ಇರುವುದಿಲ್ಲವೆಂದು ಶಿಕ್ಷಕರು ವಿವರಿಸುತ್ತಿದ್ದರು. ಕೂಡಲೇ ಹಿಂದಿನ ಬೆಂಚಿನಲ್ಲಿದ್ದ ಒಬ್ಬಳು ಹುಡುಗಿ ಹೇಳಿದಳು. "ನಾನಿದನ್ನು ಒಪ್ಪುವುದಿಲ್ಲ. ಅಲ್ಲಿಯೂ ಗುರುತ್ವಾಕರ್ಷಣ ಬಲ ಇದೆ". ಆಗ ಕ್ಯಾಥರೀನ್ ಆ ಹುಡುಗಿಗೆ ಸವಾಲೆಸೆಯುತ್ತಾಳೆ. "ಅದೇನು ಅಷ್ಟೊಂದು ಖಂಡಿತವಾಗಿ ಹೇಳಬಲ್ಲೆ ? ಆ ಹುಡುಗಿ ಆತ್ಮವಿಶ್ವಾಸದಿಂದ ಹೀಗೆ ಹೇಳಿದಳು. "ಹೌದು. ಏಕೆಂದರೆ ಅಲ್ಲಿ ಗುರುತ್ವಾಕರ್ಷಣ ಬಲ ಇಲ್ಲವಾದರೆ ದೇವರನ್ನು ಅಲ್ಲಿ ಯಾರು ಹಿಡಿದಿಟ್ಟುಕೊಂಡಿದ್ದಾರೆ ?"

ಇದರಿಂದ ಪ್ರೇರಿತನಾದ ಬೆನ್ ಇಸ್ರೇಲ್ ತತ್ವಶಾಸ್ತ್ರದ ಪ್ರಪಂಚವನ್ನು ಮಕ್ಕಳಿಗೆ ಪರಿಚಯಿಸುವ ಕೈಂಕರ್ಯ ವಹಿಸಿಕೊಂಡು

ವಿಶ್ವಪರ್ಯಟನೆ ಮಾಡುತ್ತಿದ್ದಾನೆ. ಜೆಸ್ ಇಸ್ರೇಲ್‌ನ ಈ ದೀಕ್ಷೆಯನ್ನು ಕಂಡ ಕ್ಯಾಥರೀನ್ ತಾನೂ ಹಿಂದೊಂದು ದಿನ ಸಾಕ್ರೆಟೀಸ್ ನಡೆದ ಹಾದಿಯಲ್ಲೇ ಸಾಗಬೇಕೆಂದು ನಿರ್ಧಾರ ಮಾಡಿದ ಗಳಿಗೆಯನ್ನು ನೆನೆದುಕೊಂಡು ಹೆಮ್ಮೆಪಡುತ್ತಾಳೆ.



ಮರವಿದ್ದು ಫಲವೇನು ? ನೆಳಲಿಲ್ಲದನ್ನಕ್ಕ ಧನವಿದ್ದು ಫಲವೇನು ? ದಯವಿಲ್ಲದನ್ನಕ್ಕ ಹಸುವಿದ್ದು ಫಲವೇನು ? ಹಡವಿಲ್ಲದನ್ನಕ್ಕ ರೂಹಿದ್ದು ಫಲವೇನು ? ಗುಣವಿಲ್ಲದನ್ನಕ್ಕ ಅಗಲಿದ್ದು ಫಲವೇನು ? ಮಾನವಿಲ್ಲದನ್ನಕ್ಕ ನಾನಿದ್ದು ಫಲವೇನು ? ನಿಮ್ಮ ಜ್ಞಾನವಿಲ್ಲವನ್ನಕ್ಕ ಚೆನ್ನಮಲ್ಲಿಕಾರ್ಜುನಾ ?

—ಮಹಾದೇವಿಯಕ್ಕ

ನಾನು ನನ್ನದು, ಎಂಬ ಅಭಿಮಾನ ಬಿಡಿರಿ. ಮಾಡಬೇಕಾದ್ದನ್ನು ಕರ್ತವ್ಯ ದೃಷ್ಟಿಯಿಂದಲೂ ಶ್ರದ್ಧೆಯಿಂದಲೂ ಮಾಡಿ ಮುಗಿಸಿರಿ. ಆದರ ಫಲಾಫಲಗಳ ಕಡೆ ಗಮನ ಬೇಡ.

—ಪರಮಹಂಸ

ಗ್ರಂಥಾಲಯ ವಿಜ್ಞಾನದ ಪಿತಾಮಹ: ಡಾ|| ಎಸ್. ಆರ್. ರಂಗನಾಥನ್

ಎಚ್. ಆರ್. ಸುಂದರೇಶನ್
೭೦೩, ಮೊದಲನೆ ಮಹಡಿ
೧೭ ನೇ ಮೇನ್, ಸರ್ವತೀಪುರ
ಮೈಸೂರು–೫೭೦ ೦೦೯

ನವೆಂಬರ್ ೧೪ ರಾಷ್ಟ್ರೀಯ ಗ್ರಂಥಾಲಯ ದಿನ. ಆದ್ದರಿಂದ ನವೆಂಬರ್ ೧೪ ರಿಂದ ೨೦ ರವರೆಗೆ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಆಚರಿಸಲಾಗುತ್ತದೆ. ಇದೇ ೧೪ ರಂದು ದಿವಂಗತ ಪಂಡಿತ ಜವಾಹರ್‌ಲಾಲ್ ನೆಹರೂರವರ ಜನ್ಮದಿನ. ಅರ್ಥಾತ್ ಮಕ್ಕಳ ದಿನಾಚರಣೆಯೂ ಹೌದು. ಉತ್ತಮ ಗ್ರಂಥಗಳು ನಾಡಿನ ಸಂಸ್ಕೃತಿಯ ಪ್ರತೀಕವೆಂದು ನೆಹರೂ ವರ್ಣಿಸಿದ್ದಾರೆ. ಈ ಹಿನ್ನಲೆಯಲ್ಲಿ ಗ್ರಂಥಾಲಯ ವಿಜ್ಞಾನದ ಪಿತಾಮಹ ಡಾ|| ಎಸ್. ಆರ್. ರಂಗನಾಥನ್ ಅವರ ಸ್ಮರಣೆಗಾಗಿ ಈ ಲೇಖನ:

ಉತ್ತಮ ಗ್ರಂಥಗಳು ಜ್ಞಾನದ ಬೆಳಕಿನ ಕಿಂಡಿಗಳು. ಉತ್ತಮ ಗ್ರಂಥಗಳು ಅಂತ ರಂಗದ ಮಿತ್ರರಿದ್ದಂತೆ. ಉತ್ತಮ ಗ್ರಂಥಗಳು ಜ್ಞಾನದ ಮತ್ತೇರಿಸುತ್ತವೆ. ಇದು ಅನುಭವದ ಮಾತು. ಹತ್ತು ಹಲವಾರು ವಿಷಯಗಳಿಗೆ ಸಂಬಂಧಪಟ್ಟ ಗ್ರಂಥಗಳು ಸಾವಿರಾರು. ಎಲ್ಲ ಗ್ರಂಥಗಳೂ ಎಲ್ಲರ ಕೊಳ್ಳುವಿಕೆಗೆ ನಿಲುಕದವು. ಈ ದಿಸೆಯಲ್ಲಿ ಗ್ರಂಥಾಲಯಗಳ ಪಾತ್ರ ಅನನ್ಯ. ವಿವಿಧ ಗ್ರಂಥಗಳನ್ನು ಶೇಖರಿಸಿ ಸುವ್ಯವಸ್ಥಿತಗೊಳಿಸಿ, ಓದುಗರಿಗೆ ಅವರವರ ಅಭಿರುಚಿಗೆ ತಕ್ಕ ಗ್ರಂಥಗಳ ಅಧ್ಯಯನದ ಸೌಲಭ್ಯ ಒದಗಿಸುತ್ತದೆ. ಗ್ರಂಥಾಲಯಗಳು ಪುಸ್ತಕಗಳ ಪ್ರಪಂಚ. ಆಧುನಿಕ ಪ್ರಪಂಚದಲ್ಲಿ ಗ್ರಂಥಾಲಯಗಳಿಗೆ, ಇಂದಿನ ಈ ಮಹತ್ವದ ಸ್ಥಾನ ದೊರಕಿಸಿಕೊಟ್ಟವರು ದಿವಂಗತ ಡಾ|| ಎಸ್. ಆರ್. ರಂಗನಾಥನ್.

ಗ್ರಂಥಾಲಯ ವಿಜ್ಞಾನ ಚಳುವಳಿಯ ಪಿತಾಮಹನೆನಿಸಿದ ರಂಗನಾಥನ್ ಈ ಕೀರ್ತಿಗೆ ಪಾತ್ರರು. ಅದುವರೆಗೂ ಯಾರೂ ಸಂಶೋಧಿಸದ ಕ್ಷೇತ್ರಕ್ಕೆ ಕಾಲಿಡುವ ಸಾಹಸ–ಗ್ರಂಥಪಾಲಕರಿಗೆ ತರಬೇತಿ ನೀಡುವ ಕಾರ್ಯಕ್ರಮ. ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಗ್ರಂಥಾಲಯಗಳಿಗೆ ಹೊಸರೂಪ ಕೊಟ್ಟುದೇ ಅಲ್ಲದೆ ಉಚ್ಛ

ಮೂಲ: **ಪ್ರೊ|| ಕೆ. ವೆಂಕಟರೆಡ್ಡಿ ಅವರ 'ಹಿ ಪುಟ್ ದಿ ಬುಕ್ಸ್ ಇನ್ ಆರ್ಡರ್' ಲೇಖನ**

ಶಿಕ್ಷಣ ಸಂಸ್ಥೆಗಳಲ್ಲೂ ಗ್ರಂಥಾಲಯ ವಿಜ್ಞಾನದ ಅಧ್ಯಯನಕ್ಕೆ ಬುನಾದಿ ಹಾಕಿದರು. ಇವರು ರೂಪಿಸಿದ ತಂತ್ರಗಳು ಈ ಕ್ಷೇತ್ರಕ್ಕೆ ಮಾರ್ಗಸೂಚಿಗಳಾದವು.

ರಂಗನಾಥನ್ ಹುಟ್ಟಿದ್ದು ೧೮೯೨ರ ಆಗಸ್ಟ್ ೯ರಂದು ತಮಿಳುನಾಡಿನ ತಂಜಾವೂರು ಜಿಲ್ಲೆಯ ಶಿಯಾಲಿಯಲ್ಲಿ. ಗಣಿತಶಾಸ್ತ್ರದಲ್ಲಿ ಎಂ. ಎ. ಪದವಿ ಪಡೆದು ಅನಂತರ ಮದರಾಸು ವಿಶ್ವವಿದ್ಯಾಲಯದಲ್ಲಿ ಕೆಲಸ ಪ್ರಾರಂಭ. ೧೯೨೪ರಲ್ಲಿ ಮೊದಲ ಗ್ರಂಥಾಲಯ ಪಾಲಕರಾಗಿ, ಮುಂದಿನ ೨೦ ವರ್ಷಗಳವರೆಗೂ ಅಲ್ಲಿಯೇ ವೃತ್ತಿ ಜೀವನ. ಕ್ರಾಯ್ಡನ್ ಪಬ್ಲಿಕ್ ಲೈಬ್ರರಿಯ ಹೆಸರಾಂತ ಗ್ರಂಥಪಾಲಕ ಡಬ್ಲ್ಯೂ. ಸಿ. ಬೆರ್ವಿಕ್ ಸೇಯರ್ಸ್ ಹಾಗೂ ಇತರರಿಂದ ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ಪಡೆಯಲು ಇಂಗ್ಲೆಂಡಿಗೆ ಪ್ರಯಾಣ. ಗ್ರಂಥಾಲಯ ಚಳವಳಿಯ ಇತಿಹಾಸದಲ್ಲೇ ಅದೊಂದು ತಿರುವು. ೧೯೨೪ರಲ್ಲಿ ಕ್ರಾಯ್ಡನ್‌ನಿಂದ ಹಿಂತಿರುಗಿದ ರಂಗನಾಥನ್ ರಿಂದ ಮದರಾಸ್ ಲೈಬ್ರರಿ ಅಸೋಸಿ-ಯೇಷನ್‌ನ ಸ್ಥಾಪನೆ. ೧೯೨೯ರಲ್ಲಿ ಲೈಬ್ರರಿ ಸೈನ್ಸ್ ಶಾಲೆಯನ್ನು ಮೊಟ್ಟ ಮೊದಲು ಪ್ರಾರಂಭಿಸಿದವರೇ ರಂಗನಾಥನ್. ೧೯೩೦ರಲ್ಲಿ 'ಮಾಡೆಲ್ ಲೈಬ್ರರಿ ಆಕ್ಟ್' ಹಾಗೂ ೧೯೩೧ರಲ್ಲಿ ಬಂಗಾಳ ರಾಜ್ಯದ ಮೊದಲ ಲೈಬ್ರರಿ ಬಿಲ್ ಅನ್ನು ರೂಪಿಸಿದರು. '೧೯೩೩ರಲ್ಲಿ ಪ್ರಾರಂಭವಾದ ಇಂಡಿಯನ್ ಲೈಬ್ರರಿ ಅಸೋಸಿಯೇಷನ್ನಿನ ಶಾಸನದ ಕರಡನ್ನು ತಯಾರಿಸಿದರು. ರಂಗನಾಥನ್ನರ ಅತ್ಯುತ್ತಮ ಕೆಲಸ ದೆಹಲಿ ವಿಶ್ವ ವಿದ್ಯಾಲಯದ ಕುಲಪತಿಗಳೂ ಭಾರತದ ಮುಖ್ಯ ನ್ಯಾಯಾಧೀಶರೂ ಆಗಿದ್ದ ಸರ್ ಮಾರಿಸ್‌ಗ್ವೈರ್ ಅವರನ್ನು ಆಕರ್ಷಿಸಿತು. ದೆಹಲಿ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುವಂತೆ ಗ್ವೈರ್ ಅವರು ರಂಗನಾಥ್ ರನ್ನು ಆಹ್ವಾನಿಸಿದರು. ಲೈಬ್ರರಿ ಸೈನ್ಸ್ ವಿಭಾಗದಲ್ಲಿ ಬಿ. ಲಿಬ್‌ಸೈನ್ಸ್ ಹಾಗೂ ಎಂ. ಲಿಬ್‌ಸೈನ್ಸ್‌ಗಳ ಅಭ್ಯಾಸಕ್ಕೆ ಮಾತ್ರ ವಲ್ಲದೆ, ಆ ವಿಷಯದಲ್ಲಿ ಪಿಎಚ್. ಡಿ. ಪದವಿಗಾಗಿ ೧೯೪೮ರಲ್ಲಿ ಶಿಕ್ಷಣ ಸೌಲಭ್ಯ ವನ್ನು ಒದಗಿಸಿದರು.

೧೯೪೮ರಲ್ಲಿ ಯುರೋಪಿಗೆ ಭೇಟಿ ನೀಡಿದ ರಂಗನಾಥನ್ ವಿವಿಧ ಗ್ರಂಥಾಲಯ ಗಳಲ್ಲಿ ಉಪನ್ಯಾಸ ನೀಡಿದರು. ಹಲವಾರು ವಿಶ್ವವಿದ್ಯಾಲಯಗಳಲ್ಲಿ ಗ್ರಂಥಾಲಯ ವಿಜ್ಞಾನದ ಬಗ್ಗೆ ಸಲಹೆ ನೀಡಿದರು. ಫೆಡರೇಷನ್ ಆಫ್ ಇಂಟರ್ ನ್ಯಾಷನಲ್ ಸ್ಟಾಂಡರ್ಡ್ಸ್ ಆರ್ಗನೈಸೇಷನ್ ಹಾಗೂ ಹೇಗ್‌ನ ಇಂಟರ್ ನ್ಯಾಷನಲ್ ಸ್ಟಾಂಡರ್ಡ್ಸ್ ಆರ್ಗನೈಸೇಷನ್ ಟೆಕ್ನಿಕಲ್ ಕಮಿಟಿಯ ಸಭೆಗಳಲ್ಲಿ ಹಾಜರಿದ್ದು, ಯುನೆಸ್ಕೋದ ಸಹಯೋಗದೊಂದಿಗೆ ೧೯೫೨ರಲ್ಲಿ ಇಂಡಿಯನ್ ನ್ಯಾಷನಲ್ ಸೈಂಟಿಫಿಕ್ ಡಾಕ್ಯುಮೆಂಟೇಷನ್ ಸೆಂಟರ್ ಸ್ಥಾಪನೆಗೆ ನೆರವಾದರು.

ರಂಗನಾಥನ್ನರ ಖ್ಯಾತಿ ದೂರ ದೂರಕ್ಕೆ ಹಬ್ಬಿತು. ಪ್ರಪಂಚದಾದ್ಯಂತ ಬೇರೆ ಬೇರೆ ಲೈಬ್ರರಿ ಸಂಸ್ಥೆಗಳು, ಇವರ ಸಲಹೆ ಹಾಗೂ ಮಾರ್ಗದರ್ಶನವನ್ನು ಅಪೇಕ್ಷಿಸಿದವು. ೧೯೫೩–೫೬ ಹಾಗೂ ೧೯೫೯–೬೧ರ ಅವಧಿಗೆ 'ಇಂಟರ್‌ನ್ಯಾಷನಲ್ ಫೆಡರೇಶನ್ ಆಫ್ 'ಡಾಕ್ಯುಮೆಂಟೇಶನ್''ನ ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. 'ಬ್ರಿಟನ್ನಿನ ಲೈಬ್ರರಿ ಅಸೋಸಿಯೇಷನ್ನಿನ ಗೌರವ ಉಪಾಧ್ಯಕ್ಷರಾದರು. ೧೯೫೭ ರಲ್ಲಿ ಅಮೆರಿಕಾ, ಕೆನಡ, ಜಪಾನ್ ಮುಂತಾದ ವಿಶ್ವವಿದ್ಯಾಲಯಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಭೇಟಿ ನೀಡಿದರು. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (ಯು.ಜಿ.ಸಿ)ಲೈಬ್ರರಿ ಕಮಿಟಿಯ ಮೊದಲ ಅಧ್ಯಕ್ಷರಾಗಿ ದೇಶದ ವಿಶ್ವವಿದ್ಯಾಲಯ ಹಾಗೂ ಕಾಲೇಜು ಲೈಬ್ರರಿಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಗ್ರಂಥಗಳ ವರ್ಗೀಕರಣ, ಪುಸ್ತಕಗಳ ಪಟ್ಟಿ ರಚನೆ, ಲೈಬ್ರರಿಗಳಿಗೆ ಅವಶ್ಯಕವಾದ ಸಾಮಗ್ರಿಗಳು, ಪೀಠೋಪಕರಣಗಳು ಮುಂತಾಗಿ ಪ್ರತಿ ವಿಷಯಕ್ಕೂ ಕೊಟ್ಟ ಅವರ ಸಲಹೆಗಳು, ಮುಂದೆ ಗ್ರಂಥಾಲಯ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಮಾರ್ಗ ಸೂಚಿಗಳಾದವು.

ರಂಗನಾಥನ್ನರ ಸಾಮರ್ಥ್ಯ, ಮೇಧಾವಿತನ, ಪಾಂಡಿತ್ಯ ಬೆರಗು ಹುಟ್ಟಿಸುವಂಥದು. ೧೯೩೧ರಲ್ಲಿ ಗ್ರಂಥಾಲಯ ವಿಜ್ಞಾನದ ಬಗ್ಗೆ ಅವರು ಪ್ರಕಟಿಸಿದ 'ಪಂಚಸೂತ್ರಗಳು' ಗ್ರಂಥಪಾಲಕ ಮೋಹಿಂದರ್‌ಸಿಂಗ್ ಹೇಳುವಂತೆ, ನ್ಯೂಟನ್ನನ ಚಲನೆಯ ಮೂರು ನಿಯಮಗಳಂತೆ ಗ್ರಂಥಾಲಯ ಪ್ರಪಂಚದಲ್ಲೇ ಕ್ರಾಂತಿ ತಂದಿತು. ಗ್ರಂಥಾಲಯ ವಿಜ್ಞಾನವೂ ಪೂರ್ಣ ಪ್ರಮಾಣದ ಒಂದು ಸಮಾಜ ವಿಜ್ಞಾನವೆಂದೇ ಪರಿಗಣಿಸಲ್ಪಟ್ಟಿತು. ಅವರ ಪಂಚಸೂತ್ರಗಳು ಸರ್ವಕಾಲಿಕವೆನಿಸಿ, ಭಾರತವಲ್ಲದೆ ಪ್ರಪಂಚಾದ್ಯಂತ ಮನ್ನಣೆ ಪಡೆದವು.

ಹೊಸ ಹೊಸ ವಿಷಯಗಳ ಬಗೆ ಅವರದು ಸ್ವತಂತ್ರ ಆಲೋಚನೆ. ಗ್ರಂಥಾಲಯಗಳ ಬಗ್ಗೆ ವೈಜ್ಞಾನಿಕ ಮೇಲ್ವಿಚಾರಣೆಯ ಅಗತ್ಯವನ್ನು ಮನಗಂಡರು. ಅವರು ಸೂಚಿಸಿದ ಕಾರ್ಯ ವಿಶ್ಲೇಷಣೆ, ಖರ್ಚುವೆಚ್ಚಗಳ ಅಂದಾಜು, ಮೇಲ್ವಿಚಾರಕರ ಸಹಭಾಗಿತ್ವ, ಅಂಕಿಸಂಖ್ಯೆಗಳ ತಂತ್ರ ಪ್ರತಿಯೊಂದನ್ನು ಇಂದಿನ ಗ್ರಂಥಾಲಯ ವಿಜ್ಞಾನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ರಂಗನಾಥನ್ ಗ್ರಂಥಾಲಯ ವಿಭಾಗದಲ್ಲಿ ಹೊಸ ಹೊಸ ಬದಲಾವಣೆಗಳನ್ನು ತಂದರು. ಮೂರು ಕಾರ್ಡುಗಳ ಪದ್ಧತಿ, ಶುಲ್ಕ ವಿಧಿಸುವ ರೀತಿ, ಎಲ್ಲವನ್ನೂ ಭಾರತೀಯ ಗ್ರಂಥಾಲಯಗಳ

ಸರಿಹೊಂದುವಂತೆ ಏರ್ಪಡಿಸಲಾಯಿತು. ಗ್ರಂಥಾಲಯ ಕಾರ್ಯಕರ್ತರಿಗೆ ತಯಾರಿಸಿದ ಸೂತ್ರ ಇಂದಿಗೂ ಗುಣಮಟ್ಟ ಕಾಯ್ದುಕೊಂಡಿದೆ. ಜನಬಲ, ಧನಬಲ ಇಲ್ಲದ ಕಾಲದಲ್ಲಿ ಏಕಾಂಗಿಯಾಗೇ ತಮ್ಮ ಗುರಿ ಮುಟ್ಟಿದವರು ರಂಗನಾಥನ್. ಗ್ರಂಥಾಲಯಗಳಲ್ಲಿ ಕಂಪ್ಯೂಟರ್ ಬಳಕೆಗೆ ಉತ್ತಮ ಭವಿಷ್ಯವಿರುವುದನ್ನು ಆಗಲೇ ಮನಗಂಡಿದ್ದು ಕಂಪ್ಯೂಟರ್‌ಗಳ ಬಳಕೆಯನ್ನು ಪ್ರೋತ್ಸಾಹಿಸಿದರು. ಅವರ ಭವಿಷ್ಯ ನಿಜವಾಯಿತು. ಸಮಾಚಾರ ಹಾಗೂ ಗ್ರಂಥಾಲಯ ಇಲಾಖೆಗಳಿಗೆ, ಅದರಲ್ಲೂ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಂಪ್ಯೂಟರ್ ಲಗ್ಗೆ ಹಾಕಿವೆ. ಪರಾಮರ್ಶಕ ಲೈಬ್ರರಿಗಳಲ್ಲದೆ, ಪುಸ್ತಕ ಸೂಚಿಗಳು ಹೊಸ ಗ್ರಂಥಗಳ ಕೊಳ್ಳುವಿಕೆ, ಚಲಾವಣೆ ಹಾಗೂ ಅಂತರ ಗ್ರಂಥಾಲಯಗಳಿಂದ ಎರವಲು ಪಡೆಯುವಿಕೆ, ಮುಂತಾದ ಎಲ್ಲಾ ವಿಭಾಗಗಳಲ್ಲೂ ಕಂಪ್ಯೂಟರ್‌ಗಳ ಬಳಕೆಯಾಗುತ್ತಿದೆ.

ರಂಗನಾಥನ್ ತಮ್ಮ ಉತ್ತಮ ಮಾರ್ಗದರ್ಶನ, ಪ್ರಾಮಾಣಿಕ ಪ್ರಯತ್ನಗಳಿಂದ ಗ್ರಂಥಪಾಲಕರ ಕಾರ್ಯವನ್ನು ಬಯಸಿ ಬರುವಂಥ ಒಂದು ಉದ್ಯೋಗವನ್ನಾಗಿ ರೂಪಿಸಿದರು. "ಪರಾಮರ್ಶನ ವಿಭಾಗದಲ್ಲಿ ಓದುಗರಿಗೆ ಸಹಾಯ ಮಾಡುವುದೇ ಉತ್ತಮ ಗ್ರಂಥಪಾಲಕನ ಕರ್ತವ್ಯ ಹಾಗೂ ಇದು ಎಲ್ಲ ಗ್ರಂಥಾಲಯಗಳ ಮುಖ್ಯ ಉದ್ದೇಶವೂ ಆಗಬೇಕು. ಓದುಗರ ಬೇಡಿಕೆಗಳನ್ನು ಪೂರೈಸಲು ದಿನದ ೨೪ ಘಂಟೆಗಳೂ ಗ್ರಂಥಾಲಯಗಳು ತೆರೆದಿರಬೇಕು. ಕಾಲೋಚಿತಸಾದ ಅತ್ಯುತ್ತಮ ಆಧಾರ ಗ್ರಂಥಗಳು ಗ್ರಂಥಾಲಯದಲ್ಲಿ ಸಿಗುವಂತಿರಬೇಕು. ಇವುಗಳನ್ನು ಓದುಗರಿಗೆ ಒದಗಿಸಿ ಕೊಡಲು ಗ್ರಂಥಪಾಲಕರು ಸಾಕಷ್ಟು ಪರಿಣತಿ ಹೊಂದಿದವರಾಗಬೇಕು. ಚಿಕ್ಕಂದಿನಿಂದಲೇ ಆಧಾರಗ್ರಂಥಗಳನ್ನು ಪಯೋಗಿಸಿ ಕಲಿಯುವುದು ಮಕ್ಕಳ ವಿದ್ಯಾಭ್ಯಾಸದ ಒಂದು ಅಂಗವಾಗಿರಬೇಕು" ಎನ್ನುವುದು ರಂಗನಾಥನ್ ಅವರ ಅಭಿಪ್ರಾಯ.

ಯಾವುದೇ ಗ್ರಂಥಾಲಯದ ಲಕ್ಷಾಂತರ ಪುಸ್ತಕಗಳು ಹಾಗೂ ಅದಕ್ಕೆ ಸಂಬಂಧಪಟ್ಟ ವಹಿವಾಟುಗಳು ವ್ಯವಸ್ಥಿತ ರೀತಿಯಲ್ಲಿ ನಡೆಯುವುದೆಂದರೆ ಅದೊಂದು ಸವಾಡವೇ ಸರಿ. ಈ ಸವಾಲನ್ನು ದೃಢತೆಯಿಂದ ಎದುರಿಸಿದರು ರಂಗನಾಥನ್. ಗ್ರಂಥಾಲಯ ವಿಜ್ಞಾನಕ್ಕೆ ೧೯೩೩ರಲ್ಲಿ ಪ್ರಕಟಿತವಾದ ಅವರ 'ಕೋಲರ್ ವರ್ಗೀಕರಣ' ಅಪೂರ್ವ ಕೊಡುಗೆ. ವಿದೇಶೀ ಗ್ರಂಥಾಲಯಗಳಲ್ಲೂ ಈ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ೫೦ ವರ್ಷಗಳ ಅವರ ದೀರ್ಘ ಸೇವಾವಧಿಯಲ್ಲಿ ೬೦ಕ್ಕೂ ಹೆಚ್ಚು ಪುಸ್ತಕಗಳನ್ನು, ೨೦೦೦ಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ಅನೇಕ ನಿಯತಕಾಲಿಕೆಗಳ ಪ್ರಾರಂಭಕ್ಕೂ ಅವರೇ ಕಾರಣಕರ್ತರು.

ಅವರು ನಮೂದಿಸಿದ ಚೈನ್-ಇಂಡೆಕ್ಸಿಂಗ್ ಪದ್ಧತಿ ಬ್ರಿಟಿಷ್ ಗ್ರಂಥಾಲಯಗಳಲ್ಲಿ ಬಳಕೆಗೆ ಬಂತು. 'ವರ್ಗೀಕರಣ' ಅವರ ಮೆಚ್ಚಿನ ವಿಷಯ. ಕೆ.ಜಿ.ಬಿ. ಬೇಕ್‌ವೆಲ್‌ರ ಪ್ರಕಾರ ರಂಗನಾಥನ್‌ರ ಈ ಶತಮಾನದ ಸೂಚಿಪಟ್ಟಿಯ ಆಲೋಚನೆಗೇ ಒಂದು ಅಪೂರ್ವ ಕೊಡುಗೆ. (ವರ್ಗೀಕರಣ ಸಿದ್ಧಾಂತ).

ಗ್ರಂಥಾಲಯಗಳ ಬಗೆಗಿನ ರಂಗನಾಥನ್‌ರ ಪದ್ಧತಿಗಳು, ಅಭಿಪ್ರಾಯಗಳು ೧೯೬೦ರಿಂದಲೇ ಇಂಗ್ಲೆಂಡಿನಲ್ಲೂ ಕೂಡ ಬಳಕೆಗೆ ಬಂದವು. ಯೂರೋಪ್ ಖಂಡಕ್ಕೂ ಆ ಅಭಿಪ್ರಾಯಗಳು ಬೇಗನೇ ಹರಡಿದವು. ಅಲ್ಲಿಂದ ಅಮೆರಿಕಕ್ಕೆ ಯಾವುದೇ ಭೌಗೋಳಿಕ ಮಿತಿಗೆ ಒಳಪಡದ ಅವರ ಕಾರ್ಯಗಳು ವಿಶ್ವಮಾನ್ಯತೆ ಪಡೆದವು. ಅಂತಾರಾಷ್ಟ್ರೀಯ ಗ್ರಂಥಾಲಯಗಳ ಬೆಳವಣಿಗೆಯಲ್ಲಿ ಇವರ ಪಾತ್ರ ಮಹತ್ತರವಾದುದು.

ದೇಶದ ಗ್ರಂಥಾಲಯಗಳಿಗೆ ಇವರು ಸಲ್ಲಿಸಿದ ಸೇವೆಗಾಗಿ ಗೌರವ ಪದವಿಗಳು ಹಿಂಬಾಲಿಸಿದುವು. ೧೯೫೭ರಲ್ಲಿ ಭಾರತ ಸರ್ಕಾರ ಪದ್ಮಶ್ರೀ ಬಿರುದು ನೀಡಿ ಸನ್ಮಾನಿಸಿತು. ಅಮೆರಿಕನ್ ಗ್ರಂಥಾಲಯ ಸಂಘ ೧೯೭೦ರಲ್ಲಿ ಪ್ರಶಸ್ತಿಫಲಕ ನೀಡಿ ಗೌರವಿಸಿತು. ಪೆನ್ಸಿಲ್ವೇನಿಯಾದ ಪಿಟ್ಸ್‌ಬರ್ಗ್ ವಿದ್ಯಾನಿಲಯ ೧೯೬೫ರಲ್ಲಿ ಡಿ.ಲಿಟ್ ಪದವಿ ಪ್ರದಾನ ಮಾಡಿತು. ಗ್ರಂಥಾಲಯ ವಿಜ್ಞಾನದ ಆಜೀವ ರಾಷ್ಟ್ರೀಯ "ಸಂಶೋಧನಾ ಪ್ರಾಧ್ಯಾಪಕ" ಎಂದು ಭಾರತ ಸರ್ಕಾರ ರಂಗನಾಥನ್‌ರನ್ನು ನಿಯುಕ್ತಗೊಳಿಸಿತು. ಭಾರತೀಯರ ಗ್ರಂಥಾಲಯ ವಿಭಾಗ ೧೯೬೨ರಲ್ಲಿ ಇವರ ಗೌರವಾರ್ಥ ವಿಶೇಷ ಸಂಚಿಕೆಯೊಂದನ್ನು ಬಿಡುಗಡೆ ಮಾಡಿ ಗೌರವಿಸಿತು. ಮದರಾಸು ವಿಶ್ವವಿದ್ಯಾನಿಲಯದಲ್ಲಿ 'ಶಾರದಾ ರಂಗನಾಥನ್ ಗ್ರಂಥಾಲಯ ವಿಜ್ಞಾನ ಪೀಠ' ರಂಗನಾಥನ್ ಅವರ ಒಂದು ಲಕ್ಷ ರೂಪಾಯಿಗಳ ದೇಣಿಗೆಯೊಂದಿಗೆ ಸ್ಥಾಪಿತವಾಯಿತು. ಇದು ಕಾಮನ್‌ವೆಲ್ತ್ ರಾಷ್ಟ್ರಗಳಲ್ಲೇ ಮೊದಲ ಪೂರ್ಣಾವಧಿಯ ಗ್ರಂಥಾಲಯ ವಿಭಾಗವೆಂದು ಹೆಸರಾಯ್ತು.

ಗ್ರಂಥಾಲಯಕ್ಕೆ ತಮ್ಮ ತನು ಮನ ಧನವನ್ನರ್ಪಿಸಿದ ಮೇಧಾವಿ ರಂಗನಾಥನ್ ಅವರು ೨೭–೯–೧೯೭೨ರಲ್ಲಿ ನಿಧನರಾದರು.

———

ನಿನ್ನ ಸ್ವಾರ್ಥ ನಿನ್ನನ್ನು ಎಲ್ಲಿಗೇ ಎಳೆದುಕೊಂಡು ಹೋಗಲಿ, ನಿನ್ನ ಜೊತೆ ಇತರರೂ ಬದುಕಿಕೊಂಡಿದ್ದಾರೆಂಬುದನ್ನು, ಅವರು ಬದುಕುವ ಆಸೆಯನ್ನು ಹೊಂದಿರುವುದನ್ನು ಸ್ವಲ್ಪ ಗಮನಿಸುತ್ತಿರು.

—ಅರವಿಂದರು

ಪುಸ್ತಕ ಪರಿಚಯ

ಮಾನಸಿ–ಮಾನಸ, ಲೇಖಕಿ ಡಾ॥ ಚಂದ್ರಮತಿ ಸೋಂದಾ, ಪ್ರಕಾಶಕರು : ಚಿಂತನ ಪ್ರಕಾಶನ ೫೫೧/ಎಸ್, ೨೪ ನೇ ಅಡ್ಡರಸ್ತೆ, ಹೆಬ್ಬಾಳ ಎರಡನೇ ಹಂತ, ಹಿನಕಲ್, ಮೈಸೂರು ೫೭೦೦೧೭, ಪುಟಗಳು XII+೧೨೨ ಬೆಲೆ ರೂ. ೨೦–೦೦

ವಿವಿಧ ಸಂದರ್ಭಗಳಿಗೆಂದು ಬರೆಯಲಾದ ಹತ್ತು ಲೇಖನಗಳ ಸಂಕಲನ. ವಿಷಯಗಳೂ ವಿಭಿನ್ನ.

ಎಂ. ಕೆ. ಇಂದಿರಾ—ಒಂದು ಪರಿಚಯ: ಈ ಲೇಖನದ ತಲೆ ಬರಹಕ್ಕೂ ಲೇಖನಕ್ಕೂ ಹೊಂದಿಕೆಯಾಗುವುದಿಲ್ಲ. ಇದರಲ್ಲಿ ಇಂದಿರಾ ಅವರ ಕಾದಂಬರಿ, ಕತೆಗಳ ಬಗ್ಗೆ ವಿಮರ್ಶೆಯೇ ಮುಖ್ಯವಾಗಿದೆ. ಇದಕ್ಕೆ ಎಂ. ಕೆ. ಇಂದಿರಾ : ಕತೆ ಕಾದಂಬರಿಗಳ ಸ್ಥೂಲ ಪರಿಚಯ ಎಂಬ ಶೀರ್ಷಿಕೆ ಉಚಿತವಾದೀತು. ಒಟ್ಟು ಬರಹ ಅಷ್ಟೇನೂ ಕುತೂಹಲಕಾರಿಯಲ್ಲ; ಕೇವಲ ವರದಿಯಂತಿದೆ.

ವಾಣಿ : ಒಂದು ಸಾಹಿತ್ಯಿಕ ಪರಿಚಯ. ಇದರಲ್ಲಿ ಲೇಖಕಿ ವಾಣಿಯವರ ೧೨ ಕೃತಿಗಳನ್ನು ಅಭ್ಯಸಿಸಿ ಇವರ ಕತೆ ಕಾದಂಬರಿಗಳ ಗುಣದೋಷಗಳ ಪರಿಶೀಲನೆ ಮಾಡಿದ್ದಾರೆ. ಮೌಲ್ಯ ಪ್ರಧಾನವಾಗಿದೆ.

ಜಯಲಕ್ಷ್ಮಿಯವರ — ಕಥನಲೋಕ : ಒಂದು ಅವಲೋಕನ. ಜಯಲಕ್ಷ್ಮಿ ಐತಿಹಾಸಿಕ ಕಾದಂಬರಿಯ ರಚನಕಾರರು. ಮಹಿಳೆಯರನೇಕರು ಕಾದಂಬರಿ ರಚಿಸಿದ್ದಾರೆ. ಆದರೆ ಐತಿಹಾಸಿಕ ಕಾದಂಬರಿ ಕ್ಷೇತ್ರಕ್ಕೆ ಸಿ. ಎನ್. ಜಯಲಕ್ಷ್ಮಿಯವರು ಮಾತ್ರ ಕೈಹಾಕಿದ್ದು ಕಂಡುಬರುತ್ತದೆ. ಚಂದ್ರಮತಿಯವರು ಜಯಲಕ್ಷ್ಮಿಯವರ ಐತಿಹಾಸಿಕ ಕಾದಂಬರಿಯ ಬಗ್ಗೆ ಆಳವಾದ ಅಧ್ಯಯನ ಕೈಗೊಂಡು ಅವರ 'ಶಪ್ತವಾಪಿ' ಮತ್ತು 'ಗಂಗರಸ ದುರ್ವಿನೀತ' ಎಂಬ ಎರಡು ಕೃತಿಗಳನ್ನು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ವಾಚಕ ಆ ಕಾದಂಬರಿಯನ್ನು

ಓದದೇ ಈ ವಿಮರ್ಶಾಲೇಖನವನ್ನು ಓದಿದರೂ ಅರ್ಥವಾಗುವಂತೆ ಬರೆದಿದ್ದಾರೆ. ಗಂಗರಸ ದುರ್ವಿನೀತ ಕಾದಂಬರಿ ೫೧೩ ಪುಟಗಳ ಬೃಹತ್ ಗಾತ್ರದ್ದು. ಜಯಲಕ್ಷ್ಮಿಯವರು ಐತಿಹಾಸಿಕ ಕಾದಂಬರಿಗಳಲ್ಲದೆ ಎರಡು ಕಥಾ ಸಂಕಲನಗಳನ್ನೂ ಹೊರ ತಂದಿದ್ದಾರೆ. ಆ ಸಂಕಲನಗಳ ಪ್ರತಿಯೊಂದು ಕತೆಯ ತಿರುಳನ್ನು ಈ ಲೇಖನದಲ್ಲಿ ವಿಮರ್ಶಿಸಿದ್ದಾರೆ.

ಚಿ. ನ. ಮಂಗಳ ಒಂದು ಸ್ಮರಣೆ: ಚಿ. ನ. ಮಂಗಳ ಕೇವಲ ೫೯ ವಯಸ್ಸಿನಲ್ಲಿ ಮಡಿದರು. ಈಕೆ ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಒಳ್ಳೆಯ ಕೆಲಸ ಮಾಡಿದ್ದಾರೆ ಎಂದೇ ಈ ಲೇಖನ ಶ್ರದ್ಧಾಂಜಲಿ ರೂಪ ತಳೆಯುತ್ತದೆ.

ಎಂ.ಕೆ. ಇಂದಿರಾ, ಜಯಲಕ್ಷ್ಮೀದೇವಿ, ವಾಣಿ ಈಗ ಬದುಕಿಲ್ಲ. ಅವರ ಜನನ-ಮರಣ ದಿನಾಂಕಗಳನ್ನು ಅವಶ್ಯ ಈ ಪುಸ್ತಕದಲ್ಲಿ ದಾಖಲಿಸಬೇಕಿತ್ತು.

ಜನಪದ ತ್ರಿಪದಿಗಳಲ್ಲಿ ಹೆಣ್ಣು: ಎಂಬ ಲೇಖನದಲ್ಲಿ ಹಳ್ಳಿಯ ಹಾಡು ಜನಪದ ಗೀತೆಗಳು, ಜನಪ್ರಿಯ ತ್ರಿಪದಿ ಇತ್ಯಾದಿ ಪುಸ್ತಕಗಳಿಂದ ಹೆಣ್ಣು ಕೆಲವು ಅಭಿಪ್ರಾಯಗಳ ಜಾನಪದ ಗೀತೆಗಳನ್ನು ಆರಿಸಿ ಹೆಣ್ಣುಗಳ ಭಾವನೆಯ ಬಗೆಯನ್ನು ವಿವರಿಸಿದ್ದಾರೆ.

ಪುಟ ೩೭ ರಲ್ಲಿ

ಹೆಣ್ಣಾಗಿ ಹುಟ್ಟೋದ್ಕಿಂತ ಮಣ್ಣಾಗಿ ಹುಟ್ಟಿದರೆ
ಮಣ್ಣಿನ್ಮೇಲೊಂದು ಮರವಾಗಿ! ಹುಟ್ಟಿದರೆ
ಪುಣ್ಯವಂತರಿಗೆ ನೆರಳಾಗಿ!

ಎಂಬ ಗೀತೆಯಷ್ಟೇ ಇಲ್ಲಿ ಇದೆ. ಮಣ್ಣು ಮರದ ಹುಟ್ಟಿಗೆ ಕಾರಣವಾಗಿ ಜನರಿಗೆ ನೆರಳನ್ನು ಕೊಡಬಲ್ಲುದು. ಅದಕ್ಕಿಂತ ತನ್ನ ಬದುಕು ಕಡೆ ಎನ್ನುವ ಅರ್ಥವಿರುವ ಗೀತೆ ಇದು. ಅನಂತರ 'ಹಂಗಿನ ತವರ ಮನೆ ಸಾಕು' 'ಹಬ್ಬಲಿ ಅವರ ರಸಬಳ್ಳಿ' ಎನ್ನುವುದರ ಬಗ್ಗೆ ಗೀತೆ ಕೊಡದೆ ಅದನ್ನು ವಿವರಿಸಿದ್ದು ಸಮಂಜಸವಾಗಿಲ್ಲ.

ಎಂಬತ್ತರ ದಶಕದ ಮಹಿಳಾಕಾವ್ಯ–ಒಂದು ವಿಮರ್ಶೆ: ಎಂಬತ್ತರ ದಶಕಕ್ಕಿಂತ ಮೊದಲು ಮಹಿಳೆಯರು ಕಾವ್ಯ ರಚನೆಯಲ್ಲಿ ತೊಡಗಿದ್ದು ಬಲು ಕಡಿಮೆ. ಅದರ ಬಳಿಕವೇ ತೊಡಗಿದ್ದು ಎಂದಿದ್ದಾರೆ ಲೇಖಕಿ. ಈ ಅಭಿಪ್ರಾಯ ಇನ್ನಷ್ಟು ಅಧ್ಯಯನ ಬೇಡುತ್ತದೆ.

ಕವಿ ಪುಲ್ಲಿಂಗ: ಮಹಿಳೆಯರನ್ನೇ ಕುರಿತು ಬರೆಯುವಾಗ ಕವಿಯತ್ರಿ ಎಂಬ ಪದ ಅಧಿಕ ಯುಕ್ತವಾಗಿದೆ. ಈ ಲೇಖನದಲ್ಲಿ ಲೇಖಕಿ ಎಲ್ಲಾ ಕಡೆ ಕವಿ ಎಂದೇ ನಮೂದಿಸಿದ್ದಾರೆ. ಸರಳ ಕನ್ನಡ ಶಬ್ದ 'ಸವಾಲು' ಇರುವಾಗ ಲೇಖಕಿ ಆಂಗ್ಲಪದ ಚಾಲೆಂಜ್‌ನ್ನು ತುರುಕಿದ್ದಾರೆ (ಪುಟ ೪೫). ಇದರಲ್ಲಿ ಕೆಲವು ಕವಿಯತ್ರಿಯರ ಕವನಗಳ

ವಿಮರ್ಶೆಗಳಿವೆ. ಹೆಚ್ಚಿನವು ಸಮಾಜದ ಬಗ್ಗೆ ಆಕ್ರೋಶ, ಹೆಣ್ಣಿನ ನೋವು, ಸರಳ ವಿವಾಹ ಇತ್ಯಾದಿಗಳಿಗೆ ಸಂಬಧಪಟ್ಟವು.

ಸಮೂಹ ಮಾಧ್ಯಮ ಮತ್ತು ಮಹಿಳೆ: ಇಪ್ಪತ್ತನೇ ಶತಮಾನದಲ್ಲಿ ನಂಜನಗೂಡು ತಿರುಮಲಾಂಬ 'ಕರ್ನಾಟಕ ನಂದಿನಿ' ಮತ್ತು ಆರ್. ಕಲ್ಯಾಣಮ್ಮ 'ಸರಸ್ವತಿ' ಎಂಬ ಪತ್ರಿಕೆಗಳನ್ನು ಹೊರತಂದು ಮಹಿಳೆಯರ ಪ್ರಗತಿಗಾಗಿ ಶ್ರಮಿಸಿದ್ದು ಶ್ಲಾಘನೀಯ. ಪುಟ ಸಂಖ್ಯೆ ೫೯ ರಲ್ಲಿ "ಪ್ರಾರಂಭದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಅಂಕಣವನ್ನು ಹೊಂದಿದ್ದ ಪತ್ರಿಕೆಗಳು ಇತ್ತೀಚಿನ ವರ್ಷಗಳಲ್ಲಿ ಆದನ್ನು ಕೈಬಿಟ್ಟುವು. ಉದಾ: ಕನ್ನಡಪ್ರಭ, ಪ್ರಜಾವಾಣಿ, ಉದಯವಾಣಿ ಸಂಯುಕ್ತ ಕರ್ನಾಟಕ ಇತ್ಯಾದಿ ದೈನಿಕಗಳು ಮಹಿಳೆಯರಿಗೆ ಸಂಬಂಧಿಸಿದಂತೆ ವಿಶೇಷ ಗಮನವನ್ನೇನೂ ಕೊಡುತ್ತಿಲ್ಲ" ಎಂದಿದ್ದಾರೆ ಲೇಖಕಿ. ಸ್ತ್ರೀಪುರುಷ ಸಮಾನತೆಯೆಂದು ಬಡಿದಾಡಿಕೊಂಡಿರುವಾಗ ಮಹಿಳೆಯರಿಗಾಗಿ ವಿಶೇಷ ಮತ್ತು ಪ್ರತ್ಯೇಕ ಗಮನ ಯಾಕೆ ಕೊಡಬೇಕು? ಮಹಿಳೆಯರ ಬಗ್ಗೆ ವಿಶೇಷ ಲೇಖನ, ಸಂದರ್ಶನ ಇತ್ಯಾದಿ ಕಳುಹಿಸಿದರೆ ಖಂಡಿತಾ ಅಚ್ಚು ಹಾಕಿಯಾರು. ಲೇಖಕಿ ಮುಂದುವರಿದು ಬರೆಯುತ್ತ ಕರ್ಮವೀರ, ತರಂಗ, ಪ್ರಜಾಮತ, ಮಂಗಳ, ಸುಧಾ ಇವೆಲ್ಲ ಮಹಿಳೆಗೆ ಸಂಬಂಧಿಸಿದಂತೆ ಪ್ರಗತಿಪರ ಧೋರಣೆಯುನ್ನುಳ್ಳ ಪತ್ರಿಕೆಗಳಲ್ಲ ಎಂದಿದ್ದಾರೆ. ಈ ವಾರಪತ್ರಿಕೆಗಳಲ್ಲಿ ಮಹಿಳೆಯರ ಬಗ್ಗೆಯೂ ಸಾಕಷ್ಟು ಲೇಖನಗಳು ಬಂದಿವೆ. ಪ್ರಸ್ತುತ ಪ್ರಗತಿಪರ ಧೋರಣೆ ಎಂದರೆ ಏನು?

ಪುಟ ೬೪ ರಲ್ಲಿ ಸಿನಿಮಾರಂಗದಲ್ಲಿ ಮಹಿಳೆಯ ಪಾತ್ರದ ಬಗ್ಗೆ ಬರೆಯುತ್ತ 'ಇತ್ತೀಚೆಗೆ ನಾಯಕಿ ಪ್ರಧಾನ ಚಿತ್ರಗಳು ಕಡಿಮೆಯಾಗುತ್ತಿವೆ. ಆಕೆ ನಾಯಕನ ಮೆರೆತಕ್ಕೆ ಪೂರಕಗಳು' ಎಂದಿದ್ದಾರೆ. ಆದರೆ ಹೆಚ್ಚಿನ ಸಿನೆಮಗಳಲ್ಲಿ ನಾಯಕ ನಾಯಿಕೆಯರಿಗೆ ಸಮಾನ ಪ್ರಧಾನತೆ ಇರುತ್ತದೆ. ಲೇಖಕಿಯರ ದೃಷ್ಟಿಕೋನವೇ ಸರಿಯಲ್ಲ ಎಂದು ಅನ್ನಿಸುತ್ತದೆ.

ಪುಟ ೬೭ ರಲ್ಲಿ ಆಕಾಶವಾಣಿ ಅಥವಾ ದೂರದರ್ಶನಗಳಲ್ಲಿ ಬರುವ ಜಾಹೀರಾತುಗಳು ಮಹಿಳೆಯನ್ನು ಕೆಲವೇ ಕೆಲಸಗಳಿಗೆ ಸೀಮಿತಗೊಳಿಸುತ್ತಿವೆ. ಸೋಪು, ಶಾಂಪೂಗಳನ್ನು ಮಹಿಳೆಯರು ಮಾತ್ರ ಬಳಸುತ್ತಾರೆಯೇ? ಪುರುಷರಿಗೆ ಸ್ವಚ್ಛತೆ ಆವಶ್ಯಕತೆ ಇಲ್ಲವೇ? ಯಾವುದೇ ಸೋಪು ಅಥವಾ ಸೋಪಿನಪುಡಿಯ ಜಾಹೀರಾತಿರಲಿ ಬಟ್ಟೆ ಒಗೆಯುವುದು ಮಾತ್ರ ಮಹಿಳೆಯೇ.... ಈ ಚಿಂತನೆಯೂ ಸರಿಇಲ್ಲ. ಪುರುಷರು ಶಾಂಪೂ ಸೋಪು ಬಳಸುವ ಎಷ್ಟೋ ಜಾಹೀರಾತುಗಳು ಇವೆ. ಈ ಲೇಖನವನ್ನು ಓದಿದಾಗ ಲೇಖಕಿ ತಾನು ಸ್ತ್ರೀವಾದಿ ಎಂದು ತೋರಿಸಲು ಅಸಗತ್ಯ ವಿಷಯಗಳನ್ನು ಹಿಂಜಿದ್ದಾರೆ ಎನಿಸುತ್ತದೆ.

ಅನಂತಮೂರ್ತಿಯವರ ಕಥಾ ಸಾಹಿತ್ಯ : ಒಂದು ಸ್ತ್ರೀವಾದಿ ವಿಶ್ಲೇಷಣೆ. ಇದರಲ್ಲಿ ಅನಂತಮೂರ್ತಿಅವರ ಬ್ರಾಹ್ಮಣ ಸಂಸ್ಕಾರ, ಎರಡು ದಶಕದ ಕಥೆಗಳು, ಭಾರತೀಪುರ, ಅವಸ್ಥೆ, ಭವ ಇತ್ಯಾದಿ ಕಾದಂಬರಿ, ಕತೆಗಳಲ್ಲಿ ಬರುವ ಸ್ತ್ರೀ ಪಾತ್ರಗಳನ್ನು ವಿಶ್ಲೇಷಿಸಿದ್ದಾರೆ. ಎಲ್ಲವೂ ಒಂದೇ ತರಹ. ಇವರ ಕತೆಗಳಲ್ಲಿ ಕಾಮ, ಅಕ್ರಮ ಸಂಬಂಧ ಇಷ್ಟೇ ಇರುವುದು ಸೂತ್ರ ಬಂಧಿತ, ಕೀಳು ಸಾಹಿತ್ಯವೆನ್ನಬಹುದು.

ಅತ್ಯಾಚಾರಕ್ಕೆ ಸಂಬಂಧಿಸಿದ ಕತೆಗಳು– ಕೆಲವು ಟಿಪ್ಪಣಿಗಳು ಮಹಿಳೆಯ ಮೇಲೆ ಅತ್ಯಾಚಾರವಾದಾಗ ಅದನ್ನು ಧೈರ್ಯದಿಂದ ಎದುರಿಸಿ, ಕೀಳರಿಮೆ ಪಡದ, ತನ್ನ ತಪ್ಪು ಇದರಲ್ಲಿ ಏನೂ ಇಲ್ಲವೆಂದೂ ಗಂಡ ತನ್ನನ್ನು ತಿರಸ್ಕರಿಸಿದರೂ ಮುಂದೆ ಆತ್ಮಹತ್ಯೆಗೆ ಶರಣಾಗದೆ ಹೊಸ ಬದುಕು ಪಡೆದು ಸಮಾಜವನ್ನು ಎದುರಿಸಬೇಕೆನ್ನುವ ಅಭಿಪ್ರಾಯ ಕೆಲವು ಲೇಖಕಿಯರ ಹೊಣೆ ಮತ್ತು ಇತರ ಕತೆಗಳು, ಮರುಮದುವೆ, ಹೆಜ್ಜೆ ಮೂಡದ ಹಾದಿಯಲ್ಲಿ ಇತ್ಯಾದಿ ಕತೆಗಳಲ್ಲಿವೆ. ಅಂಥ ಬದಲಾವಣೆಯ ಹಂಬಲವೇ ಈ ಲೇಖಕಿಯರದು ಮತ್ತು ನಮ್ಮ ನಿಮ್ಮೆಲ್ಲರದು ಕೂಡ.

ಸ್ತ್ರೀವಿಶಿಷ್ಟ ಕೃತಿಗಳಾಗಿ ಸೀತೆ ರಾಮ ರಾವಣ ಮತ್ತು ವಿಮುಕ್ತಿ ಇದುವರೆಗೆ ರಾಮಾಯಣ ಕೃತಿಗಳೆಲ್ಲ ಪುರುಷ ದೃಷ್ಟಿಕೋನದಿಂದ ರಚನೆಗೊಂಡಿವೆ. ಆದರೆ ಎಚ್. ವಿ. ಸಾವಿತ್ರಮ್ಮನವರ ಸೀತೆ ರಾಮ ರಾವಣ ಮತ್ತು ವಿಮುಕ್ತಿ ಎಂಬ ಕೃತಿ ಮಹಿಳಾ ದೃಷ್ಟಿಕೋನದಿಂದ ರಾಮಾಯಣವನ್ನು ತೋರಿಸುವ ಮೊದಲ ಪ್ರಯತ್ನ ಎನ್ನಬಹುದು. ಕೌಸಲ್ಯೆ, ಸುಮಿತ್ರೆ, ಕೈಕೆ, ಸೀತೆ, ಮಂಡೋದರಿ ಇತ್ಯಾದಿ ಪಾತ್ರಗಳವರ ಮನೋಭಾವನೆ, ಅವರು ಅನುಭವಿಸಿದ ನೋವು ಎಲ್ಲವನೂ ಈ ಕೃತಿಯಲ್ಲಿ ನಮೂದಿಸಿದ್ದಾರೆ. ಆದರೆ ದಶರಥ, ರಾಮ, ಲಕ್ಷ್ಮಣ, ರಾವಣ ಇಂಥವರ ಪಾತ್ರಗಳನ್ನು ಕಡೆಗಣಿಸಿಲ್ಲ.

ಯಾವುದೇ ಸನ್ನಿವೇಶದಲ್ಲಿಯೂ ಮಹಿಳೆಯ ಆತ್ಮಾಭಿಮಾನಕ್ಕೆ ಧಕ್ಕೆಯಾಗುವುದನ್ನು ಕೌಸಲ್ಯೆ ಸಹಿಸುವುದಿಲ್ಲ. (ಪುಟ ೯೫) ಶಿವಧನುಸ್ಸನ್ನು ಮುರಿದು ಜನಕನ ಮಗಳು ಸೀತೆಯನ್ನು ರಾಮ ಗೆದ್ದಿರುವುದು ತಿಳಿದಾಗ ಆಕೆಗೆ ಸಂತೋಷವಾಗುತ್ತದೆ. ಆದರೆ ಅವಳ ಆಲೋಚನಾ ಸರಿ ಬೇರೆ ದಿಕ್ಕಿಗೆ ಸಾಗುತ್ತದೆ. "ಹೀಗೆಲ್ಲ ಹುಡುಗಿಯರ ಜೀವನದೊಂದಿಗೆ ಆಟವಾಡುವುದು ಈ ಕ್ಷತ್ರಿಯರಿಗಿರುವ ತೊಂದರೆ. ರಾಮ ಬಿಲ್ಲು ಮುರಿದ, ಸರಿಹೋಯಿತು. ಆದರೆ ಬೇರೆ ಯಾರಾದರೂ ರಾಕ್ಷಸರಾಜರು ಈ ಕೆಲಸ ಮಾಡಿದ್ದರೆ ಆ ಹುಡುಗಿ ಅವನ ಕೈಹಿಡಿದು ಜೀವನವೆಲ್ಲ ನವೆಯಬೇಕಾಗಿತ್ತು." ಎಂದು ಕೌಸಲ್ಯೆ ಆ ಕ್ರಮವನ್ನು

ಟೀಕಿಸುತ್ತಾರೆ. ಹೀಗೆ ಪ್ರತಿಯೊಂದು ಸನ್ನಿವೇಶವನ್ನೂ ಚಂದ್ರಮತಿಯವರು ಓದಿ ಮನನ ಮಾಡಿ ಎಳೆಎಳೆಯಾಗಿ ಆಕೃತಿಯನ್ನು ವಿಮರ್ಶಿಸಿ ಈ ಲೇಖನ ತಯಾರಿಸಿದ್ದಾರೆ. ಇಂದೊಂದೇ ಲೇಖನ ಪ್ರಸಕ್ತ ಪುಸ್ತಕಕ್ಕಾಗಿ ತಯಾರಾದದ್ದು.

ಇಡೀ ಹೊತ್ತಗೆಯಲ್ಲಿ ಜಯಲಕ್ಷ್ಮಿಯವರ ಕಥನಲೋಕ, ಒಂದು ಅವಲೋಕನ ಸೀತೆ ರಾಮ ರಾವಣ ಮತ್ತು ವಿಮುಕ್ತಿ ಲೇಖನಗಳು ಮಾತ್ರ ಹೆಚ್ಚು ಪರಿಣಾಮಕಾರಿಯಾಗಿವೆ.

೧೯೯೭ನೆಯ ಡಿಸೆಂಬರ್ ತಿಂಗಳ ೧೧ರಿಂದ ೧೪ರ ತನಕ ನಡೆದ ಅಖಿಲ ಭಾರತ ಅರುವತ್ತೇಳನೆ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅನುದಾನದಿಂದ ಈ ಪುಸ್ತಕ ಮುದ್ರಿತಗೊಂಡಿದೆ.

ರುಕ್ಮಿಣಿಮಾಲಾ
ಮನೆ ಸಂಖ್ಯೆ ೮, ಅತ್ರಿ, ಕಾಮಾಕ್ಷಿ ಆಸ್ಪತ್ರೆರಸ್ತೆ,
ಸರಸ್ವತೀಪುರ, ಮೈಸೂರು ೫೭೦ ೦೦೯

———



ಪ್ರತಿಯೊಂದು ಅಸ್ವಾಸ್ಥ್ಯಕ್ಕಾಗಿ ವೈದ್ಯರೆಡೆಗೆ ಓಡಬೇಡ. ಪ್ರತಿಯೊಂದು ನ್ಯಾಯಕ್ಕಾಗಿ ವಕೀಲರೆಡೆಗೆ ಹೋಗಬೇಡ. ಪ್ರತಿಯೊಂದು ತೃಷೆಗಾಗಿ ನೀರಿನ ಕೊಡದೆಡೆಗೆ ಹೋಗಬೇಡ.

—ಜಾರ್ಜ್ ಹರ್ಬರ್ಟ್

ಓದುಗರ ಅನಿಸಿಕೆ

ನೀವು ಅಭಿಮಾನಪೂರ್ವಕ ಕಳುಹಿಸಿರುವ 'ಪುಸ್ತಕ ಪ್ರಪಂಚ' ಪುಸ್ತಕದ ಅಕ್ಟೋಬರ್ ತಿಂಗಳ ಸಂಚಿಕೆ ತಲುಪಿರುತ್ತದೆ ಅಭಿನಂದನೆಗಳು.
ಶ್ರೀ ಮಂಜುನಾಥ ಸ್ವಾಮಿಯು ಅನುಗ್ರಹವಿರಲಿ.

ಇತಿ

ಶ್ರೀ ಧರ್ಮಸ್ಥಳ — ಡಿ. ವೀರೇಂದ್ರ ಹೆಗಡೆಯವರು
ತಾರೀಕು ೨೭–೧೦–೯೯

ಸಂಪಾದಕರಿಗೆ,
ಪುಸ್ತಕ ಪ್ರಪಂಚ

ಮಾನ್ಯರೆ,

ನನ್ನ ಲೇಖನ 'ಮಾಂಗಲ್ಯ ತಂತು ನಾನೇನ'ವನ್ನು ತಮ್ಮ ಸಂಚಿಕೆಯಲ್ಲಿ ಪ್ರಕಟಿಸಿದ್ದೂ ಅಲ್ಲದೆ, ಸೂಕ್ತ ಸಂಭಾವನೆಯನ್ನೂ ಕಳುಹಿಸಿ ಗೌರವಿಸಿದ್ದೀರಿ ವಂದನೆಗಳು.

ಮಂಗಳೂರು–೫೭೫ ೦೦೬ — ವಿಶ್ವಾಸದಿಂದ
ದಿನಾಂಕ ೨೬–೧೦–೯೯ — ಮನೋರಮಾ ಎಂ. ಭಟ್

ಮಾನ್ಯರೆ,

'ದೇಜಗೌ' ರವರು ಪುಸ್ತಕ ಪ್ರಪಂಚದ ಸಂಪಾದಕ ಮಂಡಳಿಯಲ್ಲಿ ಮುಂದುವರೆದಿರುವುದು ಸಂತಸದ ವಿಚಾರ. ಅಕ್ಟೋಬರ್ ೯೯ ರ ಮುಖಪುಟದಲ್ಲಿ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ ಮುಖ್ಯಗೋಪುರ ಹಾಗೂ ಹಿಂಬದಿಯಲ್ಲಿ ಮೈಸೂರು ಅರಮನೆಯ ಉತ್ತರ ದ್ವಾರದ ಚಿತ್ರ ದಸರಾ

ಸಮಯಕ್ಕೆ ಶೋಭೆ ತರುವಂತಹದಾಗಿದ್ದು, ನಿಮ್ಮ ಆಯ್ಕೆಗೆ ಕೃತಜ್ಞತೆಗಳು. ದೇಜಗೌ ಅವರ ಭಾಷಣ ಓದಿ, ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ ಅನುಭವವಾಯಿತು. ಚಿಕ್ಕದಾದರೂ ಇತಿಹಾಸ ನಿರ್ಮಾಪಕ ಗೋಪಾಲಗೌಡ ಶಾಂತವೇರಿ ಲೇಖನ ಉತ್ತಮವಾಗಿ ಮೂಡಿಬಂದಿದೆ. ಒಬ್ಬ ಬಾಲವಿಜ್ಞಾನಿಯ ರೋಮಾಂಚಕ ಕಥೆ, ಭೂಮಂಡಲ ಬೆಚ್ಚಗಾಗುತ್ತಿದೆ ಎಚ್ಚರಿಕೆಯಂತಹ ವೈಜ್ಞಾನಿಕ ಲೇಖನಗಳು ಹಾಗೂ ಬೆಲೆಯೇರಿಕೆಯಂತಹ ವಿಡಂಬನಾತ್ಮಕ ಲೇಖನಗಳು ಪುಸ್ತಕಕ್ಕೆ ಶೋಭೆ ತಂದಿವೆ. ಇದಕ್ಕಾಗಿ ಸಂಪಾದಕ ಮಂಡಲಿಗೆ ಚಿರಋಣಿ.

ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ — ಜಿ. ಧನಂಜಯ ದರಸಗುಪ್ಪೆ

ಮಾನ್ಯ ಸಂಪಾದಕರಿಗೆ ವಂದನೆಗಳು

ಅಕ್ಟೋಬರ್ ಸಂಚಿಕೆಯಲ್ಲಿ ಮಾನ್ಯ ಶ್ರೀ ಎಸ್. ನಿಜಲಿಂಗಪ್ಪನವರನ್ನು ಕುರಿತು ದೇಜಗೌ ಅವರು ಬರೆದಿರುವ ಪುಸ್ತಕದ ವಿಮರ್ಶೆಯನ್ನು ಪುಸ್ತಕ ಪ್ರಪಂಚದಲ್ಲಿ ಜಿ. ಟಿ. ನಾರಾಯಣರಾವ್ ಅವರು ತುಂಬಾ ಚೆನ್ನಾಗಿ ಮಾಡಿ ಕೊಟ್ಟಿದ್ದಾರೆ. ಇದರಿಂದ ಅವರ ಜೀವನ ಚರಿತ್ರೆ ಓದಬೇಕೆಂಬ ತುಡಿತ ಉಂಟಾಗಿದೆ. ಇದಕ್ಕಾಗಿ ಜಿ. ಟಿ. ನಾರಾಯಣರಾವ್ ಅವರಿಗೆ ವಂದನೆಗಳು.

೩೦–೧೦–೯೯

ಇತಿ ನಿಮ್ಮ
ಎಂ. ಜಿ. ದಿಗಂಬರಮಠ
ನೆಗಳೂರು, ಹಾವೇರಿ ತಾ||

ಮಾನ್ಯ ಸಂಪಾದಕರು

ಅಕ್ಟೋಬರ್ ೧೯೯೯ ರ ಸಂಚಿಕೆ ಕೈಸೇರಿತು. ವಿವಿಧ ಲೇಖನಗಳು ಚೆನ್ನಾಗಿವೆ. ಅದರಲ್ಲೂ ಪ್ರಧಾನ ಸಂಪಾದಕರಾದ ಶ್ರೀ ದೇಜಗೌ ಬರೆದಿರುವ ಶಾಂತವೇರಿ ಗೋಪಾಲಗೌಡರ ಕುರಿತ ಲೇಖನ ಮನೋಜ್ಞವಾಗಿದೆ. ಈ ಸಾರಿಯ ಮುಖಪುಟಕ್ಕೆ ಗೋಪಾಲಗೌಡರ ಭಾವಚಿತ್ರ ಮುದ್ರಿಸಿದ್ದರೆ ಚೆನ್ನಾಗಿರುತ್ತಿತ್ತು. ಮುಂದಿನ ದಿನಗಳಲ್ಲಿ ಹಬ್ಬಗಳು, ಜಾತ್ರೆಗಳು ಮುಂತಾದುವುಗಳ ಬಗ್ಗೆ ಬೆಳಕು ಚೆಲ್ಲುವಂಥ ಲೇಖನಗಳು ಹೊರಬರಲೆಂದು ಪ್ರಾರ್ಥಿಸುತ್ತೇನೆ.

ತಮ್ಮ ವಿಶ್ವಾಸಿ
ಸಿಂ. ಲಿಂ. ನಾಗರಾಜ್

ಸಿಂಗರಾಜಪುರ
ಚನ್ನಪಟ್ಟಣ ತಾಲ್ಲೂಕು

"ಪುಸ್ತಕ ಪ್ರಪಂಚ" ಅಕ್ಟೋಬರ್ ೧೯೯೯—ಕುರಿತು
(ಈಸಲ ವಿಶೇಷಗಮನ ಹೋಗುವುದು ಪುಸ್ತಕ-ಪರಿಚಯ ವಿಭಾಗಕ್ಕೆ)

"ಪ್ರತಿಭೆಯೊಂದಿರಬೇಕು, ವ್ಯುತ್ಪನ್ನಮತಿ ಬೇಕು,
ಅಭ್ಯಾಸ ಗುರುಸೇವೆ ಬೇಕು.
ಈ ಹಳಿಯ ಪಟ್ಟಿಗಿನ್ನೊಂದು ಸೇರಿಸಬೇಕು,
ಕವಿಗೆ ಜಾಹೀರಾತು ಬೇಕು"

ಎಂದು ಓದಿದಾಗ ಕವಿಗಳಿಗೆ—ಸಾಹಿತಿಗಳಿಗೆ, ಅವರ ಕೃತಿಗಳಿಗೆ ಜಾಹೀರಾತು ಏಕೆ ಬೇಕು? ಎಂದು ಅನಿಸಿತ್ತು. ಆದರೆ ಪರಿಚಯ, ಪ್ರಚಾರ, ಜಾಹೀರಾತು ಇರದೆ ಯಾರೂ ಮೂಲ ಪುಸ್ತಕಗಳನ್ನು ಓದುವುದಿಲ್ಲೆಂದು, "ಕರ್ನಾಟಕದ ರೂವಾರಿ" "ವಿಶ್ವದ ಕಥೆ"ಗಳ ಪರಿಚಯ ಓದಿದಾಗ ಮನದಟ್ಟಾಯಿತು.

ರತ್ನಪರೀಕ್ಷೆಗೆ ರತ್ನ ಪರೀಕ್ಷಕರೇ ಬೇಕು. ಶ್ರೀ ದೇಜಗೌರವರ ಕೃತಿ-ರತ್ನ "ಕರ್ನಾಟಕದ ರೂವಾರಿ" ಯ ಪರಿಚಯಕ್ಕೆ ಶ್ರೀ ಜಿ.ಟಿ. ಎನ್. ರವರೇ ಬೇಕು.

ತತ್ವ—ನಿಷ್ಠೆ ಮತ್ತು ಬಹುಶ್ರುತತೆ ನಿಜಲಿಂಗಪ್ಪನವರಿಗೆ ಪರಿಣಾಮಕಾರಿ ಧುರೀಣತ್ವ ಒದಗಿಸಿದವು. ರಾಷ್ಟ್ರ ಪ್ರೇಮ, ಆರ್ಜವ, ವೈಚಾರಿಕತೆ, ಕ್ರಿಯಾ—ಶೀಲತೆ ಮತ್ತು ಜೀವ ಕಾರುಣ್ಯಗಳೆಂಬ ಪಂಚಶೀಲಗಳು, ಅವರಿಗೆ ಪಾರದರ್ಶಕ ಮತ್ತು ಆಕರ್ಷಕ ವ್ಯಕ್ತಿತ್ವವನ್ನು ರೂಪಿಸಿದವು. ಶೀಲದ ಪರಿಮಳ ವಿನಯ, ವಿನಯದ ತಳಹದಿ ಶೀಲ, ಶೀಲ ವಿನಯಗಳ ಸಮ್ಮಿಲವೇ ಋಜು ವ್ಯಕ್ತಿತ್ವ- ಈ ಸೂಕ್ತಿಗೆ ಶ್ರೀ ನಿಜಲಿಂಗಪ್ಪನವರ ಜೀವನ ಮತ್ತು ಸಾಧನೆ ದಿವ್ಯ ನಿದರ್ಶನವೆಂದು ತಿಳಿಸಿ, ಇಡೀ ಪುಸ್ತಕವನ್ನೇ ಓದುವಂತೆ ಮಾಡಿದ್ದಾರೆ ಶ್ರೀ ಜಿ. ಟಿ. ಎನ್‌ರವರು. ಮುಖ್ಯವಾಗಿ, ಪುಸ್ತಕ ಬರೆದವರ ಶೈಲಿಯ ವಿಷಯಕ್ಕೆ ವಿವರಿಸುತ್ತ, "ಇದೊಂದು ಉತ್ಕೃಷ್ಟ ಜೀವನ ಚರಿತ್ರೆಯಾಗಿ ಮಾತ್ರವಲ್ಲ, ಶ್ರೇಷ್ಠ ಗದ್ಯ—ಕಾವ್ಯವಾಗಿ ಕೂಡ ಓದುಗನಿಗೆ ಪ್ರಿಯವಾಗುತ್ತದೆಂದೂ" ಹೇಳಿದ್ದಾರೆ. ಹೀಗಾಗಿ "ಕರ್ನಾಟಕದ ರೂವಾರಿ" (ಶ್ರೀ ಎಸ್. ಎನ್) ಮತ್ತು 'ಕನ್ನಡದ ರೂವಾರಿ', (ಶ್ರೀ ದೇಜಗೌ) ಇಬ್ಬರ ವಿಷಯಕ್ಕೂ ಗೌರವ ಭಾವನೆ ಮೂಡಿಸಿ, ಮೂಲ ಪುಸ್ತಕ ಓದುವತ್ತ ಮನಸ್ಸನ್ನು ಸೆಳೆದಿದ್ದಾರೆ ಶ್ರೀ ಜಿ. ಟಿ. ಎನ್ ಅವರು.

ಇನ್ನು "ವಿಶ್ವದ ಕಥೆ"ಯ ಬಗ್ಗೆ, ಶ್ರೀ ಜಿ.ಟಿ.ಎನ್. ಅವರು ಗಳಿಸಿದ ಅಪಾರ ವೈಜ್ಞಾನಿಕ ಜ್ಞಾನದ ಸಣ್ಣ ತುಣುಕು "ವಿಶ್ವದ ಕಥೆ" ಎಂದು ಡಾ॥ ಮಂಜುಳಾ ಹುಲ್ಲಹಳ್ಳಿಯವರು ತಿಳಿಸಿ, 'ವಿಶ್ವದ ಕಥೆ' ಯಲ್ಲಿರುವ

ಅಗಾಧ ವಿಸ್ಮಯಕಾರಿ ವಿಷಯಗಳನ್ನು ಬಿಡಿ ಬಿಡಿಯಾಗಿ, ಪದರು ಪದರಾಗಿ ಬಿಡಿಸಿ, ಎದುರಿಗಿಟ್ಟಾಗ; ಮೂಲ ಪುಸ್ತಕ ತಕ್ಷಣ ಕೊಂಡು ಓದಬೇಕೆಂದೆನಿಸುವುದು.

ಇಂಥ ಪುಸ್ತಕಗಳಿಗೆ ಓದುವವರ ಗಮನ ಸೆಳೆಯಲು ಈ ರೀತಿಯ ಪುಸ್ತಕ ಪರಿಚಯದ ಪ್ರಚಾರ, ಜಾಹೀರಾತು ಬೇಕೇ ಬೇಕು.

—ಮಾಧವರಾವ್ ಮುಧೋಳ್

ಶ್ರೀರಾಂಪುರ
ಮೈಸೂರು–೨೩

ಪುಸ್ತಕ ಪ್ರಪಂಚ—ದೇಜಗೌ ವಿಶೇಷ ಸಂಚಿಕೆಯನ್ನು ಕುರಿತು
ದಿನಾಂಕ ೪–೧೦–೯೯ ರ 'ದಿ ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾದ
ಶ್ರೀ ಸಿ. ಎಚ್. ಪ್ರಹ್ಲಾದರಾವ್ ಅವರ ಲೇಖನ.

To my correspondent in Mysore, who insists on anonymity, I owe a discovery: Dejagow, as Dr. D. Javare Gowda is known. But the question is, how well is he known outside the academic circle in Mysore? Looking at "Pustaka Prapancha," the special issue to mark yet another landmark in his life, (two top literary awards have been conferred on Dejagow) one cannot escape the irony that if an outstanding man of letters, a self-made man, a man of vision and action, who deserves to be known as Indian writer, remains unknown outside the Kannada country, it is by our default.

That Dejagow is a resipient of the Soviet Land award, that in Kerala he has a presence (he presided over a conference of writers from the South; he is a senior fellow of the Academy for Promotion of Science in Southern Languages), that he is associated with the Indo-Danish Centre for Cultural Exchange, among others, is beside the point. Much as we may love Kannada, we may not neglect English as a window on the world at large: It serves as an exchange: as we learn about others, others wish to learn about us. If we condemn ourselves to isolation, we are the losers.

Dejagow's story is a variant of the better known story, from the log cabin to the White House. In his autobiography (I remember reading "Horatada Baduku," years

ago) he records the long journey from his first days in a village school to the Maharaja's College, which eventually became the theatre of activity. Kannada was his love, and Dr. K. V. Puttappa, who was more than a teacher, a guide and inspiration, later became a cause to adopt for life. As an academic, he looks back on a long and varied career. For sheer versatility, he has perhaps no equal.

Consider this. Many would be content to make a mark as teacher, some may choose writing as a second string to the bow; but few indeed there are, who dare to dream and possess the passion to translate them into reality. Dejagow is among the small minority. Kuvempu was his life-long passion; the institutions in his name tell a golden story; his association with them spans three decades. And his writing touches every form—the essay, biography, travelogue, letters, translation, among others. His journalism, chiefly in "Pustaka Prapancha," adds up to an impressive record.

Dejagow's connection with "Pustaka Prapancha" is as old as 1946; since 1977 he was the Chief Editor. The twin awards instituted in honour of Pampa brought him face to face with a dilemma. Each award had served as an occasion for a special issue.

But, Dejagow would not hear of a special issue now, as he was Chief Editor; it was a matter of propriety. The question was finally resolved: A special issue without Dejagow as Chief Editor for the number. He insisted that it carry his letter to make his point.

It was his association with the "Kannada Encyclopedia" that brought out the best in Dejagow. It was his dream; as Editor, he not only planned but execuited it. He had a hawk's eye for talent. A hard taskmaster, he set impossible deadlines. In this task he carried the Government with him. Its success was a miracle, a product of team work. Is there, one wonders, a more creative way of celebrating one's 80 years ?

C.H. Prahlada Rao

Reg. No. KRNN-29 WPP 6

LICENCE No. 21
LICENCED TO POST WITH PAYMENT

Edited by Chandrashekhararadhya Printed by Papanna
Printed & Published by Karnataka State Adult Education Council
8/1 Vinoba Road, Manasa Gangothri. Mysore-570 006.